# ಸಕಾಲ ಸೇವೆಗಳ ಅಧಿನಿಯಮ 2011

## ವರದಿ

## ಜನವರಿ - 2013



ರಾಜ್ಯ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ - 2012 - 13

**ಇಂದು... ನಾಳೆ... ಇನ್ನಿಲ್ಲ, ಹೇಳಿದ ದಿನ ತಪ್ಪೊಲ್ಲ**

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)**

ಕರೆ ಕೇಂದ್ರ : 080 - 4455 4455, ವೆಬ್‌ಸೈಟ್ : sakala.kar.nic.in ಇ-ಮೇಲ್ : sakala@nic.in

# ಸಕಾಲ ಸೇವೆಗಳ ಅಧಿನಿಯಮ 2011

## ಜನವರಿ ೨೦೧೩ ಮಾಹೆಯ ಕಾರ್ಯಪ್ರಗತಿ ವರದಿ

# ಅನುಕ್ರಮಣಿಕೆ


| | | |
|---|---|---|
| | ಮಾನ್ಯ ಮುಖ್ಯ ಮಂತ್ರಿಗಳಿಂದ ಸಂದೇಶ | |
| | ಮಾನ್ಯ ಕಾನೂನು ಮಂತ್ರಿಗಳಿಂದ ಸಂದೇಶ | |
| 1 | ಅಧ್ಯಾಯ – 1 – ಮಂಡಳಿಯ ನಿರ್ದೇಶಕರ ಮೇಜಿನಿಂದ | 1 |
| 2 | ಅಧ್ಯಾಯ – 2 – ತಿಂಗಳ ಅಂಕಿ–ಅಂಶಗಳು | 4 |
| 3 | ಅಧ್ಯಾಯ – 3 – ಭಾಗ ಎ – ಜಿಲ್ಲಾವಾರು ಕಾರ್ಯ ಪ್ರಗತಿ ವಿವರಗಳು<br>ಭಾಗ–ಬಿ – ಬೈಪಾಸ್ | 13 |
| 4 | ಅಧ್ಯಾಯ – 4 – ಭಾಗ ಎ – ಮರುಸ್ಪಂದನಾ<br>ಭಾಗ ಬಿ – ಕ್ಷೇತ್ರ ವರದಿಗಳು | 25 |
| 5 | ಅಧ್ಯಾಯ – 5 – ಕರೇಕೇಂದ್ರದಿಂದ ವರದಿ | 34 |
| 6 | ಅಧ್ಯಾಯ – 6 – ಸಕಾಲದಲ್ಲಿನ ನಾವಿನ್ಯತೆ | 38 |
| 7 | ಅಧ್ಯಾಯ – 7 – ಘಟನಾವಳಿಗಳು ಮತ್ತು ಪತ್ರಿಕವರದಿ ಪ್ರಕಟಣೆಗಳು | 44 |

ಜಗದೀಶ ಶೆಟ್ಟರ
ಮುಖ್ಯ ಮಂತ್ರಿಗಳು

ವಿಧಾನ ಸೌಧ
ಬೆಂಗಳೂರು - 560 001

ದಿನಾಂಕ ..............................

# ಸಂ ದೇ ಶ

ಕರ್ನಾಟಕದ ಚರಿತ್ರೆಯಲ್ಲೇ ವಿನೂತನವಾದಂತಹ, ತಮ್ಮ ಕರ್ತವ್ಯದ ಕರೆಗಳಿಂದ ಮುಂದಕ್ಕೆ ಹೆಜ್ಜೆ ಇಟ್ಟು ನಾಗರಿಕರಿಗೆ ಸೇವಾ ಪೂರೈಕೆಯಲ್ಲಿ ಆವಿಷ್ಕಾರಗಳನ್ನು ಕಂಡುಕೊಂಡವರಿಗೆ ಪ್ರಶಸ್ತಿಗಳನ್ನು ರೂಪಿಸಲಾಯಿತು. ಈ ವರ್ಷ ಪರಿಚಯಿಸಲಾಗಿರುವ ಸರ್ವೋತ್ತಮ ಪ್ರಶಸ್ತಿಯನ್ನು ಘನತೆವೆತ್ತ ರಾಜ್ಯಪಾಲರ ಜೊತೆಗೆ ನಾನು ಸಹಭಾಗಿಯಾಗಿ ಗಣರಾಜ್ಯೋತ್ಸವ ದಿನದಂದು ರಾಜ್ಯಭವನದಲ್ಲಿ ನಡೆದ ಘನ ಕಾರ್ಯಕ್ರಮವೊಂದರಲ್ಲಿ ಹಸ್ತಾಂತರಿಸಲಾಯಿತು. ಪ್ರಶಸ್ತಿಗೆ ಭಾಜನರಾದವರಲ್ಲಿ ರಾಜ್ಯಮಟ್ಟದ ವಿವಿಧ ವರ್ಗದ ಸರ್ಕಾರಿ ಅಧಿಕಾರಿಗಳು/ ಸಿಬ್ಬಂದಿಗಳು ಒಳಗೊಂಡಿದ್ದರು.

ಪ್ರಶಸ್ತಿ ವಿಜೇತರು ಸ್ವಪ್ರೇರಿತ ವ್ಯಕ್ತಿಗಳಾಗಿದ್ದು ಉತ್ಕಟಭಾವದಿಂದ ನಾಗರಿಕರಿಗೆ ಕೇವಲ ಸೇವೆ ಸಲ್ಲಿಸಿದುದಲ್ಲದೆ, ಸಾರ್ವಜನಿಕರಲ್ಲಿ ಸರ್ಕಾರದ ಕಛೇರಿಗಳ ಬಗೆಗಿನ ದೃಷ್ಟಿಕೋನವನ್ನು ಉತ್ತಮಪಡಿಸಿದ್ದಾರೆ. ಸರ್ಕಾರವು ಕೈಗೊಂಡಿರುವ ನಾಗರಿಕ ಕೇಂದ್ರಿತ ಸೇವಾ ಪ್ರಕ್ರಿಯೆಗಳ ಬಗ್ಗೆ ಘನತವೆತ್ತ ರಾಜ್ಯಪಾಲರು ಹರ್ಷ ವ್ಯಕ್ತಪಡಿಸಿದ್ದಾರೆ.

ಸರ್ಕಾರದ ಕೆಲಸವೆಂದರೆ 'ಕೃತಜ್ಞತೆಯಿಲ್ಲದ ಕಾಯಕ'ವೆಂಬ ಮಾತನ್ನು ಆಗಾಗ ಕೇಳಿದ್ದೇವೆ, ಅದನ್ನು ಹುಸಿಗೊಳಿಸುವ ಕಾರ್ಯಕ್ರಮವಿದು – ಪ್ರಶಸ್ತಿಯು ನಮ್ಮ ಹೃದಯಾಂತರಾಳದಿಂದ ನಿಷ್ಠಾವಂತ ಸರಕಾರಿ ಸಿಬ್ಬಂದಿಗಳಿಗೆ ಧನ್ಯವಾದ ಅರ್ಪಿಸುವುದಕ್ಕಾಗಿದೆ. ಪ್ರತಿಯೋರ್ವರು ಇನ್ನೂ ಹೆಚ್ಚಿನವರಿಗೆ ದಾರಿದೀಪವಾಗುತ್ತಾ ಅವರು ಉತ್ತಮ ಸೇವೆ ನೀಡಲು ಪ್ರೇರಕವಾಗುವಂತೆ ಹಾಗೂ ಮುಂದಿನ ವರ್ಷದಲ್ಲಿ ಪ್ರಶಸ್ತಿಗೆ ಪಾತ್ರರಾಗುವಂತೆ ಆಶಿಸುತ್ತೇವೆ.

ಆರಂಭದಲ್ಲಿ ನಾವು ಕೇವಲ 3 ಜನ ರಾಜ್ಯ ಮಟ್ಟದ ಅಭ್ಯರ್ಥಿಗಳ ಬಗ್ಗೆ ಯೋಚಿಸಿದ್ದೆವು, ಆದರೆ 10 ಅಭ್ಯರ್ಥಿಗಳ ಸಾಧನೆ ಪ್ರಶಸ್ತಿ ಪಡೆಯಲು ಅರ್ಹವಿತ್ತು. ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾ ಮಟ್ಟದಲ್ಲಿ 6 ಪ್ರಶಸ್ತಿ ವಿಜೇತರಿಗೆ ಸರ್ವೋತ್ತಮ ಪ್ರಶಸ್ತಿಗಳನ್ನು ನೀಡಿರುತ್ತಾರೆ. ನಿಮ್ಮಲ್ಲಿ ಇನ್ನೂ ಹೆಚ್ಚು ಹೆಚ್ಚಿನ ಜನರು ಪ್ರಶಸ್ತಿ ಗಿಟ್ಟಿಸಿಕೊಳ್ಳುವುದರ ಜೊತೆಗೆ, ರಾಜ್ಯ ಹಾಗೂ ರಾಷ್ಟ್ರಕ್ಕೂ ಗರಿಯನ್ನು ಮೂಡಿಸುವಂತಾಗಲಿ.

ದೂರದ ಗ್ರಾಮದಲ್ಲಿರುವ ಪ್ರತಿಯೋರ್ವ ನಾಗರೀಕನು ಸಕಾಲ ಅಧಿನಿಯಮದ ಬಗ್ಗೆ ಜಾಗೃತನಾಗಿದ್ದು ಸರಕಾರದ ಸೇವೆಗಳನ್ನು ಅನುಭವಿಸುವ ಸವಲತ್ತುಗಳನ್ನು ಯಾವುದೇ ಅಡಚಣೆಯಿಲ್ಲದೆ ಪಡೆದುಕೊಳ್ಳುವಂತೆ ನಾವು ಬಯಸುತ್ತೇವೆ.

(ಜಗದೀಶ್ ಶೆಟ್ಟರ)
ಮುಖ್ಯ ಮಂತ್ರಿ



# ಸಂದೇಶ

ಸಕಾಲ ಸೇವೆಗಳ ವಿಲೇವಾರಿ ಪ್ರಗತಿಯು ಅಭಿವೃದ್ದಿ ಹೊಂದುತ್ತಿದೆ ಎಂದು ಗಮನಿಸಲು ಸಂತೋಷವಾಗುತ್ತಿದೆ. ನಾವು ಶೀಘ್ರಗತಿಯ ವಿಲೇವಾರಿ, ಬಾಕಿ ಪ್ರಕರಣಗಳ ಇಳಿಕೆ, ತಿರಸ್ಕೃತಗೊಳ್ಳುವ ಅರ್ಜಿಗಳ ಸಂಖ್ಯೆಯಲ್ಲಿ ಇನ್ನಷ್ಟು ಇಳಿಕೆ – ಇತ್ಯಾದಿಗಳು ತಿಂಗಳಿಂದ ತಿಂಗಳಿಗೆ ಸುಧಾರಣೆ ಆಗುತ್ತಿದೆ. ಹೆಚ್ಚಿನ ಸೇವೆಗಳನ್ನು ಸೇರಿಸಿದ ನಂತರ ಸಕಾಲೇತರ ದೂರುಗಳ ಸಂಖ್ಯೆಯು ಕಡಿಮೆ ಆಗಿವೆ. ಸಕಾಲ ಕಾರ್ಯಕ್ರಮಗಳು ಪ್ರಬುದ್ದಾವಸ್ಥೆಗೆ ತಲುಪುತ್ತಿರುವಂತೆ ಇವುಗಳೆಲ್ಲಾ ಸಕಾರಾತ್ಮಕ ಹೊನಲುಗಳಾಗಿವೆ.

ಸಕಾಲಕ್ಕೆ ಎಲ್ಲಾ ವಲಯಗಳಿಂದಲೂ ಪ್ರಶಂಶೆಗಳು ಬರುತ್ತಿದೆ. ಇತರ ರಾಜ್ಯಗಳು ನಮ್ಮನ್ನು ಮಾರ್ಗದರ್ಶಿಯಾಗಿ ನೋಡುತ್ತಾ ನಮ್ಮ ಮಾದರಿಯನ್ನು ಅನುಕರಿಸಿವೆ ಮತ್ತು ಇತರೆ ರಾಜ್ಯಗಳು ಇಂತಹುದೇ ಯೋಜನೆಗಳನ್ನು ಅವರ ರಾಜ್ಯಗಳಲ್ಲಿ ಅನುಷ್ಠಾನಗೊಳಿಸಲು ಸಲಹೆ ಸೂಚನೆಗಳನ್ನು ಪಡೆದಿರುತ್ತಾರೆ. ಈ ತಿಂಗಳಲ್ಲಿ ನಮ್ಮಿಂದ ಮಾರ್ಗದರ್ಶನ ಪಡೆದುಕೊಳ್ಳಲು ಹಲವಾರು ಅತಿಥಿಗಳು ಭೇಟಿ ನೀಡಿರುತ್ತಾರೆ. ನಮ್ಮ ಪ್ರಗತಿಯನ್ನು ಕಾಲ ಕಾಲಕ್ಕೆ ಪರಾಮರ್ಶಿಸುತ್ತ ನಿರಂತರವಾಗಿ ಉತ್ತಮಪಡಿಸುತ್ತಾ **ನಾವು ನಂಬರ್ 1 ನೇ ಸ್ಥಾನದಲ್ಲಿದ್ದೇವೆ.**

ಈ ವರ್ಷದಲ್ಲಿ ಕರ್ನಾಟಕ ಉಚಿತ ಕಾನೂನು ಸೇವೆಗಳ ಪ್ರಾಧಿಕಾರವು ಸಕಾಲ ಅಧಿನಿಯಮದ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಒಪ್ಪಿಕೊಂಡಿದೆ. ನಾಗರಿಕರು ಈ ಕಾಯಿದೆಯ ಬಗ್ಗೆ ಅರಿತುಕೊಳ್ಳದಿದ್ದರೇ ಇದು ಕೇವಲ ಕಾಯಿದೆಯಾಗಿ ಕಾಗದದಲ್ಲಷ್ಟೇ ಉಳಿದುಬಿಡುತ್ತದೆ.

ಮಾರ್ಚ್ ತಿಂಗಳ ಕೊನಗೆ ಸೇವಾ ಕೋರಿಕೆಯನ್ನು ಆನ್ ಲೈನ್ ಆಗಿ ಪರಿವರ್ತಿಸಲು ರಾಜ್ಯ ಸಭೆಯ ಸಂಪುಟವು ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಎಲ್ಲಾ ಇಲಾಖೆಗಳು ಎನ್.ಐ.ಸಿ. ಯ ಸಹಾಯ ಪಡೆದು ಕಾರ್ಯತತ್ಪರರಾಗುವಂತೆ ಒತ್ತಿ ಹೇಳುತ್ತಿದ್ದೇವೆ (ಎನ್.ಐ.ಸಿ. ನಮ್ಮ ಕಾರ್ಯಕ್ರಮಗಳನ್ನು ಸಾಕ್ಷಾತ್ ಕಾರಗೊಳಿಸುವಲ್ಲಿ ಸದಾ ನಮ್ಮೊಂದಿಗಿದ್ದು ನಾವು ಕೋರಿದ ಯಾವುದೇ ಸಹಾಯವನ್ನು ನೀಡಿರುತ್ತಾರೆ). ಅಂತಿಮವಾಗಿ ಸರಕಾರವು ಶಾರೀರಿಕವಾಗಿಯೂ ಭಾವನಾತ್ಮಕವಾಗಿಯು ನಾಗರಿಕರಿಗೆ ಹತ್ತಿರವಿರುವ ಅಗತ್ಯವಿದೆ.

ಜೊತೆಗೆ ನಮ್ಮ ರಾಜ್ಯದ ಎಲ್ಲಾ ಜಿಲ್ಲಾ/ಇಲಾಖಾವಾರು ವರ್ಷದ ಸರ್ವೋತ್ತಮ ಸೇವಾ ಪ್ರಶಸ್ತಿ ವಿಜೇತರಿಗೆ ಶುಭಾಶಯಗಳನ್ನು ಸಲ್ಲಿಸ ಬಯಸುತ್ತೇವೆ. ನಿಮ್ಮ ವಂಶಜರು ಹೆಚ್ಚಲಿ!

**ಎಸ್ ಸುರೇಶ್ ಕುಮಾರ್**

**ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಸಕಾಲದ ನೋಡಲ್ ಸಚಿವರು.**

31ನೇ ಜನವರಿ 2013.

# ಅಧ್ಯಾಯ – 1

## ಸಕಾಲ ಮಿಷನ್ ನಿರ್ದೇಶರ ಮೇಜಿನಿಂದ

**ಶ್ರೇಯಾಂಕ ಮತ್ತು ಪ್ರಗತಿ ಮಾಪನೆ:** ಕಳೆದ ತಿಂಗಳು ನಾವು ಜಿಲ್ಲೆ ಶ್ರೇಯಾಂಕ ನಿಗದಿಪಡಿಸಿರುವುದರಲ್ಲಿ ಬದಲಾವಣೆಯನ್ನು ನೀವು ಗಮನಿಸಿರಬಹುದು ಎಂದಿನಂತೆ ಉತ್ತಮ ಸೇವೆ ನೀಡುವವರಿಗಿದೂ ವ್ಯತ್ಯಾಸವೆನಿಸಿಲ್ಲ. ಆದರೆ ಹೆಚ್ಚು ಅರ್ಜಿಗಳನ್ನು ಸ್ವೀಕರಿಸದೆ ಇರುವವರೆಗೆ ಇದು ಸ್ವಲ್ಪ ಸಂತಸ ನೀಡಿದೆ. ಜನಸಂಖ್ಯೆ ಆಧಾರವನ್ನು ತೆಗೆದುಕೊಂಡು, ಒಂದು ಲಕ್ಷ ಸಂಖ್ಯೆಯನ್ನು ಅನುಸರಿಸಿ ಹೆಚ್ಚು ಅರ್ಜಿಗಳನ್ನು ಸ್ವೀಕರಿಸುವ ಜಿಲ್ಲೆಗಳಿಗೆ ಹೆಚ್ಚು ಒತ್ತು ನೀಡಲಾಗುವುದು, ಅದೇ ರೀತಿಯಲ್ಲಿ ವಿಲೇವಾರಿ ಶೇಕಡಾವನ್ನು ನಿಗದಿಪಡಿಸಲಾಗುತ್ತಿದೆ.

**ಶ್ರೇಯಾಂಕದಲ್ಲಿ ಬದಲಾವಣೆ:**_ಪ್ರಸಕ್ತ ತಿಂಗಳಲ್ಲಿ ಈ ಕೆಳಗಿನಂತೆ ಶ್ರೇಯಾಂಕಗಳ ಏರಿಳಿತಗಳನ್ನು ಪ್ರಸ್ತುತಪಡಿಸಲಾಗಿದೆ.

| ಶ್ರೇಯಾಂಕ | ಜಿಲ್ಲೆ | ಶ್ರೇಯಾಂಕ | ಜಿಲ್ಲೆ |
|---|---|---|---|
| 1 | ಉಡುಪಿ | 30 | ಬಿಜಾಪುರ |
| 2 | ಕೊಡಗು | 29 | ರಾಯಚೂರು |
| 3 | ಉತ್ತರ ಕನ್ನಡ | 28 | ಬೀದರ್ |

ಕೆಲವೊಂದು ಜಿಲ್ಲೆಗಳಲ್ಲಿ, ಬೆಂಗಳೂರು ನಗರ ಜಿಲ್ಲೆಯು ಸಾಕಷ್ಟು ಪ್ರಗತಿಯನ್ನು ಕಂಡಿರುವುದನ್ನು (5ನೇ ಸ್ಥಾನದಲ್ಲಿ) ನೀವು ಗಮನಿಸಬಹುದು. 2ನೇ ಸ್ಥಾನಕ್ಕೆ ಬಂದಿದೆ ಅದೇ ರೀತಿ ಬಾಗಲಕೋಟೆಯಲ್ಲೂ ಗಣನೀಯ ಪ್ರಗತಿಯಾಗಿದೆ (ಡಿಸೆಂಬರ್ ತಿಂಗಳಲ್ಲಿ 14ನೇ ರ್‍ಯಾಂಕ್‌ನಿಂದ) ಕೊಡಗು 2ನೇ ಸ್ಥಾನಕ್ಕೆ ಬಂದಿದೆ. ಅದೇ ರೀತಿ ಬಾಗಲಕೋಟೆಯಲ್ಲೂ ಗಣನೀಯ ಪ್ರಗತಿಯಾಗಿದೆ (ಡಿಸೆಂಬರ್ ತಿಂಗಳಲ್ಲಿ 15ನೇ ರ್‍ಯಾಂಕ್‌ನಲ್ಲಿದ್ದು ಈ ತಿಂಗಳು 6 ನೇ ರ್‍ಯಾಂಕ್ ಗೆ ತಲುಪಿದೆ, ಯಾದಗಿರಿ 24ನೇ ರ್‍ಯಾಂಕ್ ನಿಂದ 15ನೇ ರ್‍ಯಾಂಕ್ ಗೆ ಈ ಮಾಹೆಯಲ್ಲಿ ಏರಿದೆ. ಮೈಸೂರು (23ನೇ ರ್‍ಯಾಂಕ್ ನಿಂದ 12ನೇ ರ್‍ಯಾಂಕ್‌ಗೆ ) ಜಿಲ್ಲೆಗಳು ಗಣನೀಯ ಪ್ರಗತಿ ಸಾಧಿಸಿವೆ. ಇದೇ ಸಮಯದಲ್ಲಿ ಬೀದರ್ ಜಿಲ್ಲೆಯು ತೀರಾ ಕನಿಷ್ಠ ಮಟ್ಟದ ಪ್ರಗತಿ ತೋರಿಸಿದ್ದು ( 26ನೇ ರ್‍ಯಾಂಕ್ ನಿಂದ 28ನೇ ರ್‍ಯಾಂಕ್‌ಗೆ ಇಳಿದಿದೆ) ಕೊಪ್ಪಳ ಜಿಲ್ಲೆಯು 19ನೇ ರ್‍ಯಾಂಕ್ ನಿಂದ 25ನೇ ರ್‍ಯಾಂಕ್ ಗೆ ಇಳಿದಿದೆ) ಹಾಗೂ ರಾಮನಗರ ಜಿಲ್ಲೆಯು 1 ನೇ ರ್‍ಯಾಂಕ್ ನಿಂದ 9ನೇ ರ್‍ಯಾಂಕ್ ಗೆ ಇಳಿದಿದೆ ಇದು ಉತ್ತೇಜನಕ್ಕೆ ಸೇತುವಾದರೂ ಸಕಾಲವನ್ನು ಪ್ರತಿ ಮನೆ ಮನೆಗೂ ತಲುಪಿಸುವ ಪ್ರಯತ್ನಕ್ಕೆ ಜಿಲ್ಲಾ ಮುಖ್ಯಸ್ಥರುಗಳು ಒತ್ತು ನೀಡಬೇಕಾಗಿದೆ.

**ಇಲಾಖಾವಾರು ವಿಶ್ಲೇಷಣೆ:** ಈ ಮಾಹೆಯಲ್ಲಿ ನಾವು ಇಲಾಖಾವಾರು ಸಾರ್ವಜನಿಕರ ಸೇವೆ ಒದಗಿಸಿರುವ ಹಾಗೂ ವಿಳಂಬಗಳ ಬಗ್ಗೆ ವಿಶ್ಲೇಷಣೆ ಮಾಡಲು ಪ್ರಯತ್ನಿಸಿದ್ದೆವೆ. ಜಿಲ್ಲೆಗಳ ಇಲಾಖಾವರು ವಿವರಗಳನ್ನು ತಾವು ಪೋರ್ಟ್‌ನಲ್ಲಿ ನೇರವಾಗಿ ನೋಡಬಹುದು.

**ಬೈಪಾಸ್ ಬಗ್ಗೆ:** ನಮ್ಮ ಪ್ರತ್ಯೇಕ ಅಧ್ಯಾಯದಲ್ಲಿ ಬೈಪಾಸ್ ಎಂಬ ವಿಷಯದ ಬಗ್ಗೆ ಪರಿಚಯಿಸಲಾಗಿದೆ. ಇದರಲ್ಲಿ ತಾವು ಸಕಾಲ ಅನುಷ್ಟಾನದ ಮೊದಲು ಹಾಗೂ ನಂತರದ ಇಲಾಖಾವಾರು ಅರ್ಜಿ ಸ್ವೀಕೃತಿ ವ್ಯತ್ಯಸಗಳ ಪ್ರವೃತ್ತಿಯನ್ನು ಅವಗಹನಿಸಬಹುದು.

**ವಿಲೇವಾರಿ ಗಣಕ**: ಈ ಮಾಹೆಯಲ್ಲಿ ಹೊಸತಾಗಿ ಇಲಾಖಾವಾರು ಶ್ರೇಯಾಂಕವನ್ನು ನಾಗರೀಕರ ಸೇವೆಗಳ ಪೂರೈಕೆ ಮೇರೆಗೆ ಅಳವಡಿಸಲಾಗಿದೆ. ಈ ತಿಂಗಳಲ್ಲಿ 34362 ಅರ್ಜಿಗಳು ವಿಳಂಬವಾಗಿ ವಿಲೇಯಾಗಿದ್ದಾರೆ ನಿಗದಿತ ಅವಧಿಯಲ್ಲಿ ವಿಲೇವಾರಿ ಶೇಕಡಾ 97.34% ಆಗಿದೆ. ಹೆಚ್ಚಿನ ವಿಳಂಬವು ಕಂದಾಯ ಇಲಾಖೆ (16650) ಅರ್ಜಿಗಳು ನೋಂದವಣಿ ಮುದ್ರಾಂಕಗಳ ಇಲಾಖೆ 7943 ಗೃಹ ಇಲಾಖೆ 2910 ಆಹಾರ ಮತ್ತು ನಆಗರೀಕ ಪೂರೈಕೆಯಿಂದ 1745 ಅರ್ಜಿ. ಕೆಲವೋಂದು ವಇಳಂಬಗಳು ತಾಂತ್ರಿಕ ಸಮಸ್ಯೆಗಳಿಂದಾಗಿದ್ದು, ಅಂದರೆ ಲೆಗಾಸಿ ತಂತ್ರಾಂಶದ ಮೇಲ್ದರ್ಜೆಯಿಂದಾಗಿ ಅಥವಾ ಈಗ ಇರುವ ತಂತ್ರಾಂಶದಲ್ಲಿ ಬದಲಾವಣೆಯಿಂದಾಗಿ ಆಗಿದೆ. ಸಕಾಲ ಪೋರ್ಟ್‌ಲ್ ತಂತ್ರಾಂಶದಲ್ಲಿ ಕ್ರೋಡಿಕರಣ ಸಮಸ್ಯೆಗಳಿಂದ ಹಾಗೂ ಸೇವಾ ಪೊರೈಕೆದಾರರಿಂದ  ಸಮಸ್ಯೆಗಳು ಕಂಡುಬಂದಿದೆ. ಐ ಜಿ ಆರ್ ನಮ್ಮ ಮಂಡಳಿ ಕುಟುಂಬಕ್ಕೆ ಹೊಸ ಸದಸ್ಯರಾಗಿ ಸೇರ್ಪಡೆಯಾಗಿದ್ದಾರೆ ಆದುದರಿಂದ ಆದಿವಿಘ್ನಗಳು ಕಂಡುಬಂದಿವೆ.

**ತಿರಸ್ಕೃತ ಅರ್ಜಿಗಳು**: ತಿರಸ್ಕೃತ ಅರ್ಜಿಗಳ ಪ್ರಮಾಣವು 5.64% ದಿಂದ 4.59%ಗೆ ಇಳಿದಿದೆ. ನಿರ್ವಹಣೆಯ ಸುಧಾರಣೆಯಿಂದ, ಚೆಕ್‌ಲಿಸ್ಟ್‌ಗಳ ಬಗ್ಗೆ ಸ್ಪಷ್ಟತೆಯಿಂದಾಗಿ ಹೆಚ್ಚಿನ ಪ್ರಗತಿ ಕಂಡು ಬಂದಿದೆ. ಸಹಾಯ ಕೇಂದ್ರಗಳ ಜೊತೆ ವಿಡಿಯೋ ಕಾನ್ಫರನ್ಸ್ ಸಭೆಗಳಲ್ಲಿ ಅರ್ಜಿ ತಿರಸ್ಕರಗಳ ಬಗ್ಗೆ ಪುನರುಚ್ಚರಿಸಿ ಅರ್ಜಿ ತಿರಸ್ಕೃತಗಾಳನ್ನು ಶೂನ್ಯ ಮಟ್ಟಕ್ಕೆ ತರಬೇಕೆಂದು ಸೂಚಿಸಿದ್ದೇವೆ. ಸಾರ್ವಜನಿಕರು ಸರಕಾರಿ ಕಛೇರಿಗಳಲ್ಲಿ ಅರ್ಜಿ ನೀಡಿದ ಪ್ರಪ್ರಥಮ ಸಮಯದಲ್ಲೆ ಖಾತರಿಯಾಗಿ ಸೇವೆಗಳು ಒದಗಿಸುವಂತಾಗಬೇಕು.

**ಕ್ಷೇತ್ರ ಸಂದರ್ಶನ**: ನನ್ನ ನೇತೃತ್ವದಲ್ಲಿ ಹಾಗೂ ಪರತ್ಯೇಕ ತಂಡದಿಂದ ವಿವಿದೆಡೆ ಭೇಟಿ ಎರಡು ಉದ್ದೇಶಗಳೊಂದಿಗೆ ನಡೆಸಲಾಯಿತು ಸಂದರ್ಶನವನ್ನು ನಮ್ಮ ಸಿಬ್ಬಂದಿಗಳಿಗೆ ಪ್ರೇರಣೆ ಹಾಗೂ ತಳಮಟ್ಟದಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಿಕೊಳ್ಳಲು. ಎರಡನೇಯದಾಗಿ ಸಕಾಲದ ನಾಡಿಮಿಡಿತವನ್ನು ಸ್ವತಃ ಕಂಡುಕೊಳ್ಳುವ ಈ ಭೇಟಿಯಲ್ಲಿ ಕಂಡುಕೊಂಡ ಮುಖ್ಯ ವಿಚಾರವೆಂದರೆ ಸಿಬ್ಬಂದಿಗಳ ಕೊರತೆ, ವಿದ್ಯುನ್ಮಾನ ವ್ಯವಸ್ಥೆಯ ಮೇಲ್ದರ್ಜೆಯ ಅವಶಯಕತೆ, ಇವಲ್ಲದೆ ಪ್ರಿಂಟರ್, ಸ್ಕ್ಯಾನರ್ ಮುಂತಾದ ಪರಿಕರಗಳ ಅವಶ್ಯಕತೆ ಸಹಾಯ ಕೇಂದ್ರಗಳು ಸರಿಸುಮಾರು ಉತ್ತಮ ಕಾರ್ಯನಿರ್ವಹಣೆ ಮಾಡುತ್ತಲಿವೆ ಸಕಾಲದ ನಂತರ ಸೇವೆಗಳು ಒದಗಿಸುತ್ತಿರುವ ರೀತಿ ಉತ್ತಮಗೊಂಡಿದೆ ಎಂದು ನಾಗರೀಕರು ಭಾವಿಸುತ್ತಾರೆ ಜೊತೆಗೆ ಸ್ಥಳೀಯ ಆಡಳಿತದ ಪ್ರಭಾವದಿಂದ ಇನ್ನೂ ಉತ್ತಮವಾಗಿ ಸೇವೆ ನೀಡಬಹುದಾಗಿದೆ ಎಂಬುದು ಕೆಲವರ ಅಭಿಪ್ರಾಯ ಅಧ್ಯಾಯ 5ರಲ್ಲಿ ನನ್ನ ಭೇಟಿಯ ಕೆಲವು ಮುಖ್ಯಾಂಶಗಳನ್ನು ನೀಡಿದ್ದೇವೆ.

**ಸಭೆ ಮತ್ತು ಕಾನ್ಫರೆನ್ಸ್**ಗಳಲ್ಲಿ ನಾವು ತಂಡದ ಜೊತೆ ಭಾಗವಹಿಸಿರುತ್ತೇವೆ ಇದರಿಂದ ನಾವು ನಿರಂತರವಾಗಿ ಅರಿತುಕೊಂಡುಕೊಳ್ಳಲು ಸಹಾಯವಾಗುತ್ತದೆ.  ಕರ್ನಾಟಕ ಅನುಕರಿಸಬಹುದಾದಂತಹ ಕೆಲವು ಉತ್ತಮ ಮಾದರಿಗಳನ್ನು ಇತರೆ ರಾಜ್ಯಗಳು ಅರ್ಥೈಸಿಕೊಂಡು/ಅಳವಡಿಕೊಳ್ಳಲು ಉತ್ಸುಕರಾಗಿ ಆಗಮಿಸುತ್ತಿರುವುದು ತಮಗೆಲ್ಲರಿಗೂ ತಿಳಿದಿದೆಯಷ್ಟೆ (ಪಂಜಾಬ್, ಕೇರಳ ಒರಿಸ್ಸ ಇತರೆ ರಾಜ್ಯಗಳು) ಉತ್ತಮ ಕಾರ್ಯ ತತ್ಪರತೆಯಿಂದಾಗಿ  ಸಕಾಲ ಅಧಿನಿಯಮದ ಮುಖಾಂತರ ಉತ್ತಮ ಗುಣಮಟ್ಟದ ಸೇವ ನಿರ್ವಹಣೆಗಳು ದಿನದಿಂದ ದಿನಕ್ಕೆ ಗರಿಷ್ಟಗೊಳ್ಳುತ್ತಿದೆ.

**ದೂರುಗಳು**: ಈ ಮಾಹೆಯಲ್ಲಿ ದೂರುಗಳ ಮೇರೆಗೆ ಉತ್ತಮ ಗುಣಮಟ್ಟದ ಮರುಸ್ಪಂದನೆಯನ್ನು ನೀಡಲು ಶ್ರಮಿಸಿದ್ದೇವೆ ಕೆಲವು ನಿರ್ದಿಷ್ಟವಾದ ಮರುಸ್ಪಂದನೆಗಳನ್ನು ಕಲೆಹಾಕಲು ಮಂಡಳಿಯ ತಂಡಕ್ಕೆ ನಿರ್ದೇಶಿಸಿದ್ದೇನೆ. ಇದರ ಕೆಲವು ಉದಾಹರಣೆಗಳನ್ನು ಅಧ್ಯಾಯ 4 ರಲ್ಲಿ ನೋಡಬಹುದು.  ಜನತೆ ಸಂಪೂರ್ಣ ಪಾಲ್ಗೋಳ್ಳುವಿಕೆಯನ್ನು ತಾವು ಇದರಲ್ಲಿ ನಿಖರವಾಗಿ ಗಮನಿಸಬಹುದು. ಹೆಚ್ಚುವರಿ ಸೇವೆ/ಇಲಾಖೆಗಳ ಸೇರ್ಪಡೆಯಿಂದಾಗಿ ದೂರುಗಳು ಹೆಚ್ಚಿವೆ ಹಾಗೆಯೇ ಸಕಾಲೇತರ ದೂರುಗಳು ಕಡಿಮೆಯಾಗುವುದು ಸಹಜವಾಗಿರುತ್ತದೆ. ಸಿಬ್ಬಂದಿಯ ವರ್ತನೆಗಳ ಉತ್ತಮ ಬದಲಾವಣೆಯಿಂದ ಹೆಚ್ಚಿನ ಗುಣ ಮಟ್ಟದ ಸೇವ ನಿರ್ವಹಣೆ ಸುಧಾರಣೆಯಾಗಬಹುದಲ್ಲದೆ ಸಾರ್ವಜನಿಕರಿಗೆ ಅವಶ್ಯ ಕಾಲವದಿಯಲ್ಲಿ ದೊರಕಿ ಸರಕಾರಿ ಸೇವೆಗಳ ನಿರ್ವಹಣೆ ನಿಚ್ಚಳ ಜನಮೆಚ್ಚಿಗೆ/ಯಶಸ್ಸಿನ ಪಾಥಕ್ಕೆ ಸೇರಲು ನಾಂದಿಯಾಗುವುದು ನಿಶ್ಚಿತ.

**ಪ್ರಶಸ್ತಿಗಳು: ಸ್ವಾಧಿಷ್ಟ ವಿಷಯವೊಂದು ಇಲ್ಲಿದೆ !** ಸರ್ವೋತ್ತಮ ಸೇವಾ ಪ್ರಶಸ್ತಿ ವಿಜೇತ 10 ಜನರಲ್ಲಿ ಕೆ ಎ ಎಸ್ ಅಧಿಕಾರಿಯು ಸಕಾಲ ತಂಡಕ್ಕೆ ಸೇರಿದವರಾಗಿರುತ್ತಾರೆ, ಶ್ರೀ ವರಪ್ರಸಾದ್ ರೆಡ್ಡಿಯವರು ಚನ್ನರಾಯಪಟ್ಟಣದಲ್ಲಿ

ತಹಶಿಲ್ದಾರ್ ಆಗಿ ಸೇವೆ ಸಲ್ಲಿಸುತ್ತಿರುವಾಗ ಪತ್ರಾಗಾರ ಶಾಖೆಯನ್ನು ನಿಭಯಿಸುವಲ್ಲಿ ತೋರಿದ ಅಪ್ರತಿಮ ಪ್ರತಿಭೆ ಹಾಗೂ ಅದನ್ನು ನಾಗರಿಕ ಸ್ನೇಹಿಯಾಗಿ ಪರಿವರ್ತಿಸಿರುವುದಕ್ಕೆ ಕಾರಣಕರ್ತರಾಗಿದ್ದಾರೆ. ಶ್ರೀ ರಂಗಸ್ವಾಮಿ – ಮಂಡ್ಯ ಜಿಲ್ಲೆಯಲ್ಲಿ ಪಿ ಡಿ ಒ ಆಗಿ ಕಾರ್ಯ ನಿರ್ವಹಿಸಿದ್ದು ಅತ್ಯಂತ ತ್ವರಿತ ವೇಗದಲ್ಲಿ ಗ್ರಾಮೀಣ ಜನರ ಜೊತೆ ಸ್ಪಂದಿಸಿ ಅವಶ್ಯಕತೆಗಳನ್ನು ನಿರ್ವಹಿಸಿರುವುದಕ್ಕೆ ಪ್ರಶಸ್ತಿಗೆ ಭಾಜನರಾಗಿರುತ್ತಾರೆ. ಪ್ರಶಸ್ತಿಗಳ ಬಗ್ಗೆ ಹೆಚ್ಚಿ ವಿವರಗಳನ್ನು ತಾವು ಘಟನೆಗಳು ಅಧ್ಯಾಯದಲ್ಲಿ ದರ್ಶಿಸಬಹುದು

ಮುಂದಿರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಸೇವೆಗಳನ್ನು ಸಕಾಲದಡಿ ಸೇರಿಸಿಕೊಳ್ಳುವ ಉತ್ಸುಕತೆಯೊಂದಿಗೆ ಸಕಾಲವು ಇನ್ನೂ ಹೆಚ್ಚಿನ ನಾಗರಿಕರನ್ನು ತಲುಪುವ ಆಶಯ ನಮಗಿದೆ.

**ಡಾ॥ ಶಾಲಿನಿ ರಜನೀಶ್**

ಮಂಡಳಿಯ ನಿರ್ದೇಶಕರು

# ಅಧ್ಯಾಯ – 2
## ಅಂಕಿಅಂಶಗಳು
## ಮಾಹೆಯ ಒಟ್ಟಾರೆ ಜಿಲ್ಲೆಗಳ ಶ್ರೇಯಾಂಕ

| **ಜಿಲ್ಲೆಗಳು** | **ಒಟ್ಟಾರೆ ಅರ್ಜಿ ಸ್ವೀಕೃತಿ ಈ ಮಾಹೆಯಲ್ಲಿ (ಎ)** | **ಒಟ್ಟಾರೆ ಅರ್ಜಿ ವಿಲೇ ಈ ಮಾಹೆಯಲ್ಲಿ (ಬಿ)** | ವಿಲೇ ಪ್ರಮಾಣ ಶೇಕಡವಾರು (ಸಿ) | ಶ್ರೇಯಾಂಕ ಅರ್ಜಿ ವಿಲೇ ಮೇರೆಗೆ ಲ | **ಜಿ ಎಸ್ ಸಿ ಸ್ವೀಕೃತಿ ಸಂಖ್ಯೆ / ಒಂದು ಲಕ್ಷ ಜನ ಸಂಖ್ಯೆ ಮೇರೆಗೆ (ಇ)** | **ಶ್ರೇಯಾಂಕ ಜಿ ಎಸ್ ಸಿ ಸ್ವೀಕೃತಿ ಮೇರೆಗೆ/ಒಂದು ಲಕ್ಷ ಜನ ಸಂಖ್ಯೆ ಮೇರೆಗೆ (ಎಫ್)** | ಒಟ್ಟಾರೆ ಶ್ರೇಣಿವಾರು 70% ಎಫ್ ಮತ್ತು 30% ಡಿ ಕಾಲಮ್ ಮೇರೆಗೆ |
|---|---|---|---|---|---|---|---|
| **ಉಡುಪಿ** | **29626** | **29027** | **0.1** | **1** | **2693** | **3** | **1** |
| **ಕೊಡಗು** | **16104** | **16545** | **0.3** | **5** | **3220** | **2** | **2** |
| **ಉತ್ತರ ಕನ್ನಡ** | **36145** | **35562** | **0.2** | **4** | **2581** | **5** | **3** |
| ದಕ್ಷಿಣ ಕನ್ನಡ | 51695 | 49676 | 0.4 | 8 | 2584 | 4 | 4 |
| ಬೆಂಗಳೂರು | 321228 | 308176 | 2.9 | 20 | 3381 | 1 | 5 |
| ಬಾಗಲಕೋಟೆ | 44618 | 42096 | 1.6 | 13 | 2478 | 7 | 6 |
| ಕೋಲಾರ | 33799 | 31995 | 0.8 | 9 | 2253 | 10 | 7 |
| ಮಂಡ್ಯ | 43946 | 46119 | 2.1 | 17 | 2441 | 8 | 8 |
| ರಾಮನಗರ | 25262 | 27146 | 4 | 24 | 2526 | 6 | 9 |
| ಶಿವಮೊಗ್ಗ | 38715 | 39066 | 3.2 | 21 | 2277 | 9 | 10 |
| ದಾವಣಗೆರೆ | 37930 | 35012 | 0.8 | 9 | 1996 | 15 | 11 |
| ಮೈಸೂರು | 63076 | 64387 | 1.6 | 13 | 2175 | 14 | 12 |
| ಧಾರವಾಡ | 39558 | 40305 | 1.9 | 16 | 2197 | 13 | 13 |
| ಹಾವೇರಿ | 25565 | 26902 | 0.1 | 1 | 1704 | 21 | 14 |
| ಯಾದಗಿರಿ | 24531 | 24228 | 4.2 | 25 | 2230 | 12 | 15 |
| ಬೆಂಗಳೂರು ಗ್ರಾಮಾಂತರ | 20084 | 22041 | 12.8 | 30 | 2231 | 11 | 16 |
| ತುಮಕೂರು | 48998 | 50370 | 2.7 | 19 | 1884 | 16 | 17 |
| ಗುಲ್ಬರ್ಗ | 46675 | 49115 | 2.6 | 18 | 1867 | 18 | 18 |
| ಚಿಕ್ಕಬಳ್ಳಾಪುರ | 17376 | 19010 | 0.1 | 1 | 1448 | 26 | 19 |
| ಚಿತ್ರದುರ್ಗ | 23841 | 26078 | 0.3 | 5 | 1490 | 25 | 20 |
| ಬೆಳಗಾಂ | 88071 | 89561 | 4.4 | 26 | 1873 | 17 | 21 |
| ಹಾಸನ | 30699 | 34309 | 3.4 | 23 | 1805 | 19 | 22 |
| ಗದಗ | 15060 | 16803 | 1.4 | 12 | 1506 | 24 | 23 |
| ಚಾಮರಾಜನಗರ | 14092 | 16671 | 0.3 | 5 | 1409 | 27 | 23 |
| ಕೊಪ್ಪಳ | 19985 | 22227 | 1.7 | 15 | 1537 | 23 | 25 |
| ಚಿಕ್ಕಮಗಳೂರು | 17654 | 20627 | 3.3 | 22 | 1604 | 22 | 26 |
| ಬಳ್ಳಾರಿ | 42894 | 40816 | 5 | 28 | 1715 | 20 | 27 |
| ಬೀದರ್ | 18116 | 20848 | 1 | 11 | 1065 | 30 | 28 |
| ರಾಯಚೂರು | 24800 | 29887 | 8.9 | 29 | 1305 | 28 | 29 |
| ಬಿಜಾಪುರ | 24521 | 26273 | 4.9 | 27 | 1167 | 29 | 30 |
| **ಒಟ್ಟು** | **1284664** | **1300878** | **2.61** | | | | |

**ಟಿಪ್ಪಣಿ: :ಬೆಂಗಳುರು ಗ್ರಾಮೀಣ ಭಾಗದಿಂದ ವಿಳಂಬ ವಿಲೇಯು ಅಸಾಧರಣವಾಗಿ ಹೆಚ್ಚಾಗಿದೆ – ಇದರ ಬಗ್ಗೆ ಸಂಭಂದಿಸಿದವರು ವಿಶ್ಲೇಷಣೆ ಮಾಡುವ ಅಗತ್ಯತೆ ಇದೆ.**

## ಒಟ್ಟಾರೆ ಇಲಾಖೆಗಳ ಕಾರ್ಯ ಪ್ರಗತಿ

| ಇಲಾಖೆಗಳು | ಒಟ್ಟಾರೆ ಅರ್ಜಿ ಸ್ವೀಕೃತಿ ಈ ಮಾಹೆಯಲ್ಲಿ | ಒಟ್ಟಾರೆ ಅರ್ಜಿ ವಿಲೇ ಈ ಮಾಹೆಯಲ್ಲಿ | ವಿಳಂಬ ವಿಲೇ | ವಿಲೇ ಪ್ರಮಾಣ ಶೇಕಡವಾರು | ಬಾಕಿ | ಅರ್ಜಿ ತಿರಸ್ಕಾರ | ಅರ್ಜಿ ತಿರಸ್ಕಾರ ಶೇಕಡಾವಾರು |
|---|---|---|---|---|---|---|---|
| ಕಂದಾಯ ಇಲಾಖೆ | 432936 | 513961 | 27145 | 5.28 | 4222 | 29242 | 6.75 |
| ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | 271091 | 275662 | 1745 | 0.63 | 339 | 2592 | 0.96 |
| ಸಾರಿಗೆ ಇಲಾಖೆ | 269148 | 237621 | 1646 | 0.69 | 21 | 8977 | 3.34 |
| ವಾಣಿಜ್ಯ ತೆರಿಗೆ ಇಲಾಖೆ | 160011 | 143975 | 315 | 0.22 | 72 | 15521 | 9.70 |
| ಒಳಾಡಳಿತ ಇಲಾಖೆ | 79199 | 74021 | 3064 | 4.14 | 1107 | 1569 | 1.98 |
| ನಗರಾಭಿವೃದ್ಧಿ ಇಲಾಖೆ | 76925 | 75735 | 1884 | 2.49 | 156 | 2897 | 3.77 |
| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 33136 | 29639 | 380 | 1.28 | 122 | 1409 | 4.25 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 21610 | 22411 | 355 | 1.58 | 47 | 161 | 0.75 |
| ಕಾರ್ಮಿಕ ಇಲಾಖೆ | 14204 | 14050 | 30 | 0.21 | 21 | 364 | 2.56 |
| ಮಹಿಳೆ ಮತ್ತು ಮಕ್ಕಳ ಕಲ್ಯಾಣ | 9652 | 9644 | 41 | 0.43 | 1 | 2 | 0.02 |
| ವಾಣಿಜ್ಯ ಮತ್ತು ಕೈಗಾರಿಕೆ | 3544 | 3532 | 71 | 2.01 | 1 | 8 | 0.23 |
| ಶಿಕ್ಷಣ ಇಲಾಖೆ | 2362 | 2339 | 81 | 3.46 | 49 | 362 | 15.33 |
| ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | 229 | 4 | 1 | 25.00 | 47 | 0 | 0.00 |
| ಗೃಹ ನಿರ್ಮಾಣ | 144 | 100 | | 0.00 | 0 | 0 | 0.00 |
| ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 131 | 109 | 8 | 7.34 | 15 | 13 | 9.92 |
| ಪಶು ಸಂಗೋಪನೆ ಹಾಗೂ ಮೀನುಗಾರಿಕೆ ಇಲಾಖೆ | 73 | 55 | 0 | 0.00 | 0 | 0 | 0.00 |
| ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ (ಪರಿಸರ)ಇಲಾಖೆ | 62 | 40 | 0 | 0.00 | 3 | 3 | 4.84 |
| ಲೋಕೋಪಯೋಗಿ ,ಬಂದರು ಮತ್ತು ಒಳನಾಡು ಜಲಸಾರಿಗೆ | 42 | 40 | 0 | 0.00 | 0 | 0 | 0.00 |
| | | | | | | | |
| **ಒಟ್ಟು** | **1374499** | **1402938** | **36766** | **2.61** | **6223** | **63120** | **4.59** |

**ಟಿಪ್ಪಣಿ:** ಈ ಮಾಹೆಯಲ್ಲಿ ಕಂದಾಯ ಇಲಾಖೆಯಲ್ಲಿ ಅತೀ ಹೆಚ್ಚು ಅರ್ಜಿಗಳು ಸ್ವೀಕೃತಿಯಾಗಿದೆ ನಂತರದಲ್ಲಿ ಸ್ಥಾನದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ.


ವಿಳಂಬ ವಿಲೇ ಪ್ರವೃತ್ತಿಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ – 25% ಶೇಕಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ 7.34% ಹಾಗೂ ಕಂದಾಯ ಇಲಾಖೆ 5.28%. ಒಳಾಡಳಿತ ಹಾಗೂ ಶಿಕ್ಷಣ ಇಲಾಖೆಗಳಲ್ಲಿ ವಿಳಂಬ ಪ್ರವೃತ್ತಿ ಸರಾಸರಿ ಮಟ್ಟದಲ್ಲಿದೆ.

ವಿಪರೀತ ವಿಳಂಬ ವಿಲೇ ಪ್ರವೃತ್ತಿಯಲ್ಲಿ ಕಂದಾಯ, ಗೃಹ ಹಾಗೂ ಆರೋಗ್ಯ ಇಲಾಖೆಗಳಲ್ಲಿ ಸಂಖ್ಯೆಗಳಲ್ಲಿ ಹೆಚ್ಚಿವೆ.

ಅರ್ಜಿ ತಿರಸ್ಕೃತಗಳಲ್ಲಿ ಶಿಕ್ಷಣ, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಹೆಚ್ಚಿನ ಅರ್ಜಿ ತಿರಸ್ಕೃತಗಳು ಕಂಡು ಬಂದಿದೆ.

## ವಿಲೇವಾರಿ ಅಂಕಿಅಂಶಗಳು – ಇಲಾಖಾವಾರು


### ಒಟ್ಟಾರೆ ಇಲಾಖೆಗಳ ವಿಲೇ ಪ್ರವೃತ್ತಿ:




| ಮಾಹೆ | ಒಟ್ಟಾರೆ ಅರ್ಜಿ ಸ್ವೀಕೃತಿ ಈ ಮಾಹೆಯಲ್ಲಿ | ಒಟ್ಟಾರೆ ಅರ್ಜಿ ವಿಲೇ ಈ ಮಾಹೆಯಲ್ಲಿ | ವಿಳಂಬ ವಿಲೇ | ವಿಲೇ ಪ್ರಮಾಣ ಶೇಕಡವಾರು |
|---|---|---|---|---|
| ಜನವರಿ (2013) | 1374499 | 1402938 | 36766 | 2.61% |
| ಡಿಸೆಂಬರ್ | 1177562 | 1266471 | 31106 | 2.38% |
| ನವೆಂಬರ್ | 1226153 | 1244945 | 30694 | 2.46% |
| ಅಕ್ಟೋಬರ್ | 1141057 | 1290276 | 48387 | 3.75% |
| ಸೆಪ್ಟಂಬರ್ | 1153712 | 1302776 | 81633 | 6.27% |
| ಆಗಸ್ಟ | 2337689 | 2251669 | 93125 | 4.14% |
| ಜುಲೈ | 2437511 | 2285836 | 76699 | 3.36% |
| ಜೂನ್ | 2528615 | 2443478 | 50873 | 2.08% |
| ಮೇ | 1536741 | 1229183 | 22098 | 1.80% |
| ಏಪ್ರಿಲ್ | 807787 | 620337 | 10202 | 1.64% |

ಟಿಪ್ಪಣಿ: ವಿಳಂಬ ವಿಲೇ ಪ್ರವೃತ್ತಿಯಲ್ಲಿ ಸ್ವಲ್ಪ ಹೆಚ್ಚಾಗಿರುವುದು ಕಂಡು ಬಂದಿದೆ ಇದಕ್ಕೆ ಕಾರಣ ಹೊಸತಾಗಿ ಹೆಚ್ಚುವರಿ ಸೇರ್ಪಡೆ ಹಾಗೂ ತಂತ್ರಾಂಶದ ಕ್ರೋಡಿಕರ ಸಮಸ್ಯೆಗಳು. ಈ ಸಮಸ್ಯೆಯನ್ನು ಈಗ ನಿವಾರಿಸಲಾಗಿದೆ.


## ಕಾರ್ಮಿಕ ಇಲಾಖೆ:




ಟಿಪ್ಪಣಿ: ಡಿಸೆಂಬರ್ ಮಾಹೆಗೆ ಹೋಲಿಸಿದರೆ ವಿಳಂಬ ಪ್ರವೃತ್ತಿಯು ಶೇಕಡ ಪ್ರಮಾಣವು ಹೆಚ್ಚಾಗಿದೆ – 0.06%


ಡಿಸೆಂಬರ್ ಮಾಹೆಗೆ ಹೋಲಿಸಿದರೆ ವಿಲೇ ಪ್ರಮಾಣದ ಪಾಲು ಕೂಡ ಕಡಿಮೆಯಾಗಿದೆ (0.15%)

## ಆಹಾರ ಮತ್ತು ನಾಗರೀಕ ಸರಬರಾಜು:





ಟಿಪ್ಪಣಿ: ಡಿಸೆಂಬರ್ ಮಾಹೆಗೆ ಹೋಲಿಸಿದರೆ ವಿಳಂಬ ಪ್ರವೃತ್ತಿಯು ಶೇಕಡ ಪ್ರಮಾಣವು ಕಡಿಮೆಯಾಗಿದೆ – 1.57%, ಅರ್ಜಿ ಸ್ವೀಕೃತಿ ಪ್ರಮಾಣ ಪಾಲು ಈ ಮಾಹೆಯಲ್ಲಿ ಹೆಚ್ಚಾಗಿದೆ.

## ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ





ಟಿಪ್ಪಣಿ: ಡಿಸೆಂಬರ್ ಮಾಹೆಗೆ ಹೋಲಿಸಿದರೆ ವಿಳಂಬ ಪ್ರವೃತ್ತಿಯು ಶೇಕಡ ಪ್ರಮಾಣವು ಹೆಚ್ಚಾಗಿದೆ, ಅರ್ಜಿ ಸ್ವೀಕೃತಿ ಪ್ರಮಾಣ ಈ ಮಾಹೆಯಲ್ಲಿ ಹೆಚ್ಚಾಗಿದೆ. ಇದರ ನಿಯಂತ್ರಣಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ





ಟಿಪ್ಪಣಿ: ಅರ್ಜಿ ವಿಲೇ ಪ್ರಮಾಣ ಕುಸಿದಿದೆ. ವಿಳಂಬ ವಿಲೇಯಲ್ಲಿ ನಿಯಂತ್ರಣ ಮಾಡಬೇಕಿದೆ (ಡಿಸೆಂಬರ್‌ಗೆ ಹೋಲಿಸಿದರೆ 0.40% ವಿಳಂಬ ವಿಲೇ ಪ್ರಮಾಣ).

## ವಾಣಿಜ್ಯ ತೆರಿಗೆ ಇಲಾಖೆ:





ಟಿಪ್ಪಣಿ: ವಿಳಂಬ ಪ್ರವೃತ್ತಿಯು ಶೇಕಡ ಪ್ರಮಾಣವು ಹೆಚ್ಚಾಗಿದೆ (7%), ಅರ್ಜಿ ಸ್ವೀಕೃತಿ ಪ್ರಮಾಣ ಈ ಮಾಹೆಯಲ್ಲಿ ಹೆಚ್ಚಾಗಿದೆ ಆದರೆ ವಿಲೇ ಕುಸಿದಿದೆ ವಿಳಂಬ ವಿಲೇ ಜಾಸ್ತಿ ಆಗಿದೆ.ಇದರ ನಿಯಂತ್ರಣಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ.

## ಕಂದಾಯ ಇಲಾಖೆ:





ಟಿಪ್ಪಣಿ: ಡಿಸೆಂಬರ್ ಮಾಹೆಗೆ ಹೋಲಿಸಿದರೆ ವಿಳಂಬ ಪ್ರವೃತ್ತಿಯು ಶೇಕಡ ಪ್ರಮಾಣವು ಹೆಚ್ಚಾಗಿದೆ (1.36%), ಅರ್ಜಿ ಸ್ವೀಕೃತಿ ಪ್ರಮಾಣ ಈ ಮಾಹೆಯಲ್ಲಿ ಕಡಿಮೆಯಾಗಿದೆ.

**ಸಾರಿಗೆ ಇಲಾಖೆ:**





ಟಿಪ್ಪಣಿ: ಅರ್ಜಿ ಸ್ವೀಕೃತಿ ಪ್ರಮಾಣ ಈ ಮಾಹೆಯಲ್ಲಿ ಹೆಚ್ಚಾಗಿದೆ, ವಿಳಂಬ ವಿಲೇ ಕೂಡ ಕಡಿಮೆಯಾಗಿದೆ. ಅತ್ಯುತ್ತಮ ಕಾರ್ಯ ನಿರ್ವಹಣೆಯಾಗುತ್ತಿದೆ!

**ನಗರಾಭಿವೃದ್ಧಿ ಇಲಾಖೆ:**





ಟಿಪ್ಪಣಿ: ಅರ್ಜಿ ಸ್ವೀಕೃತಿ ಪ್ರಮಾಣ ಹಾಗೂ ವಿಳಂಬ ವಿಲೇ ಕಡಿಮೆಯಾಗಿದೆ. ಡಿಸೆಂಬರ್ ಮಾಹೆಗೆ ಹೋಲಿಸಿದರೆ ವಿಲೇ ಪ್ರಮಾಣ ಪಾಲಿನಲ್ಲಿ 0.31% ಹೆಚ್ಚಾಗಿದೆ.

**ಶಿಕ್ಷಣ ಇಲಾಖೆ:**





ಟಿಪ್ಪಣಿ: ವಿಳಂಬ ಪ್ರಮಾಣ ಹೆಚ್ಚಾಗಿರುವುದು ಆತಂಕಕರ ವಿಷಯವಾಗಿದೆ. ಅರ್ಜಿ ಸ್ವೀಕೃತಿಯನ್ನು ಹೋಲಿಸಿದರೂ ಅರ್ಜಿ ವಿಳಂಬ ವಿಲೇ ಗರಿಷ್ಟವಾಗಿದೆ (ಡಿಸೆಂಬರ್ ಮಾಹೆಗೆ ಹೋಲಿಸಿದರೆ ವಿಳಂಬ ವಿಲೇ 1.33% ಹೆಚ್ಚಾಗಿದೆ).

**ಒಳಾಡಳಿತ (ಪೊಲೀಸ್) ಇಲಾಖೆ:**




ಟಿಪ್ಪಣಿ: ಅರ್ಜಿ ಸ್ವೀಕೃತಿ ಪ್ರಮಾಣ ಕಡಿಮೆ ಹಾಗೂ ವಿಳಂಬ ವಿಲೇ ಹೆಚ್ಚಾಗಿರುವುದು ಆತಂಕದ ವಿಷಯವಾಗಿದೆ (ಡಿಸೆಂಬರ್ ಮಾಹೆಗೆ ಹೋಲಿಸಿದರೆ ವಿಳಂಬ ವಿಲೇ ಪ್ರಮಾಣ 1.09% ಹೆಚ್ಚಾಗಿದೆ).

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:




ಟಿಪ್ಪಣಿ: ಅರ್ಜಿ ಸ್ವೀಕೃತಿ ಪ್ರಮಾಣ ಹಾಗೂ ವಿಲೇ ಪ್ರಮಾಣ ಒಂದೇ ತರನಾಗಿದೆ, ವಿಳಂಬ ವಿಲೇ ಕಡಿಮೆಯಾಗಿರುವುದು ಸ್ವಾಗತರ್ಹ ವಿಷಯವಾಗಿದೆ (ಡಿಸೆಂಬರ್ ಮಾಹೆಗೆ ಹೋಲಿಸಿದರೆ ವಿಳಂಬ ವಿಲೇ ಪ್ರಮಾಣ 1.86% ಕಾರ್ಯವೈಖರಿಯಲ್ಲಿ ಪ್ರಗತಿ ಸಾಧಿಸಿದೆ)

# ಅಧ್ಯಾಯ – 3

ಈ ಅಧ್ಯಾಯದಲ್ಲಿ ಜಿಲ್ಲಾ ತಾಲೂಕು ಕಛೇರಿಗಳು ಕಾರ್ಯವೈಖರಿಯನ್ನು ನಿರಂತರವಾಗಿ ಪರಿವೀಕ್ಷಿಸಲಾಗುತ್ತಿದೆ ಎಂಬುದನ್ನು ಕಾಣಬಹುದು. ಈ ವರದಿಯನ್ನು ಉಪ ಆಯುಕ್ತರು ಪ್ರತಿ ಮಾಹೆಯಲ್ಲಿ ನಡೆಸುವ ಸಭೆಗಳಿಗೆ ಉಪಯೋಗಿಸುತ್ತಾರೆ. ಪ್ರತಿ ತಿಂಗಳು ಕಾರ್ಯವೈಖರಿಯ ಒಳ ಆಳದ ಹರಿವನ್ನು ಗಮನಿಸಲು ಸಾರ್ವಜನಿಕರಿಗೆ ವಿಳಂಬ ವಿಲೇ ಹಾಗು ವಿಳಂಬವಾಗಿ ದೊರಕುತ್ತಿರುವ ಸೇವೆಗಳ ವಿವರ ದೂರು ಇವುಗಳನ್ನು ಮುಂದಿನ ದಿನಗಳಲ್ಲಿ ಹೊರಬರಲು / ಉತ್ತಮಪಡಿಸಲು / ಹಾಗೂ ಮುಂದಿನ ಕ್ರಮಕ್ಕಾಗಿ ಮಂಡಿಸಲಾಗಿರುತ್ತದೆ. ಪ್ರತಿ ಮಾಹೆಯಲ್ಲಿ ಬಿಡುಗಡೆಯಾಗುತ್ತಿರುವ ಸಕಾಲ ವರದಿಯನ್ನು ಗಮನಿಸಿದರೆ ತಮಗೆ ಸಕಾಲ ಅಧಿನಿಯಮದಡಿ ಬರುವ ಸೇವೆಗಳ ಸಫಲತೆ ಬಗ್ಗೆ ತಿಳಿಯುತ್ತದೆ.

## ಭಾಗ ಎ – ಜಿಲ್ಲಾವಾರು ಪ್ರಗತಿ ವಿವರ – ಕರ್ತವ್ಯ ಲೋಪವೆಸಗುತ್ತಿರುವ ಕಛೇರಿ ಹಾಗೂ ಅವುಗಳಿಂದ ಸಾರ್ವಜನಿಕರಿಗೆ ಭಾದಿತವಾಗುತ್ತಿರುವ ಸೇವೆಗಳು

| ಜಿಲ್ಲೆಗಳು | ಅರ್ಜಿ ವಿಳಂಬ | ಅರ್ಜಿ ವಿಲೇ ವಿಳಂಬ ಮಾಡುತ್ತಿರುವ ಕಛೇರಿಗಳು ಹಾಗೂ ಅವುಗಳ ಸಂಖ್ಯೆ | ಭಾದಿತವಾದ ಸೇವೆಗಳು | ತಡ ವಿಳಂಬ 29.12.2012 | ಮಾಹೆಯಲ್ಲಿ ತಿರಸ್ಕೃತವಾಗಿರುವ ಅರ್ಜಿಗಳು 30/1/2013 | ಒಟ್ಟಾರೆ ದೂರುಗಳು |
|---|---|---|---|---|---|---|
| ಬಾಗಲಕೋಟೆ | 31 | ತಾಲೋಕು ಕಛೇರಿ , ಬಾಗಲಕೋಟೆ– 4<br>ಉಪ ತಹಸಿಲ್ದಾರ್ ಕಛೇರಿ–ಗುಳೇದಗುಡ್ಡ –6 ಉಪ ತಹಸಿಲ್ದಾರ್ ಕಛೇರಿ<br>ಕುಲಗೇರಿ – 6 . | ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಆಕಾರ್ ಬಾಂಡ್)<br>ಭೂಮಿ/ ಆಸ್ತಿ ನೋಂದಣಿ<br>ಸ್ಥಳೀಯ ಪ್ರಮಾಣ ಪತ್ರ, ಡೊಮಿಸಿಲಿನ್ ಪ್ರಮಾಣ ಪತ್ರ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಭೂದಾಖಲೆಗಳ ಅಡಕ)<br>ಡೊಮಿಸಿಲಿನ್ ಪ್ರಮಾಣ ಪತ್ರ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಅಟ್‌ಲಾಸ್) | 590 | 922 | 15 |
| ಬೆಂಗಳೂರು ಗ್ರಾಮಾಂತರ | 241 | ಉಪ ನೊಂದಣಾಧಿಕಾರಿ , ನೆಲಮಂಗಲ– 45<br>ಜಿಲ್ಲಾ ಇಂಡಸ್ಟ್ರೀ ಕೇಂದ್ರ, ಬೆಂ(ಗ್ರಾ)–31<br>ಉಪ ನೊಂದಣಾಧಿಕಾರಿ ದೊಡ್ಡಬಳ್ಳಾಪುರ 14<br>ಉಪ ನೊಂದಣಾಧಿಕಾರಿ ಹೊಸಕೋಟೆ 10<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ದೊಡ್ಡಬಳ್ಳಾಪುರ 7<br>ಉಪ ತಹಸಿಲ್ದಾರ್ ಕಛೇರಿ–ಅನುಗೊಂಡನಹಳ್ಳಿ 6<br>ಉಪ ತಹಸಿಲ್ದಾರ್ ಕಛೇರಿ–ಸೂಲಿಬೆಲೆ 4<br>ಉಪ ತಹಸಿಲ್ದಾರ್ ಕಛೇರಿ – ಕಸಬಾ– 16<br>ಉಪ ನೊಂದಣಾಧಿಕಾರಿ ದೇವನಹಳ್ಳಿ – 49 | ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಆಕಾರ್ ಬಾಂಡ್)<br>ಜಾತಿ ಪ್ರಮಾಣ ಪತ್ರ<br>ಮೈಕ್ರೋಗೆ ಐ ಇ ಎಮ್ ಭಾಗ 1 ಸ್ವೀಕೃತಿನೀಡುವ ಬಗ್ಗೆ, ಸಣ್ಣ ಮತ್ತು ಮಧ್ಯಮ ಎಂಟರ್ ಪ್ರೈಸಸ್ ನೀಡುವ ಬಗ್ಗೆ<br>ಭೂಮಿ/ ಆಸ್ತಿ ನೋಂದಣಿ | 8947 | 1009 | 8 |
| ಬಳ್ಳಾರಿ | 304 | ನಗರ ಪಾಲಿಕೆ ಬಳ್ಳಾರಿ 9<br>ತಹಶೀಲ್ದಾರ್ ಕಛೇರಿ, ಬಳ್ಳಾರಿ 8<br>ತಾಲೋಕು ಕಛೇರಿ , ಬಳ್ಳಾರಿ 5<br>ಪಟ್ಟಣ ಮುನಿಸಿಪಲ್ ಕೌನ್ಸಿಲ್‌ಸಿರಗುಪ್ಪ 5<br>ಉಪ ತಹಸಿಲ್ದಾರ್ ಕಛೇರಿ– ಹಿರೆಹಡಗಲಿ 4<br>ಉಪ ತಹಸಿಲ್ದಾರ್ ಕಛೇರಿ– ಹೊಸಪೇಟೆ 3<br>ಪಟ್ಟಣ ಮುನಿಸಿಪಲ್ ಕೌನ್ಸಿಲ್ ಹೋವಿನ ಹಡಗಲಿ 3<br>ಸಿರಗುಪ್ಪ. 100 ಹಾಸಿಗೆ ಆಸ್ಪತ್ರೆ, ಅಡೋನಿ ರಸ್ತೆ, ಸಿರಗುಪ್ಪ, ಸಿರಗುಪ್ಪ ತಾ॥ ಬಳ್ಳಾರಿ ಜಿಲ್ಲೆ–3 | ರೈತ ಕುಟುಂಬ ಪ್ರಮಾಣ ಪತ್ರ, ವಯೋಮಾನ ಪ್ರಮಾಣ ಪತ್ರ<br>ಕುಟುಂಬ ಜೀವಂತ ಪ್ರಮಾಣ ಪತ್ರ<br>ಸ್ಥಳೀಯ ಪ್ರಮಾಣ ಪತ್ರ<br>ಮ್ಯೂಟೇಷನ್ ಎಕ್ಸ್‌ಟ್ರ್ಯಾಕ್ಟ<br>ಪಡಿತರ ಚೀಟಿಯಲ್ಲಿ ಬದಲಾವಣೆ<br>ಖಾತಾ ಉದ್ಧೃತ , ಏಕವಾಸ ಸ್ಥಾನಕ್ಕೆ ನೀರು ಹಾಗೂ ಒಳಚರಂಡಿ ವ್ಯವಸ್ಥೆಗೆ ಪರವಾನಿಗೆ | 2044 | 2135 | 26 |

| ಜಿಲ್ಲೆಗಳು | ಅರ್ಜಿ ವಿಳಂಬ | ಅರ್ಜಿ ವಿಲೇ ವಿಳಂಬ ಮಾಡುತ್ತಿರುವ ಕಛೇರಿಗಳು ಹಾಗೂ ಅವುಗಳ ಸಂಖ್ಯೆ | ಭಾದಿತವಾದ ಸೇವೆಗಳು | ತಡ ವಿಳಂಬ 29.12.2012 | ಮಾಹೆಯಲ್ಲಿ ತಿರಸ್ಕೃತವಾಗಿರುವ ಅರ್ಜಿಗಳು 30/1/2013 | ಒಟ್ಟಾರೆ ದೂರುಗಳು |
|---|---|---|---|---|---|---|
| ಬೆಂಗಳೂರು ನಗರ | 3150 | ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ಆನೇಕಲ್ 210<br>ಉಪ ನೊಂದಣಧಿಕಾರಿ ಮಾದನಾಯಕನಹಳ್ಳಿ, ಬೆಂ– 83<br>ಉಪ ನೊಂದಣಧಿಕಾರಿ ಜಿಗಣಿ, ಬೆಂ– 61<br>ಮಡಿವಾಳ ಪೋಲೀಸ್‌ಠಾನೆ, ಮಡಿವಾಳ ಪೊಲೀಸ್ ಠಾಣೆ, 41<br>ಹೆಚ್‌ಎಎಲ್ ಪೊಲೀಸ್‌ಠಾಣೆ, ಪೊಲೀಸ್‌ಠಾಣೆ, 26<br>ಉಪ ನೊಂದಣಧಿಕಾರಿ ಜಾಲ, ಬೆಂ. 19<br>ಉಪ ನೊಂದಣಧಿಕಾರಿ ಪೀಣ್ಯ, ಬೆಂ 19<br>ಉಪ ನೊಂದಣಧಿಕಾರಿ ಬೀಡಹಳ್ಳಿ, ಬೆಂ– 18<br>ಬೆಂಗಳೂರು ನಗರ ಪೊಲೀಸ್ ಆಯುಕ್ತರು 17<br>ಉಪ ನೊಂದಣಧಿಕಾರಿ ಬೇಗೂರು, ಬೆಂ 14<br>ಉಪ ನೊಂದಣಧಿಕಾರಿ ಬಿಟಿಎಂ ಲೇಔಟ್, ಬೆಂ– 14<br>ಉಪ ನೊಂದಣಧಿಕಾರಿ ಆನೇಕಲ್, ಬೆಂ– 13<br>ಉಪ ತಹಸಿಲ್ದಾರ್ ಕಛೇರಿ–ಕಸಬಾ–1 13<br>ಆರ್‌ಟಿಓ ಬೆಂ.ವೆಸ್ಟ್ 12<br>ಉಪ ನೊಂದಣಧಿಕಾರಿ ಶ್ರೀರಾಮ್‌ಪುರ ಬೆಂ– 12<br>ಉಪ ನೊಂದಣಧಿಕಾರಿ ಯಶವಂತಪುರ, ಬೆಂ– 12<br>ಉಪ ನೊಂದಣಧಿಕಾರಿ ಇಂದಿರಾನಗರ, ಬೆಂ 11<br>ಉಪ ನೊಂದಣಧಿಕಾರಿ ಬಾಣಸವಾಡಿ, ಬೆಂ 10<br>ಉಪ ನೊಂದಣಧಿಕಾರಿ ಚಾಮರಾಜಪೇಟೆ, ಬೆಂ 10<br>ಉಪ ನೊಂದಣಧಿಕಾರಿ ಅಲಸೂರು, ಬಎಂ 9<br>ಉಪ ನೊಂದಣಧಿಕಾರಿ ಕೆ.ಆರ್‌ಪುರಂ, ಬೆಂ 9<br>ಉಪ ನೊಂದಣಧಿಕಾರಿ ವಿಜಯನಗರ ಬೆಂ– 9<br>ಉಪ ನೊಂದಣಧಿಕಾರಿ ಬ್ಯಾಟರಾಯನಪುರ, ಬೆಂ– 9<br>ಉಪ ತಹಸಿಲ್ದಾರ್ ಕಛೇರಿ–ದಾಸನಪುರ, ಬೆಂ–2 9<br>ಕನ್ನಡ ಮತ್ತು ಸಂಸ್ಕೃತಿ ಇಲಾಕೆ–ರವೀಂದ್ರ ಕಲಾಕ್ಷೇತ್ರ, ಬೆಂ 9<br>ಉಪ ನೊಂದಣಧಿಕಾರಿ ರಾಜಾಜಿನಗರ, ಬೆಂ– 8<br>ಉಪ ತಹಸಿಲ್ದಾರ್ ಕಛೇರಿ–. ವಿಹಿ 8<br>ಉಪ ನೊಂದಣಧಿಕಾರಿ ಬಸವನಗುಡಿ, ಬೆಂ– 8<br>ಉಪ ನೊಂದಣಧಿಕಾರಿ ಅತ್ತಿಬೆಲೆ, ಬೆಂ– 7<br>ಸಹಾಯಕ ಆಯುಕ್ತರ ಕಛೇರಿ, ಬೆಂಗಳೂರು ಸೌತ್ ವಿಭಾಗ– 7<br>ಉಪ ನೊಂದಣಧಿಕಾರಿ ವರ್ತೂರು, ಬೆಂ– 6<br>ಉಪ ನೊಂದಣಧಿಕಾರಿ ಸರ್ಜಾಪುರ, ಬೆಂ– 6<br>ತಿಲಕನಗರ ಪೊಲೀಸ್‌ಠಾಣೆ, ಪೊಲೀಸ್‌ಠಾಣೆ–6 | ಭೂಮಿ/ ಆಸ್ತಿ ನೋಂದಣಿ<br>ಪಹಿತರ ಚೀಟಿಯಲ್ಲಿ ಬದಲಾವಣೆ<br>ಎಲ್ಲಾ ತರಹದ ಜಾತಿ ಪ್ರಮಾಣ ಪತ್ರ<br>ವಾಹನ ನೋಂದಣಿ<br>, 1956.<br>ಅವಹಾಲು ಸ್ವೀಕೃತಿ ಹಾಗೂ ವಿಲೇ<br>ಜಾತಿ ಪ್ರಮಾಣ ಪತ್ರ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು(ಕರಬ್ ಉತ್ತರ)<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು(ಪಕ್ಕ ಟಿಪ್ಪಣಿ)<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಅಟ್ಲಾಸ್)<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಟಿಪ್ಪನ್)<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು(ಆಕಾರ್ ಬಾಂಡ್)<br>ಪಾಸ್ ಪೋರ್ಟ್ ್ ಪರೀಕ್ಷಿಸಲು ನಿರಾಕ್ಷೇಪಣ ಪತ್ರ | 2755 | 19970 | 204 |

| ಜಿಲ್ಲೆಗಳು | ಅರ್ಜಿ ವಿಳಂಬ | ಅರ್ಜಿ ವಿಲೇ ವಿಳಂಬ ಮಾಡುತ್ತಿರುವ ಕಛೇರಿಗಳು ಹಾಗೂ ಅವುಗಳ ಸಂಖ್ಯೆ | ಭಾದಿತವಾದ ಸೇವೆಗಳು | ತಡ ವಿಳಂಬ 29.12.2012 | ಮಾಹೆಯಲ್ಲಿ ತಿರಸ್ಕೃತವಾಗಿರುವ ಅರ್ಜಿಗಳು 30/1/2013 | ಒಟ್ಟಾರೆ ದೂರುಗಳು |
|---|---|---|---|---|---|---|
| | | ಉಪ ನೊಂದಣಧಿಕಾರಿ ಜಯನಗರ, ಬೆಂ– 6<br>ಭಾಣಸವಾಡಿ ಪಿಎಸ್, ಪೊಲೀಸ್ ಠಾಣೆ, ಬೆಂ 6<br>ಎಂಹೆಚ್ಓ, ಶಿವಾಜಿನಗರ ಬೆಂ– 5<br>ಉಪ ತಹಸಿಲ್ದಾರ್ ಕಛೇರಿ–ಜಿಗಣಿ–5<br>ಇಂದಿರಾನಗರ ಪೊಲೀಸ್ ಠಾಣೆ,<br>ಪೊಲೀಸ್ ಠಾಣೆ– 5<br>LVO 025 A – ಬೆಂ– 5<br>LVO 030 A – ಬೆಂ 5<br>ಉಪ ನೊಂದಣಧಿಕಾರಿ ಗಂಗಾನಗರ, ಬೆಂ– 5<br>ಉಪ ತಹಸಿಲ್ದಾರ್ ಕಛೇರಿ– ದಾಸಪುರ–1 4<br>ತಾಲೋಕು ಕಛೇರಿ , ಬೆಂಗಳೂರು ಈಸ್ಟ್– 4<br>ತಾಲೋಕು ಕಛೇರಿ , ಬೆಂಗಳೂರು ನಾರ್ಥ 4<br>ಡೆಪ್ಯೂಟಿ ಡೈರೆಕ್ಟರ್, ಬೆಂಗಳೂರು ವೆಸ್ಟ್ 4<br>ಉಪ ನೊಂದಣಧಿಕಾರಿ ಹೆಬ್ಬಾಳ ಬೆಂ– 4<br>ಎಆರ್ಓ– ಅಕೆರೆ 4<br>ಬ್ಯಾಟರಾಯನಪುರ ಪೊಲೀಸ್ ಠಾಣೆ, 4 | | | | |
| ಬೆಳಗಾಂ | 321 | ಸರ್ವೆ ಮೇಲ್ವಿಚಾರಕರು,<br>ತಾಲೋಕು ಕಛೇರಿ ,ಚಿಕ್ಕೋಡಿ, 33<br>ಆರ್‌ಟಿಒ ಗೋಕಾಕ್, ಬಿಳಗಾಂ ಜಿಲ್ಲೆ–. 23<br>ಉಪ ನೊಂದಣಧಿಕಾರಿ ಖಾನಾಪುರ 17<br>ಉಪ ನೊಂದಣಧಿಕಾರಿ ಬೈಲಹೊಂಗಲ 14<br>ತಾಲೋಕು ಕಛೇರಿ , ಚಿಕ್ಕೋಡಿ 13<br>ಜಿಲ್ಲಾ ಪೊಲೀಸ್ ಕಛೇರಿ ಬೆಳಗಾಂ 11<br>ಉಪ ತಹಸಿಲ್ದಾರ್ ಕಛೇರಿ– ಚಿಕ್ಕೋಡಿ 10<br>ಉಪ ತಹಸಿಲ್ದಾರ್ ಕಛೇರಿ– ಕಾರ್ಪೋರೇಷನ್ 9<br>ಉಪ ನೊಂದಣಧಿಕಾರಿ ರಾಯ್‌ಬಾಗ್ 9<br>ಉಪ ತಹಸಿಲ್ದಾರ್ ಕಛೇರಿ– ಇಂದ್‌ವಾಡಿ 9<br>ಉಪ ತಹಸಿಲ್ದಾರ್ ಕಛೇರಿ– ಕಸಬಾ 6<br>ಉಪ ತಹಸಿಲ್ದಾರ್ ಕಛೇರಿ–ಕಾಕಟಿ 4, ಆರ್‌ಟಿಒ–ಬೆಳಗಾಂ 3, ಉಪ ತಹಸಿಲ್ದಾರ್ ಕಛೇರಿ–ಮಾನೋಳಿ 2, ಉಪ ತಹಸಿಲ್ದಾರ್ ಕಛೇರಿ–ಗಿರ್‌ಗಾವ್ 2, ಉಪ ತಹಸಿಲ್ದಾರ್ ಕಛೇರಿ–ಘಟಪ್ರಭಾ 2, ನಗರ ಪಾಲಿಕೆ ಬೆಳಗಾಂ 2<br>ಉಪ ತಹಸಿಲ್ದಾರ್ ಕಛೇರಿ–ಕುಲಗೊಡು 2<br>ಟೌನ್ ಪಂಚಾಯತ್ ಸದಲಗಾ 2 | ಭೂಮಿ/ ಆಸ್ತಿ ನೋಂದಣಿ<br>ಡೊಮಿಸಿಲಿನ್ ಪ್ರಮಾಣ ಪತ್ರ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಅಟ್‌ಲಾಸ್)<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಆಕಾರ್ ಬಾಂಡ್)<br>ಸ್ಥಳೀಯ ಪ್ರಮಾಣ ಪತ್ರ,ವಾಹನ ನೊಂದಣಿ<br>ಕುಟುಂಬ ಜೀವಂತ ಪ್ರಮಾಣ ಪತ್ರ | 3876 | 4351 | 23 |

| ಜಿಲ್ಲೆಗಳು | ಅರ್ಜಿ ವಿಳಂಬ | ಅರ್ಜಿ ವಿಲೇ ವಿಳಂಬ ಮಾಡುತ್ತಿರುವ ಕಛೇರಿಗಳು ಹಾಗೂ ಅವುಗಳ ಸಂಖ್ಯೆ | ಭಾದಿತವಾದ ಸೇವೆಗಳು | ತಡ ವಿಳಂಬ 29.12.2012 | ಮಾಹೆಯಲ್ಲಿ ತಿರಸ್ಕೃತವಾಗಿರುವ ಅರ್ಜಿಗಳು 30/1/2013 | ಒಟ್ಟಾರೆ ದೂರುಗಳು |
|---|---|---|---|---|---|---|
| ಬೀದರ್ | 27 | ಉಪ ನೊಂದಣಾಧಿಕಾರಿ ಭರಾದ್ 14<br>ಉಪ ನೊಂದಣಾಧಿಕಾರಿ ಬಸವಕಲ್ಯಾಣ 4<br>ಉಪ ನೊಂದಣಾಧಿಕಾರಿ ಬೀದರ್ 4<br>ಉಪ ತಹಸಿಲ್ದಾರ್ ಕಛೇರಿಬೀದರ್ ನಾರ್ಥ್ 2<br>ಉಪ ನೊಂದಣಾಧಿಕಾರಿ ಹುಮ್ನಾಬಾದ್ 2<br>ಗ್ರಾಮ ಪಂಚಾಯತ್ ಕಛೇರಿ, ಕಮಲಾನಗರ ಆರ್‌ಟಿಒ ಬಸವಕಲ್ಯಾಣ– 2 | ಭೂಮಿ/ ಆಸ್ತಿ ನೋಂದಣಿ | 209 | 1444 | 13 |
| ಬಿಜಾಪುರ | 111 | ಆರ್‌ಟಿಒ ಬಿಜಾಪುರ 81, ಸರ್ವೆ ಮೇಲ್ವಿಚಾರಕರು,<br>ತಾಲೋಕು ಕಛೇರಿ , ಸಿಂದಗಿ 9<br>ಉಪ ತಹಸಿಲ್ದಾರ್ ಕಛೇರಿ–ಮುದ್ದೇಬಿಹಾಳ 7 | ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಆಕಾರ್ ಬಾಂಡ್) ವಾಹನ ನೋಂದವಣಿ,ಕುಟುಂಬ ಜೀವಂತ ಪ್ರಮಾಣ ಪತ್ರ<br>ಸ್ಥಳೀಯ ಪ್ರಮಾಣ ಪತ್ರ, ವಾಹನ ಕಲಿಕಾ ಪರವಾನಿಗೆ | 1274 | 913 | 11 |
| ಚಾಮರಾಜನಗರ | 66 | ನಗರ ಮುನಿಸಿಪಲ್ ಕಛೇರಿ ಕೊಳ್ಳೇಗಾಲ 10<br>ಉಪ ತಹಸಿಲ್ದಾರ್ ಕಛೇರಿ– ಬನ್ನೂರು 5<br>ಉಪ ನೊಂದಣಾಧಿಕಾರಿ ಗುಂಡ್ಲುಪೇಟೆ 4<br>ಉಪ ನೊಂದಣಾಧಿಕಾರಿ ಬನ್ನೂರು 3 | ಖಾತಾ ಉದೃತ<br>ಭೂಮಿ/ ಆಸ್ತಿ ನೋಂದಣಿ | 44 | 566 | 8 |
| ಚಿಕ್ಕಬಳ್ಳಾಪುರ | 0 | ಹೆಚ್ಚಿನ ವಿಳಂಬಿತ ವಿಲೇವಾರಿ ಇಲ್ಲ | – | 15 | 794 | 9 |
| ಚಿಕ್ಕಮಗಳೂರು | 17 | ಉಪ ನೊಂದಣಾಧಿಕಾರಿ ನರಸಿಂಹರಾಜಪುರ 8<br>ಉಪ ತಹಸಿಲ್ದಾರ್ ಕಛೇರಿ– ಕಸಬಾ 5<br>ಪಟ್ಟಣ ಮುನಿಸಿಪಲ್ ಕೌನ್ಸಿಲ್‌ಬೀರೂರು 5<br>ಉಪ ತಹಸಿಲ್ದಾರ್ ಕಛೇರಿ–ಅಂಬಾಲೆ 4<br>ಜಿಲ್ಲಾ ಪೊಲೀಸ್ ಕಛೇರಿ ಚಿಕ್ಕಮಗಳೂರು 3<br>ಉಪ ತಹಸಿಲ್ದಾರ್ ಕಛೇರಿ ಜಗ್ರ 2 ಉಪ ತಹಸಿಲ್ದಾರ್ ಕಛೇರಿ–ಅಮೃತಪುರ 3 | ಜಾತಿ ಪ್ರಮಾಣ ಪತ್ರ ಎಲ್ಲಾ ತರಹದ ಜಾತಿ ಪ್ರಮಾಣ ಪತ್ರ<br>ಭೂಮಿ/ ಆಸ್ತಿ ನೋಂದಣಿ | 681 | 1298 | 3 |
| ಚಿತ್ರದುರ್ಗ | 34 | ಉಪ ನೊಂದಣಾಧಿಕಾರಿ ಚಳ್ಳಕೆರೆ 16<br>ಉಪ ನೊಂದಣಾಧಿಕಾರಿ ಚಿತ್ರದುರ್ಗ 15<br>ಉಪ ನೊಂದಣಾಧಿಕಾರಿ ಹೊಳಲ್ಕೆರೆ 10<br>ತಾಲೋಕು ಕಛೇರಿ , ಚಿತ್ರದುರ್ಗ 6<br>ಪಟ್ಟಣ ಮುನಿಸಿಪಲ್ ಕೌನ್ಸಿಲ್ ಚಳ್ಳಕೆರೆ 6<br>ಉಪ ತಹಸಿಲ್ದಾರ್ ಕಛೇರಿ–ರಾಮಗಿರಿ 4 | ಖಾತಾ ಉದೃತ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಅಟ್ಲಾಸ್)<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಪಕ್ಕ ಟಿಪ್ಪಣಿ)<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಟಿಪ್ಪಣಿ)<br>ಭೂಮಿ/ ಆಸ್ತಿ ನೋಂದಣಿ | 81 | 1356 | 23 |
| ದಕ್ಷಿಣ ಕನ್ನಡ | 115 | ಎಲ್ ವಿ ಒ 260 – ಮಂಗಳೂರು 38<br>ಟಿಎಂಸಿ ಪುತ್ತೂರು (ಚೀಫ್ ಆಫೀಸರ್) 7<br>ಉಪ ನೊಂದಣಾಧಿಕಾರಿ ಸುಳ್ಯ 6<br>ಉಪ ನೊಂದಣಾಧಿಕಾರಿ ಪುತ್ತೂರು 5<br>ಉಪ ನೊಂದಣಾಧಿಕಾರಿ ಮುಲ್ಕಿ 4<br>ಜಿಲ್ಲಾ ಪೊಲೀಸ್ ಕಛೇರಿ ದಕ್ಷಿಣ ಕನ್ನಡ 57 | ಪಾಸ್ ಪೋರ್ಟ್ ನೀಡುವ ಬಗ್ಗೆ ನಿರಾಕ್ಷೇಪಣ ಪತ್ರ<br>ಶಸ್ತ್ರಾಸ್ತ್ರ ಪರವಾನಿಗೆ ನೀಡುವ ಬಗ್ಗೆ , ಪಿಟಿಷನ್<br>ಜನನ ಮರಣ, ಜೀವಂತ ಪ್ರಮಾಣ ಪತ್ರ<br>ಕೇಂದ್ರಿಯ ವಾಣಿಜ್ಯ ತೆರಿಗೆ ಪ್ರಕಾರ ಸಿ ನಮೂನೆ ನೀಡುವ ಬಗ್ಗೆ, 1956.<br>ಭೂಮಿ/ ಆಸ್ತಿ ನೋಂದಣಿನಿ1 ಹಾಗೂ ಇ 2 ಪ್ರಮಾಣ ಪತ್ರ ನೀಡುವ ಬಗ್ಗೆ | 178 | 1009 | 6 |

| ಜಿಲ್ಲೆಗಳು | ಅರ್ಜಿ ವಿಳಂಬ | ಅರ್ಜಿ ವಿಲೇ ವಿಳಂಬ ಮಾಡುತ್ತಿರುವ ಕಛೇರಿಗಳು ಹಾಗೂ ಅವುಗಳ ಸಂಖ್ಯೆ | ಭಾದಿತವಾದ ಸೇವೆಗಳು | ತಡ ವಿಳಂಬ 29.12.2012 | ಮಾಹೆಯಲ್ಲಿ ತಿರಸ್ಕೃತವಾಗಿರುವ ಅರ್ಜಿಗಳು 30/1/2013 | ಒಟ್ಟಾರೆ ದೂರುಗಳು |
|---|---|---|---|---|---|---|
| ದಾವಣಗೆರೆ | 36 | ನಗರ ಪಾಲಿಕೆ ದಾವಣಗೆರೆ 12<br>ಗ್ರಾಮಪಂಚಾಯಿತಿ ಕಛೇರಿ, ಆಲೂರು– 6<br>ಉಪ ತಹಶೀಲ್ದಾರ್ ಕಸಬಾ –4<br>ಉಪ ನೊಂದಣಧಿಕಾರಿ ಹೊನ್ನಾಳಿ 3<br>ಉಪ ತಹಸಿಲ್ದಾರ್ ಕಛೇರಿ–ಅನಗೂಡು 3<br>ಉಪ ತಹಸಿಲ್ದಾರ್ ಕಛೇರಿ–ಮಾಯಕೊಂಡ 3 | ಕುಡಿಯುವ ನೀರಿನ ನಿರ್ವಹಣೆ ,<br>ಸ್ಥಳೀಯ ಪ್ರಮಾಣ ಪತ್ರ<br>ಸಣ್ಣ ಹಾಗೂ ಮಾರ್ಜಿನಲ್ ರೈತ ಪ್ರಮಾಣ ಪತ್ರ<br>ಬೀದಿ ದೀಪಗಳ ನಿರ್ವಹಣೆ<br>ಭೂಮಿ/ ಆಸ್ತಿ ನೋಂದಣಿ<br>ಕುಟುಂಬ ಜೀವಂತ ಪ್ರಮಾಣ ಪತ್ರ<br>ಜನನ ಮರಣ, ಜೀವಂತ ಪ್ರಮಾಣ ಪತ್ರ | 295 | 1693 | 48 |
| ಧಾರವಾಡ | 64 | LVO 330 – ಹುಬ್ಬಳ್ಳಿ – 5<br>LVO 325 ಹುಬ್ಬಳ್ಳಿ– 8<br>ಜಿಲ್ಲಾ ಪೊಲೀಸ್ ಕಚೇರಿ–ಧಾರವಾಡ – 14<br>ಉಪ ನೊಂದಣಧಿಕಾರಿ ಹುಬ್ಬಳ್ಳಿ ನಾರ್ಥ್ 5<br>ಉಪ ನೊಂದಣಧಿಕಾರಿ ಕಲಘಟಗಿ 3<br>ಉಪ ನೊಂದಣಧಿಕಾರಿ ಕುಂದಗೋಳ 4 | ಭೂಮಿ/ ಆಸ್ತಿ ನೋಂದಣಿ,ಸಿ ನಮೂನೆ ನೀಡುವುದು | 750 | 1920 | 3 |
| ಗದಗ | 35 | ಉಪ ನೊಂದಣಧಿಕಾರಿ ಶಿರಹಟ್ಟಿ 18<br>ಉಪ ನೊಂದಣಧಿಕಾರಿ ಮುಂಡರಗಿ 6<br>ಉಪ ನೊಂದಣಧಿಕಾರಿ ನರಗುಂದ, ಉಪ ನೊಂದಣಧಿಕಾರಿರೋಣ –3 each | ಭೂಮಿ/ ಆಸ್ತಿ ನೋಂದಣಿ | 228 | 807 | 5 |
| ಗುಲ್ಬರ್ಗ | 114 | ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ಚಿಂಚೋಳಿ 28<br>ಉಪ ತಹಸಿಲ್ದಾರ್ ಕಛೇರಿ–ಸೇಡಂ–23<br>ನಗರ ಪಾಲಿಕೆ ಗುಲ್ಬರ್ಗ 14<br>ಉಪ ತಹಸಿಲ್ದಾರ್ ಕಛೇರಿ–ಮುಧೋಳ 12<br>ಉಪ ನೊಂದಣಧಿಕಾರಿ ಚಿತ್ತಾಪುರ 10<br>ಉಪ ತಹಸಿಲ್ದಾರ್ ಕಛೇರಿ–ಗುಲ್ಬರ್ಗ 8<br>ಉಪ ನೊಂದಣಧಿಕಾರಿ ಜೇವರ್ಗಿ 7<br>ಉಪ ತಹಸಿಲ್ದಾರ್ ಕಛೇರಿ–ಯ್ಯಾಪುರ 6<br>ಉಪ ನೊಂದಣಧಿಕಾರಿ ಅಳಂದ 5<br>ಉಪ ತಹಸಿಲ್ದಾರ್ ಕಛೇರಿ–ಚಿಂಚೋಳಿ4 | ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಅಟ್‌ಲಾಸ್)<br>ಖಾತಾ ಉದ್ಧೃತ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಆಕಾರ್ ಬಾಂಡ್)<br>ಭೂಮಿ/ ಆಸ್ತಿ ನೋಂದಣಿ<br>ಸ್ಥಳೀಯ ಪ್ರಮಾಣ ಪತ್ರ | 1257 | 1942 | 11 |
| ಕೊಪ್ಪಳ | 42 | ನಗರ ಮುನಿಸಿಪಲ್ ಕಛೇರಿ ಗಂಗಾವತಿ 7<br>ಉಪ ನೊಂದಣಧಿಕಾರಿ ಕುಷ್ಟಗಿ 16<br>ಉಪ ನೊಂದಣಧಿಕಾರಿಕೊಪ್ಪಳ 8<br>ಪಟ್ಟಣ ಮುನಿಸಿಪಲ್ ಕೌನ್ಸಿಲ್ ಕುಷ್ಟಗಿ 7<br>ಉಪ ನೊಂದಣಧಿಕಾರಿ ಯಲ್ಬರ್ಗು 6<br>Survey & Settlement - 4 | ಖಾತಾ ಉದ್ಧೃತ<br>ಜನನ ಮರಣ, ಜೀವಂತ ಪ್ರಮಾಣ ಪತ್ರ<br>ಭೂಮಿ/ ಆಸ್ತಿ ನೋಂದಣಿ,ಭೂಮಿ ಸರ್ವೆ –2 | 372 | 498 | 14 |

| ಜಿಲ್ಲೆಗಳು | ಅರ್ಜಿ ವಿಳಂಬ | ಅರ್ಜಿ ವಿಲೇ ವಿಳಂಬ ಮಾಡುತ್ತಿರುವ ಕಛೇರಿಗಳು ಹಾಗೂ ಅವುಗಳ ಸಂಖ್ಯೆ | ಭಾದಿತವಾದ ಸೇವೆಗಳು | ತಡ ವಿಳಂಬ 29.12.2012 | ಮಾಹೆಯಲ್ಲಿ ತಿರಸ್ಕೃತವಾಗಿರುವ ಅರ್ಜಿಗಳು 30/1/2013 | ಒಟ್ಟಾರೆ ದೂರುಗಳು |
|---|---|---|---|---|---|---|
| ಹಾಸನ | 98 | ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ ,ಚನ್ನಾರಾಯಪಟ್ಟಣ 18<br>ತಾಲೋಕು ಕಛೇರಿ , ಚನ್ನರಾಯಪಟ್ಟಣ 14<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ, ಅರಕಲಗೂಡು 13<br>ಉಪ ನೊಂದಣಧಿಕಾರಿ ಅರಸಿಕೆರೆ 4<br>ಉಪ ನೊಂದಣಧಿಕಾರಿ ಹೊಳೆನಗರಸೀಪುರ 4<br>ಉಪ ನೊಂದಣಧಿಕಾರಿ ಬಾಣವರ 4<br>ಪಟ್ಟಣ ಮುನಿಸಿಪಲ್ ಕೌನ್ಸಿಲ್ ಚನ್ನರಾಯಪಟ್ಟಣ 3<br>ಉಪ ನೊಂದಣಧಿಕಾರಿ ಅರಕಲಗೂಡು 2<br>ಉಪ ಆಯುಕ್ತರ ಕಛೇರಿ ಹಾಸಡನ 57<br>ಉಪ ನೊಂದಣಧಿಕಾರಿ ಹಾಸನ 2 | ಕೃಷಿಯೇತರ ಭೂ ಪರಿವರ್ತನೆ, ಖಾತಾ ಉದ್ಧೃತ<br>ಖಾತಾ ಉದ್ಧೃತ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಟಿಪ್ಪಣಿ)<br>ಮಾಹಿತಿ ಹಕ್ಕು ಪ್ರಮಾಣ ಪತ್ರ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಪಕ್ಕ ಟಿಪ್ಪಣಿ)<br>ಮ್ಯೂಟೇಷನ್ ಎಕ್ಸ್‌ಟ್ರ್ಯಾಕ್ಟ ಭೂಮಿ/ ಆಸ್ತಿ ನೋಂದಣಿ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು(ಆಕಾರ್ ಬಾಂಡ್) | 1151 | 1672 | 15 |
| ಹಾವೇರಿ | 12 | ಉಪ ನೊಂದಣಧಿಕಾರಿ ಹಾನ್ಗಲ್ 9<br>ಉಪ ತಹಸಿಲ್ದಾರ್ ಕಛೇರಿ–ಶಿಗ್ಗಾವ್ 3 | ಭೂಮಿ/ ಆಸ್ತಿ ನೋಂದಣಿ<br>ಜಾತಿ ಪ್ರಮಾಣ ಪತ್ರ | 30 | 1078 | 5 |
| ಕೊಡಗು | 12 | ಜಿಲ್ಲಾ ಪೊಲೀಸ್ ಕಛೇರಿ ಕೊಡಗು 7<br>ಉಪ ನೊಂದಣಧಿಕಾರಿ ಮಡಿಕೇರಿ 3 | ಭೂಮಿ/ ಆಸ್ತಿ ನೋಂದಣಿ | 55 | 515 | 5 |
| ಕೋಲಾರ | 171 | ಉಪ ತಹಸಿಲ್ದಾರ್ ಕಛೇರಿ–ಕಸಬಾ 24<br>ಉಪ ತಹಸಿಲ್ದಾರ್ ಕಛೇರಿ–ನೆಲವಂಕಿ 17<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ, ಕೋಲಾರ 15, ಉಪ ನೊಂದಣಧಿಕಾರಿ ಬಂಗಾರಪೇಟೆ 12, ಉಪ ನೊಂದಣಧಿಕಾರಿ ಮಾಲೂರು 8, ಉಪ ತಹಸಿಲ್ದಾರ್ ಕಛೇರಿ–ಬೈಕೂರು 7<br>ಉಪ ತಹಸಿಲ್ದಾರ್ ಕಛೇರಿ–ವೇಮಗಲ್ 6<br>ಉಪ ತಹಸಿಲ್ದಾರ್ ಕಛೇರಿ ಸಗಟೂರು 5<br>ಉಪ ನೊಂದಣಧಿಕಾರಿ ಮುಳಬಾಗಿಲು 4<br>ಉಪ ತಹಸಿಲ್ದಾರ್ ಕಛೇರಿ–ರೋಣ 4<br>ತಾಲೋಕು ಕಛೇರಿ ,ಮಾಲೂರು 4<br>ಉಪ ತಹಸಿಲ್ದಾರ್ ಕಛೇರಿ–ನರಸಪುರ 4<br>ಉಪ ನೊಂದಣಧಿಕಾರಿ ಕೋಲಾರ 4 | ಕೃಷಿಯೇತರ ಭೂಮಿ ಪರಿವರ್ತನೆ<br>ಸ್ಥಳೀಯ ಪ್ರಮಾಣ ಪತ್ರ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಆಕಾರ್ ಬಾಂಡ್)<br>ಎಲ್ಲಾ ತರಹದ ಜಾತಿ ಪ್ರಮಾಣ ಪತ್ರ<br>ಭೂಮಿ/ ಆಸ್ತಿ ನೋಂದಣಿ<br>ಜಾತಿ ಪ್ರಮಾಣ ಪತ್ರ | 264 | 1881 | 15 |
| ರಾಮನಗರ | 303 | ಉಪ ನೊಂದಣಧಿಕಾರಿ ಚನ್ನಪಟ್ಟಣ 18<br>ಉಪ ನೊಂದಣಧಿಕಾರಿ ಮಾಗಡಿ 5<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯ'ಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ರಾಮನಗರ<br>ಉಪ ಆಯುಕ್ತರ ಕಛೇರಿ ,ರಾಮನಗರ 2<br>ಉಪ ತಹಸಿಲ್ದಾರ್ ಕಛೇರಿ–ಹಾರೋಹಳ್ಳಿ 2<br>ಗ್ರಾಮ ಪಂಚಾಯತಿ ಕಛೇರಿ, ಗೋಪಹಳ್ಳಿ 2 | ಭೂಮಿ/ ಆಸ್ತಿ ನೋಂದಣಿ | 1091 | 452 | 4 |

| ಜಿಲ್ಲೆಗಳು | ಅರ್ಜಿ ವಿಳಂಬ | ಅರ್ಜಿ ವಿಲೇ ವಿಳಂಬ ಮಾಡುತ್ತಿರುವ ಕಛೇರಿಗಳು ಹಾಗೂ ಅವುಗಳ ಸಂಖ್ಯೆ | ಭಾದಿತವಾದ ಸೇವೆಗಳು | ತಡ ವಿಳಂಬ 29.12.2012 | ಮಾಹೆಯಲ್ಲಿ ತಿರಸ್ಕೃತವಾಗಿರುವ ಅರ್ಜಿಗಳು 30/1/2013 | ಒಟ್ಟಾರೆ ದೂರುಗಳು |
|---|---|---|---|---|---|---|
| ಮಂಡ್ಯ | 69 | ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ಮಂಡ್ಯ 14<br>ಉಪ ನೊಂದಣಧಿಕಾರಿ ಕೆ.ಆರ್.ಪೇಟೆ14<br>ತಾಲೋಕು ಕಛೇರಿ , ನಾಗಮಂಗಲ 10<br>ಉಪ ನೊಂದಣಧಿಕಾರಿ ಮಳವಳ್ಳಿ 9<br>ತಾಲೋಕು ಕಛೇರಿ , ಶ್ರೀರಂಗಪಟ್ಟಣ. 5<br>ಉಪ ನೊಂದಣಧಿಕಾರಿ ಬೇಲೂರು 5<br>ನಗರ ಮುನಿಸಿಪಲ್ ಕಛೇರಿ ಮಂಡ್ಯ 5<br>ಉಪ ನೊಂದಣಧಿಕಾರಿ ಪಾಂಡವಪುರ 4 | ಏಕ ವಾಸ ಸ್ಥಾನ 2400 ಚದರ ಕಟ್ಟಡ ಪರವಾನಿಗೆ<br>ಮಾಹಿತಿ ಹಕ್ಕು ಪ್ರಮಾಣ ಪತ್ರ<br>ಮ್ಯೂಟೆಷನ್ ಎಕ್ಸ್‌ಟ್ರ್ಯಾಕ್ಟ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಆಕಾರ್ ಬಾಂಡ್)<br>ಭೂಮಿ/ ಆಸ್ತಿ ನೋಂದಣಿ | 948 | 2130 | 14 |
| ಮೈಸೂರು | 175 | ಉಪ ತಹಸಿಲ್ದಾರ್ ಕಛೇರಿ–ಕಸಬಾ 11, ಮೈಸೂರು (ಪೂರ್ವ) 9<br>ಉಪ ತಹಸಿಲ್ದಾರ್ ಕಛೇರಿ–ಸರಸ್ವತಿ ಪುರ 10<br>ಉಪ ತಹಸಿಲ್ದಾರ್ ಕಛೇರಿ–ಮೈಸೂರು ಟೌನ್ 4<br>ಉಪ ಆಯುಕ್ತರ ಕಛೇರಿ ಮೈಸೂರು ಸಿಟಿ 35<br>ಜಿಲ್ಲಾ ಪೊಲೀಸ್ ಕಛೇರಿ ಮೈಸೂರು –10<br>ಉಪ ತಹಸಿಲ್ದಾರ್ ಕಛೇರಿ–ಯಳವಾಳ 3<br>ಉಪ ತಹಸಿಲ್ದಾರ್ ಕಛೇರಿ–ಬೆಟ್ಟಪುರ 2<br>ಪಟ್ಟಣ ಪಂಚಾಯತ್ ಕಛೇರಿ ಹೆಚ್‌ಡಿಕೋಟೆ 2<br>ಉಪ ತಹಸಿಲ್ದಾರ್ ಕಛೇರಿ–ಮೈಸೂರು ಎಸ್ ಟಿ ಎಫ್ 2 | ಅವಹಾಲು ಸ್ವೀಕೃತಿ ಹಾಗೂ ವಿಲೇ<br>ಕುಟುಂಬ ಜೀವಂತ ಪ್ರಮಾಣ ಪತ್ರ<br>ಭೂಮಿ/ ಆಸ್ತಿ ನೋಂದಣಿ<br>ಸ್ಥಳೀಯ ಪ್ರಮಾಣ ಪತ್ರ | 1018 | 2468 | 19 |
| ರಾಯಚೂರು | 280 | ಉಪ ನೊಂದಣಧಿಕಾರಿ ದೇವದುರ್ಗ 51<br>ಉಪ ತಹಸಿಲ್ದಾರ್ ಕಛೇರಿ–ದೇವದುರ್ಗ 43<br>ಉಪ ನೊಂದಣಧಿಕಾರಿ ಸಿಂದನೂರು 29<br>ಉಪ ನೊಂದಣಧಿಕಾರಿ ರಾಯಚೂರು 11<br>ಉಪ ನೊಂದಣಧಿಕಾರಿ ಮಾನ್ವಿತು 10<br>ಉಪ ತಹಸಿಲ್ದಾರ್ ಕಛೇರಿ–ಗುರಗುಂಟ 9<br>ಪಟ್ಟಣ ಮುನಿಸಿಪಲ್ ಕೌನ್ಸಿಲ್ ಲಿಂಗಸಗೂರು 8<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ ,ಲಿಂಗಸಗೂರು 6<br>ಉಪ ತಹಸಿಲ್ದಾರ್ ಕಛೇರಿ–ಲಿಂಗಸಗೂರು 5 | ಖಾತಾ ಉದೃತ<br>ಸ್ಥಳೀಯ ಪ್ರಮಾಣ ಪತ್ರ<br>ಭೂಮಿ/ ಆಸ್ತಿ ನೋಂದಣಿ | 2632 | 1649 | 24 |
| ಉಡುಪಿ | 4 | ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ಕುಂದಾಪುರ 28<br>ತಾಲೋಕು ಕಛೇರಿ , ಕುಂದಾಪುರ 14<br>ತಾಲೋಕು ಕಛೇರಿ , ಉಡುಪಿ 13<br>ಸರ್ವೆ ಮೇಲ್ವಿಚಾರಕರು , ವಿಶೇಷ ತಾಲೋಕು ಕಛೇರಿ, ಬ್ರಹ್ಮಾವರ 7 | ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಟಿಪ್ಪಣಿ)<br>ಮ್ಯೂಟೆಷನ್ ಎಕ್ಸ್‌ಟ್ರ್ಯಾಕ್ಟ<br>ಮಾಹಿತಿ ಹಕ್ಕು ಪ್ರಮಾಣ ಪತ್ರ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಅಟ್ಲಾಸ್) | 35 | 574 | 12 |

| ಜಿಲ್ಲೆಗಳು | ಅರ್ಜಿ ವಿಳಂಬ | ಅರ್ಜಿ ವಿಲೇ ವಿಳಂಬ ಮಾಡುತ್ತಿರುವ ಕಛೇರಿಗಳು ಹಾಗೂ ಅವುಗಳ ಸಂಖ್ಯೆ | ಭಾದಿತವಾದ ಸೇವೆಗಳು | ತಡ ವಿಳಂಬ 29.12.2012 | ಮಾಹೆಯಲ್ಲಿ ತಿರಸ್ಕೃತವಾಗಿರುವ ಅರ್ಜಿಗಳು 30/1/2013 | ಒಟ್ಟಾರೆ ದೂರುಗಳು |
|---|---|---|---|---|---|---|
| ಶಿವಮೊಗ್ಗ | 191 | ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ಶಿವಮೊಗ್ಗ53<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ಶಿಕಾರಿಪುರ 24<br>ಉಪ ತಹಸಿಲ್ದಾರ್ ಕಛೇರಿ–ಕಸಬಾ 21<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ಭದ್ರಾವತಿ 19<br>ಉಪ ತಹಸಿಲ್ದಾರ್ ಕಛೇರಿ–ಅನವಟ್ಟಿ 16<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ಸಾಗರ 13, ಉಪ ನೊಂದಣಧಿಕಾರಿ ಶಿವಮೊಗ್ಗ 12, ನಗರ ಮುನಿಸಿಪಲ್ ಕಛೇರಿ ಭದ್ರಾವತಿ 12, ತಾಲೋಕು ಕಛೇರಿ, ಭದ್ರವತಿ 9<br>ಜಿಲ್ಲಾ ಪೊಲೀಸ್ ಕಛೇರಿ ಶಿವಮೊಗ್ಗ 7<br>ಉಪ ನೊಂದಣಧಿಕಾರಿ ಸಾಗರ 6, ಉಪ ನೊಂದಣಧಿಕಾರಿ ಸೊರಬ 5, ಉಪ ತಹಸಿಲ್ದಾರ್ ಕಛೇರಿ–ಹೊಳಲೂರು 5, ಉಪ ತಹಸಿಲ್ದಾರ್ ಕಛೇರಿ–ಊಳವಿ 5<br>ಉಪ ತಹಸಿಲ್ದಾರ್ ಕಛೇರಿ–ಆಗುಂಬೆ 4<br>ತಾಲೋಕು ಕಛೇರಿ , ಸಾಗರ 4<br>ನಗರ ಮುನಿಸಿಪಲ್ ಕಛೇರಿ ಶಿವಮೊಗ್ಗ 4 | ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು(ಪಕ್ಕ ಟಿಪ್ಪಣಿ)<br>ಜನನ ಮರಣ, ಜೀವಂತ ಪ್ರಮಾಣ ಪತ್ರ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಅಟ್ಲಾಸ್)<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಟಿಪ್ಪಣಿ)<br>ಭೂಮಿ/ ಆಸ್ತಿ ನೋಂದಣಿ<br>ಸ್ಥಳೀಯ ಪ್ರಮಾಣ ಪತ್ರ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಆಕಾರ್ ಬಾಂಡ್) | 1212 | 1671 | 11 |
| ಯಾದಗಿರಿ | 154 | ಉಪ ನೊಂದಣಧಿಕಾರಿ ಯಾದಗಿರಿ 9<br>ಉಪ ನೊಂದಣಧಿಕಾರಿ ಷಹಪುರ 9<br>ಉಪ ತಹಸಿಲ್ದಾರ್ ಕಛೇರಿ–ಹುಣಸಗಿ 7<br>ಉಪ ತಹಸಿಲ್ದಾರ್ ಕಛೇರಿ–ಕಕೆರ 6<br>ಉಪ ತಹಸಿಲ್ದಾರ್ ಕಛೇರಿ–ಸೈದಪುರ 6<br>ಉಪ ನೊಂದಣಧಿಕಾರಿಹುಣಸಗಿ 3<br>ಟೌನ್ ಪಂಚಾಯತ್ ಗುರುಮಿಟಕಲ್ 3<br>ಉಪ ತಹಸಿಲ್ದಾರ್ ಕಛೇರಿ–ಗುರುಮಿಟಕಲ್ 3<br>ನಗರ ಮುನಿಸಿಪಲ್ ಕಛೇರಿ ಯಾದಗಿರಿ 3<br>ಉಪ ತಹಸಿಲ್ದಾರ್ ಕಛೇರಿ–ಷಹಪುರ 3 | ಎಲ್ಲಾ ತರಹದ ಜಾತಿ ಪ್ರಮಾಣ ಪತ್ರ<br>ಜಾತಿ ಪ್ರಮಾಣ ಪತ್ರ<br>ಸ್ಥಳೀಯ ಪ್ರಮಾಣ ಪತ್ರ<br>ಭೂಮಿ/ ಆಸ್ತಿ ನೋಂದಣಿ | 987 | 671 | 8 |
| ಉತ್ತರಕನ್ನಡ | 4 | ಉಪ ನೊಂದಣಧಿಕಾರಿ ಭಟ್ಕಳ 14<br>ಉಪ ನೊಂದಣಧಿಕಾರಿ ಸಿದ್ದಾಪುರ 8<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ಕುಮುಟಾ 5, ನಗರ ಮುನಿಸಿಪಲ್ ಕಛೇರಿ ಕಾರವಾರ 4<br>ಉಪ ನೊಂದಣಧಿಕಾರಿ ಹಳಿಯಾಳ 3<br>ಟೌನ್ ಪಂಚಾಯತ್ ಸಿದ್ದಾಪುರ 2<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ ,ಸಿರಸಿ 2<br>ಉಪ ನೊಂದಣಧಿಕಾರಿ ಮುಂದಗೊಂಡ 2 | ಏಕ ವಾಸ ಸ್ಥಾನ ಪರವಾನಿಗೆ 2400 ಚದರ ಅಡಿ ವಿಸ್ತಿರ್ಣ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಗ್ರಾಮ ನಕ್ಷೆ)<br>ಭೂಮಿ/ ಆಸ್ತಿ ನೋಂದಣಿ | 72 | 841 | 12 |

| ಜಿಲ್ಲೆಗಳು | ಅರ್ಜಿ ವಿಳಂಬ | ಅರ್ಜಿ ವಿಲೇ ವಿಳಂಬ ಮಾಡುತ್ತಿರುವ ಕಛೇರಿಗಳು ಹಾಗೂ ಅವುಗಳ ಸಂಖ್ಯೆ | ಭಾದಿತವಾದ ಸೇವೆಗಳು | ತಡ ವಿಳಂಬ 29.12.2012 | ಮಾಹೆಯಲ್ಲಿ ತಿರಸ್ಕೃತವಾಗಿರುವ ಅರ್ಜಿಗಳು 30/1/2013 | ಒಟ್ಟಾರೆ ದೂರುಗಳು |
|---|---|---|---|---|---|---|
| ತುಮಕೂರು | 246 | ಉಪ ನೊಂದಣಧಿಕಾರಿಶಿರಾ 35<br>ಉಪ ನೊಂದಣಧಿಕಾರಿ ಗುಬ್ಬಿ 32<br>ಉಪ ತಹಸಿಲ್ದಾರ್ ಕಛೇರಿ–ಕಸಬಾ 29<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ತುಮಕೂರು 21<br>ಉಪ ನೊಂದಣಧಿಕಾರಿ ಕುಣಿಗಲ್ 15<br>ಉಪ ತಹಸಿಲ್ದಾರ್ ಕಛೇರಿ–ಹಗಲವಾಡಿ–13<br>ಪಟ್ಟಣ ಮುನಿಸಿಪಲ್ ಕೌನ್ಸಿಲ್ ಕುಣಿಗಲ್ 9<br>ಉಪ ನೊಂದಣಧಿಕಾರಿ ಪಾವಗಡ 7<br>ಉಪ ನೊಂದಣಧಿಕಾರಿ ಮಧುಗಿರಿ 6<br>ಉಪ ನೊಂದಣಧಿಕಾರಿ ತುರವೆಕರೆ 5<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ , ಚಿಕ್ಕನಾಯಕನಹಳ್ಳಿ 5<br>ಉಪ ನೊಂದಣಧಿಕಾರಿ ಹುಲಿದುರ್ಗ 5<br>ಉಪ ತಹಸಿಲ್ದಾರ್ ಕಛೇರಿ–ಹೆಬ್ಬೂರು 4<br>ಉಪ ತಹಸಿಲ್ದಾರ್ ಕಛೇರಿ–ನಿಡಗಲ್ 4<br>ಸರ್ವೆ ಮೇಲ್ವಿಚಾರಕರು, ತಾಲೋಕು ಕಛೇರಿ ,ಮಧುಗಿರಿ 4 ಆರ್ ಟಿ ಒ - ತುಮಕೂರು 4<br>ಉಪ ತಹಸಿಲ್ದಾರ್ ಕಛೇರಿ– ಹುಳಿಯಾರ್ 3<br>ಟೌನ್ ಪಂ ಚಾಯತ್ ಗುಬ್ಬಿ 3<br>ಉಪ ತಹಸಿಲ್ದಾರ್ ಕಛೇರಿ – ಇಟ್ಟ ಕಡಿಬೆನ ಹಳ್ಳಿ2<br>ಉಪ ತಹಸಿಲ್ದಾರ್ ಕಛೇರಿ – ಹಂಡ ಹಂಡನ ಕೆರೆ 2<br>ಉಪ ತಹಸಿಲ್ದಾರ್ ಕಛೇರಿ – ಕಂಡಿಕೆರೆ 2<br>ಉಪ ತಹಸಿಲ್ದಾರ್ ಕಛೇರಿ – ಕೋರ 2<br>ಉಪ ತಹಸಿಲ್ದಾರ್ ಕಛೇರಿ – ಪೆದ್ದನ ಹಳ್ಳಿ ಗ್ರಾ ಪಂ ಚಾಯತ್ 2 | ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಆಕಾರ್ ಬಾಚಿಡ್)<br>ಮ್ಯುಚಿಣ್ಮುಚಿ ಇಥಣಡಿಚಿಥಿಣ<br>ಎಲ್ಲಾ ತರಹದ ಜಾತಿ ಪ್ರಮಾಣ ಪತ್ರ<br>ಸೆಕ್ಷನ್ ಪ್ರಕಾರ ಸರ್ವೆ ನಕಲು ಪ್ರತಿ ನೀಡುವುದು (ಪಕ್ಕ ಟಿಪ್ಪಣಿ)<br>ಸ್ಥಳೀಯ ಪ್ರಮಾಣ ಪತ್ರ<br>ಜಾತಿ ಪ್ರಮಾಣ ಪತ್ರ<br>ಭೂಮಿ/ ಆಸ್ತಿ ನೋಂದಣಿ | 1271 | 4891 | 38 |
| ಒಟ್ಟು | **6427** | | | **34362** | **63120** | **612** |

# ಅಧ್ಯಾಯ ೩ ಬಿ – ಬೈಪಾಸ್

**ಸಕಾಲದಲ್ಲಿ ಒಂದು ಅತೀ ದೊಡ್ಡ ಸಮಸ್ಯೆಯಾನೆಂದರೆ ಬೈಪಾಸ್. ಬೈಪಾಸ್ ಎಂದರೆ ಅರ್ಜಿಗಳನ್ನು ಸಕಾಲ ವ್ಯವಸ್ಥೆಯಲ್ಲಿ ಒಳಪಡಿಸದೆ, ಸೇವೆಯನ್ನು ಸಲ್ಲಿಸುವುದು. ಈ ಮೂಲಕ ಸಕಾಲ ನಿಯಮಳಂದ ತಪ್ಪಿಸುತ್ತಾರೆ.**

ಸಕಾಲ ಅನುಷ್ಟಾನದ ಮೊದಲು ಮತ್ತು ನಂತರದ ಅರ್ಜಿ ಸ್ವೀಕೃತಿ ವಿವರಗಳು –

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಇಲಾಖೆಗಳಲ್ಲಿ ಕಾರ್ಯಗಳು ಬೈಪಾಸ್ ಆಗುತ್ತಿರುವುದು ಕಂಡುಬಂದಿದೆ ( -ve % ಬೆಳವಣಿಗೆ) | ಇಲಾಖೆಗಳಲ್ಲಿ ಅರ್ಜಿಗಳು ಹೆಚ್ಚಾಗಿರುವುದು ಕಂಡುಬಂದಿದೆ ( +ve % ಬೆಳವಣಿಗೆ) |
|---|---|---|---|
| 1 | ಬೆಂಗಳೂರು ನಗರ | ವಾಣಿಜ್ಯ ತೆರಿಗೆ ಇಲಾಖೆ (–42.27),<br>ಡ್ರಗ್ (–20.80), ಬಿಎಮ್ ಟಿ ಸಿ (–2.09).<br>ಕೆ ಎಸ್ ಆರ್ ಟಿ ಸಿ (–23.57),<br>ಮಹಿಳೆ ಮತ್ತು ಮಕ್ಕಳ ಕಲ್ಯಾಣ (–67.61), | ಕಂದಾಯ ಇಲಾಖೆ (24.78),<br>ಆಹಾರ ಮತ್ತು ನಾಗರಿಕ ಸರಬರಾಜು (86.88),<br>ಆಯುಷ್ (36.73),<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ (43.39), |
| 2 | ಬೆಂಗಳೂರು ಗ್ರಾಮಾಂತರ | ಕಂದಾಯ (–27.75), ಫಅಆ (–97.54), ಗಜಃ (–19) | ನಗರ ಮುನಿಸಿಪಲ್ ಕೌನ್ಸಿಲ್ (30.63) |
| 3 | ಬೀದರ್ | ಕಂದಾಯ ಇಲಾಖೆ (–15), ವಾಣಿಜ್ಯ ತೆರಿಗೆ (–23.80), ಒಳಾಡಳಿತ ಇಲಾಖೆ (–32.48), ಸಾರಿಗೆ ಇಲಾಖೆ(–11.39) | ಯಾವುದೇ ಪ್ರಗತಿ ಕಂಡು ಬಂದಿಲ್ಲ |
| 4 | ಬಾಗಲಕೋಟೆ | ಕಂದಾಯ (–36.89), ಮಹಿಳೆ ಮತ್ತು ಮಕ್ಕಳ ಕಲ್ಯಾಣ (–35.12), ಕಾರ್ಮಿಕ ಇಲಾಖೆ ಇಲಾಖೆ (–33.74), ಆರೋಗ್ಯ ಮತ್ತು ಕುಟುಂಬ ಕಲ್ಯಾಣ (–6.29), ಡ್ರಗ್ಸ್ (–11.67) | ಶಿಕ್ಷಣ (33.62), ಆಯುಷ್ (46.67) |
| 5 | ಬಿಜಾಪುರ | ಆರ್ ಟಿ ಒ(–19.37),ಕಂದಾಯ(–24.8),ಗ್ರಾಮೀಣಾಭಿವೃದ್ದಿ(–31.4) | ಕಾರ್ಮಿಕ ಇಲಾಖೆ(16.9), ಡ್ರಗ್ಸ್(32.1), ವಾಣಿಜ್ಯ ತೆರಿಗೆ(26.3) |
| 6 | ಬಳ್ಳಾರಿ | ಗ್ರಾಮೀಣಾಭಿವೃದ್ದಿ (–14.26) | ಡ್ರಗ್ಸ್ ಕಂಟ್ರೋಲರ್ (99.37), ಟಿ ಎಸ್ ಸಿ (27.15) |
| 7 | ಬೆಳಗಾಂ | ನಗರಾಭಿವೃದ್ದಿ ಇಲಾಖೆ (–11.85) | ಒಳಾಡಳಿತ ಇಲಾಖೆ (0.56),ಕಾರ್ಮಿಕ ಇಲಾಖೆ ಇಲಾಖೆ (59.04) ಸಾರಿಗೆ ಇಲಾಖೆ ಇಲಾಖೆ – (79.60) |
| 8 | ಚಿಕ್ಕಮಗಳೂರು | ಕಾರ್ಮಿಕ ಇಲಾಖೆ ಇಲಾಖೆ (–74.58), | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ (77.67),ಆರೋಗ್ಯ ಮತ್ತು ಕುಟುಂಬ ಕಲ್ಯಾಣಇಲಾಖೆ (63.15),ಒಳಾಡಳಿತ ಇಲಾಖೆ (20.71), ಸಾರಿಗೆ ಇಲಾಖೆ ಇಲಾಖೆ (45.58) |
| 9 | ಚಿತ್ರದುರ್ಗ | ಕಂದಾಯ (–30.60),ಗ್ರಾಮೀಣಾಭಿವೃದ್ದಿ (–27.80), ಸಾರಿಗೆ ಇಲಾಖೆ – ಆರ್ ಟಿ ಒ(–75.71),ಟಿ ಎಮ್ ಸಿ(–66.08),ತಾಲೋಕು ಪಂಚಾಯತ್ (–50.37) | ವಾಣಿಜ್ಯ ತೆರಿಗೆ (61.22),ಫಅಆ (70.76), ಆಹಾರ ಮತ್ತು ನಾಗರೀಕ ಪೂರೈಕೆ (23.95),ಕಾರ್ಮಿಕ ಇಲಾಖೆ ಇಲಾಖೆ (16.30),ಶಿಕ್ಷಣ (73.58),ಒಳಾಡಳಿತ (89.24),ಆರೋಗ್ಯ ಮತ್ತು ಕುಟುಂಬ ಕಲ್ಯಾಣ (62.95),ಸಿ ಎಮ್ ಸಿ (10.97) |

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಇಲಾಖೆಗಳಲ್ಲಿ ಕಾರ್ಯಗಳು ಬೈಪಾಸ್ ಆಗುತ್ತಿರುವುದು ಕಂಡುಬಂದಿದೆ ( -ve % ಬೆಳವಣಿಗೆ) | ಇಲಾಖೆಗಳಲ್ಲಿ ಅರ್ಜಿಗಳು ಹೆಚ್ಚಾಗಿರುವುದು ಕಂಡುಬಂದಿದೆ ( +ve % ಬೆಳವಣಿಗೆ) |
|---|---|---|---|
| 10 | ಚಿಕ್ಕಬಳ್ಳಾಪುರ | ಆಹಾರ ಮತ್ತು ನಾಗರೀಕ ಪೂರೈಕೆ (–35.23), ವಾಣಿಜ್ಯ ತೆರಿಗೆ (–32.70), ಕಾರ್ಮಿಕ ಇಲಾಖೆ ಇಲಾಖೆ (–40.89) | ಕಂದಾಯ (32.78), ಕೆ ಎಸ್ ಆರ್ ಟಿ ಸಿ (40.92), ಆರ್ ಟಿ ಒ(49.19),ಸಿ ಎಮ್ ಸಿ (28.48), ತಾಲೋಕು ಪಂಚಾಯತ್ (13.60), ಟಿ ಎಮ್ ಸಿ (24.72), ಒಳಾಡಳಿತ (19.87),ಡ್ರಗ್ಸ್ (55.47)ಆಸ್ಪತ್ರೆ(58.65)ಮಹಿಳೆ ಮತ್ತು ಮಕ್ಕಳ ಕಲ್ಯಾಣ (9.05),<br>ಶಿಕ್ಷಣ (99.86), |
| 11 | ಚಾಮರಾಜನಗರ | ಕಾರ್ಮಿಕ ಇಲಾಖೆ (–13.32) | ವಾಣಿಜ್ಯ ತೆರಿಗೆ (31.71) |
| 12 | ದಾವಣಗೆರೆ | ಒಳಾಡಳಿತ ಇಲಾಖೆ (–71.43), | ಕಂದಾಯ ಇಲಾಖೆ (16.05),ವಾಣಿಜ್ಯ ತೆರಿಗೆ ಇಲಾಖೆ (5.18), |
| 13 | ದಕ್ಷಿಣ ಕನ್ನಡ | ಆರೋಗ್ಯ ಇಲಾಖೆ(–68.38) | ಕಂದಾಯ (32.49),ಗಃ (69.37), ಸಾರಿಗೆ ಇಲಾಖೆ (50.42), ಮಹಿಳೆ ಮತ್ತು ಮಕ್ಕಳ ಕಲ್ಯಾಣ (60.53) |
| 14 | ಧಾರವಾಡ | ಕಂದಾಯ (–53.17),ವಾಣಿಜ್ಯ ತೆರಿಗೆ (–43.21),ಕಾರ್ಮಿಕ ಇಲಾಖೆ ಇಲಾಖೆ (–65.14),ಸಾರಿಗೆ (–76.19) | ಆರೋಗ್ಯ ಮತ್ತು ಕುಟುಂಬ ಕಲ್ಯಾಣ (65.16) |
| 15 | ಗುಲ್ಬರ್ಗ | ಒಳಾಡಳಿತ ಇಲಾಖೆ<br>(–19.18), | ವಾಣಿಜ್ಯ ತೆರಿಗೆ ಇಲಾಖೆ ಇಲಾಖೆ (82.25),ಶಿಕ್ಷಣ ಇಲಾಖೆ (75.85),ಆರೋಗ್ಯ ಇಲಾಖೆಮತ್ತು ಕುಟುಂಬ ಕಲ್ಯಾಣ (68.27),ಕಾರ್ಮಿಕ ಇಲಾಖೆ ಇಲಾಖೆ (93.19), ಕಂದಾಯ ಇಲಾಖೆ (99.65) |
| 16 | ಗದಗ | ವಾಣಿಜ್ಯ ತೆರಿಗೆ ಇಲಾಖೆ ಇಲಾಖೆ (–28.11), | ಕಂದಾಯ ಇಲಾಖೆ (22.09),ಆರ್ ಟಿ ಒ(50.88), ನಗರಾಭಿವೃದ್ದಿ ಇಲಾಖೆ (56.85) |
| 17 | ಹಾಸನ | ವಾಣಿಜ್ಯ ತೆರಿಗೆ ಇಲಾಖೆ ಇಲಾಖೆ (–12.58), | ಆಹಾರ ಮತ್ತು ನಾಗರೀಕ ಪೂರೈಕೆ(78.54),ಆರೋಗ್ಯ ಇಲಾಖೆಮತ್ತು ಕುಟುಂಬ ಕಲ್ಯಾಣ (92.18),ಕಂದಾಯ ಇಲಾಖೆ (100),ಗ್ರಾಮೀಣಾಭಿವೃದ್ದಿ (100) |
| 18 | ಹಾವೇರಿ | ಮಹಿಳೆ ಮತ್ತು ಮಕ್ಕಳ ಕಲ್ಯಾಣ (–19.15) | ಕಂದಾಯ (9.75),ಯು ಎಲ್ ಬಿ (27.54),ಆರೋಗ್ಯ ಇಲಾಖೆ(87.20) |
| 19 | ಕೊಡಗು | ಕಂದಾಯ ಇಲಾಖೆ (–16.12),ಒಳಾಡಳಿತ ಇಲಾಖೆ (–19.81),ಕಾರ್ಮಿಕ ಇಲಾಖೆ ಇಲಾಖೆ (–35.29),ಮಹಿಳೆ ಮತ್ತು ಮಕ್ಕಳ ಕಲ್ಯಾಣ (–17.18) | ವಾಣಿಜ್ಯ ತೆರಿಗೆ ಇಲಾಖೆ (71.50), ಸಾರಿಗೆ ಇಲಾಖೆ ಇಲಾಖೆ (12.03) |
| 20 | ಕೋಲಾರ | ಕಂದಾಯ (–15.37), | ವಾಣಿಜ್ಯ ತೆರಿಗೆ (8.65),ಮಹಿಳೆ ಮತ್ತು ಮಕ್ಕಳ ಕಲ್ಯಾಣ (37.25),ಆಹಾರ ಮತ್ತು ನಾಗರೀಕ ಪೂರೈಕೆ(10.38),ಗ್ರಾಮೀಣಾಭಿವೃದ್ದಿ (15.41), ಕಾರ್ಮಿಕ ಇಲಾಖೆ ಇಲಾಖೆ(13.31),ಶಿಕ್ಷಣ (39.76),ಸಾರಿಗೆ (4.99), ಆರೋಗ್ಯ ಮತ್ತು ಕುಟುಂಬ ಕಲ್ಯಾಣ (25.53), ನಗಾರಾಭಿವೃದ್ದಿ(9.95) |
| 21 | ಕೊಪ್ಪಳ | ವಾಣಿಜ್ಯ ತೆರಿಗೆ(–20.78),<br>ಕಂದಾಯ (–42.11) | ಡ್ರಗ್ (35.52), ಆರೋಗ್ಯ ಮತ್ತು ಕುಟುಂಬ ಕಲ್ಯಾಣ (33.97), ಕಾರ್ಮಿಕ ಇಲಾಖೆ (12.44), ಸಾರಿಗೆ ಇಲಾಖೆ (27.46) |
| 22 | ಮಂಡ್ಯ | ಕಾರ್ಮಿಕ ಇಲಾಖೆ (–40.98)ಆರ್ ಡಿ ಪಿ ಆರ್ (–23.00),ಮಹಿಳೆ ಮತ್ತು ಮಕ್ಕಳ ಕಲ್ಯಾಣ (–29.58) | ಯಾವುದೇ ಪ್ರಗತಿ ಕಂಡು ಬಂದಿಲ್ಲ |

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಇಲಾಖೆಗಳಲ್ಲಿ ಕಾರ್ಯಗಳು ಬೈಪಾಸ್ ಆಗುತ್ತಿರುವುದು ಕಂಡುಬಂದಿದೆ ( -ve % ಬೆಳವಣಿಗೆ) | ಇಲಾಖೆಗಳಲ್ಲಿ ಅರ್ಜಿಗಳು ಹೆಚ್ಚಾಗಿರುವುದು ಕಂಡುಬಂದಿದೆ ( +ve % ಬೆಳವಣಿಗೆ) |
|---|---|---|---|
| 23 | ಮೈಸೂರು | ಕಂದಾಯ ಇಲಾಖೆ (–70.50), ನಗರಾಭಿವೃದ್ದಿ ಇಲಾಖೆ (–78.56) | ವಾಣಿಜ್ಯ ತೆರಿಗೆ ಇಲಾಖೆ ಇಲಾಖೆ (98.38),ಶಿಕ್ಷಣ ಇಲಾಖೆ (95.27),ಆಹಾರ ಮತ್ತು ನಾಗರೀಕ ಪೂರೈಕೆಇಲಾಖೆ (56.16),ಒಳಾಡಳಿತ ಇಲಾಖೆ (93.58), ಸಾರಿಗೆ ಇಲಾಖೆ ಇಲಾಖೆ (83.23),ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ (98.74) |
| 24 | ರಾಯಚೂರು | ವಾಣಿಜ್ಯ ತೆರಿಗೆ ಇಲಾಖೆ ಇಲಾಖೆ (–54.38), ಕಾರ್ಮಿಕ ಇಲಾಖೆ ಇಲಾಖೆ (–19.61), ಸಿ ಎಮ್ ಸಿ (50.74),ನಗರ ಮುನಿಸಿಪಲ್ ಕೌನ್ಸಿಲ್ (23.46) | ಆಹಾರ (30.83), ಒಳಾಡಳಿತ ಇಲಾಖೆ(2.31), ಸಾರಿಗೆ ಇಲಾಖೆ (0.57), ನಗರ ಮುನಿಸಿಪಲ್ ಕೌನ್ಸಿಲ್ (55.75) |
| 25 | ಶಿವಮೊಗ್ಗ | ವಾಣಿಜ್ಯ ತೆರಿಗೆ ಇಲಾಖೆ ಇಲಾಖೆ (–65.24),ಕಂದಾಯ ಇಲಾಖೆ (–73.41), ಸಾರಿಗೆ ಇಲಾಖೆ ಇಲಾಖೆ ,ಏಖಖಖಿಅ (–10.09) | ಶಿಕ್ಷಣ ಇಲಾಖೆ (48.66),ಆಹಾರ ಮತ್ತು ನಾಗರೀಕ ಪೂರೈಕೆ(87.41),ಕಾರ್ಮಿಕ ಇಲಾಖೆ ಇಲಾಖೆ (85.36) |
| 26 | ಉತ್ತರ ಕನ್ನಡ | ಆಹಾರ ಮತ್ತು ನಾಗರೀಕ ಪೂರೈಕೆ(–66.63),ಶಿಕ್ಷಣ (–9.46) | ಸಾರಿಗೆ ಇಲಾಖೆ (67.14), ನಗರಾಭಿವೃದ್ದಿ ಇಲಾಖೆ (48.47),ವಾಣಿಜ್ಯ ತೆರಿಗೆ ಇಲಾಖೆ (44.53),ಆರೋಗ್ಯ ಇಲಾಖೆಮತ್ತು ಕುಟುಂಬ ಕಲ್ಯಾಣ (23.66),ಮಹಿಳೆ ಮತ್ತು ಮಕ್ಕಳ ಕಲ್ಯಾಣ (60.8) |
| 27 | ಉಡುಪಿ | ಆಹಾರ ಮತ್ತು ನಾಗರೀಕ ಪೂರೈಕೆ (–22.16), ಡ್ರಗ್ಸ್ ಕಂಟ್ರೋಲರ್ (–20) | ಕಂದಾಯ(19),ಯು ಎಲ್ ಬಿ (54.14), ಸಾರಿಗೆ ಇಲಾಖೆ (50.91), ಮಹಿಳೆ ಮತ್ತು ಮಕ್ಕಳ ಕಲ್ಯಾಣ (45.15),ಒಳಾಡಳಿತ (50.68),ಶಿಕ್ಷಣ (66.67),ಕಾರ್ಮಿಕ ಇಲಾಖೆ (54.36) |
| 28 | ಯಾದಗಿರಿ | ವಾಣಿಜ್ಯ ತೆರಿಗೆ (–87.10),ಆರೋಗ್ಯ ಇಲಾಖೆ(–41.07),ಆಹಾರ ಮತ್ತು ನಾಗರೀಕ ಪೂರೈಕೆ (–66.38), | ಕಂದಾಯ (17.86),ಯು ಎಲ್ ಬಿ (42.58), ಸಾರಿಗೆ ಇಲಾಖೆ (8.36), ಮಹಿಳೆ ಮತ್ತು ಮಕ್ಕಳ ಕಲ್ಯಾಣ (77.88),ಗ್ರಾಮೀಣಾಭಿವೃದ್ದಿ (8.27),ಒಳಾಡಳಿತ (25.64),ಶಿಕ್ಷಣ (86.67),ಕಾರ್ಮಿಕ ಇಲಾಖೆ (15.09) |
| 29 | ತುಮಕೂರು | ಆರೋಗ್ಯ ಇಲಾಖೆಮತ್ತು ಕುಟುಂಬ ಕಲ್ಯಾಣ (–15.92), ಆಯುಷ್ (–32.90), ಡ್ರಗ್ (–22.40), ಕಂದಾಯ (–54.29),ತಾಲೂಕು ಪಂಚಾಯತ್ (–34.03) | ಒಳಾಡಳಿತ ಇಲಾಖೆ (18.09), ಕಾರ್ಮಿಕ ಇಲಾಖೆ ಇಲಾಖೆ (10.0), ಕೆ ಎಸ್ ಆರ್ ಟಿ ಸಿ (18.2), ಮಹಿಳೆ ಮತ್ತು ಮಕ್ಕಳ ಕಲ್ಯಾಣ(22.02) |
| 30 | ರಾಮನಗರ | ಕಂದಾಯ (–12.20), ಸಾರಿಗೆ ಇಲಾಖೆ (–27.63), ಮಹಿಳೆ ಮತ್ತು ಮಕ್ಕಳ ಕಲ್ಯಾಣ (–25.26) | ವಾಣಿಜ್ಯ ತೆರಿಗೆ ಇಲಾಖೆ ಇಲಾಖೆ (15.99), |

# ಅಧ್ಯಾಯ 4

# ಭಾಗ ಎ – ಮರುಸ್ಪಂದನೆ

## ಸೇವಾ ವಿಷಯದಲ್ಲಿ ಪಾರದರ್ಶಕತೆಯ ಅವಶ್ಯಕತೆ

**M.V. RAJASEKHARAN**
FORMER UNION MINISTER OF STATE
FOR PLANNING
GOVERNMENT OF INDIA

"Shri Mallikarjuna Nilaya",
No.20/1, Kanakapura Road,
Basavanagudi,
BANGALORE - 560 004 INDIA
Phone :- Res - 080-26576763
Fax : Res - 91 - 080 - 26578366
Fax : Off - 91 - 080 - 26690860
Email : acdincahebgl@vsnl.net

ಶ್ರೀಮತಿ ಶಾಲಿನಿ ರಜನೀಶ್‌ರವರಿಗೆ – ಎಂ.ವಿ.ರಾಜಶೇಖರನ್ ಮಾಡುವ ನಮಸ್ಕಾರಗಳು.

ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ, ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ನೀವು ಒಬ್ಬ ದಕ್ಷ ಮತ್ತು ಉತ್ತಮ ಅಧಿಕಾರಿಗಳಾಗಿ ಬದ್ಧತೆಯಿಂದ ಸೇವೆ ಸಲ್ಲಿಸುತ್ತಿರುವುದು ಅಭಿಮಾನದ ವಿಷಯ. ರಾಜ್ಯದ ಅಭಿವೃದ್ಧಿಗೆ ಮತ್ತು ಜನರ ಪ್ರೀತಿ ವಿಶ್ವಾಸವನ್ನು ಗಳಿಸಲು ಕಾರ್ಯಾಂಗದ ದೈನಂದಿನ ಕೆಲಸಕಾರ್ಯಗಳು ಸುಗಮವಾಗಿ ನಡೆಯಲು, ಎಲ್ಲಾ ಇಲಾಖೆಯಲ್ಲಿನ . ಎಲ್ಲಾ ವರ್ಗದ ನೌಕರರ ಸಂಪೂರ್ಣ ಸಹಕಾರ ಮತ್ತು ಅವರ ಪ್ರಾಮಾಣಿಕತೆಯ ಕರ್ತವ್ಯಶೀಲತೆ ಅಗತ್ಯವಾಗಿರುತ್ತದೆ.

ಈ ನಿಟ್ಟಿನಲ್ಲಿ, ಇಲಾಖೆಗಳಲ್ಲಿನ ನೀತಿ ನಿರೂಪಣೆಗಳು, ಅನುಷ್ಠಾನಗೊಳ್ಳುವಂತಹಗಳು ಹಾಗೂ ಪ್ರಾಮಾಣಿಕವಾಗಿ ಜಾರಿಗೆ ತರಲು ಮತ್ತು ಜನರ ಕುಂದುಕೊರತೆಗಳು, ಅವರ ಕಲ್ಯಾಣ ಕಾರ್ಯಕ್ರಮಗಳು ಜಾರಿಗೊಳ್ಳಲು ನೌಕರರ ಶ್ರದ್ಧಾದಾಯಕ ಕರ್ತವ್ಯವು ಪ್ರಮುಖವಾದುದಾಗಿದೆ. ಇಂತಹ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ವಿವಿಧ ಇಲಾಖೆಯ ಅಧಿಕಾರಿ ಮತ್ತು ನೌಕರರಲ್ಲಿನ ಅಸಾಮಾನ್ಯವಾದಂತಹ ಹಾಗೂ ಕೆಲಸದಲ್ಲಿನ ಪ್ರಾವೀಣ್ಯತೆ, ನೈಪುಣ್ಯತೆಯ ಅವರ ಕೆಲಸವನ್ನು ಗುರುತಿಸಿ ಪ್ರೋತ್ಸಾಹಿಸುವುದು ಅಗತ್ಯವಾಗಿದೆ. ಇದನ್ನು ಮನಗಂಡಿರುವ ದಕ್ಷ ಅಧಿಕಾರಿಯಾದ ನೀವು, ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಇಲಾಖಾವಾರು – ಗ್ರೂಪ್-ಡಿ ನೌಕರರಿಂದ ಹಿಡಿದು ಗ್ರೂಪ್-ಎ ಅಧಿಕಾರಿ ವರ್ಗದವರೆಗೂ – ಅರ್ಹ ನೌಕರರ ಪ್ರಾಮಾಣಿಕ ಸೇವೆಯನ್ನು ಪರಿಗಣಿಸಿ, ಅಂತಹವರನ್ನು ಪ್ರೋತ್ಸಾಹಿಸಲು, ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ಇದೇ ವರ್ಷದಿಂದ ಜಾರಿಗೆ ತರುವಂತೆ ಮಾಡುವಲ್ಲಿ ನಿಮ್ಮ ಕೊಡುಗೆ ಅಪಾರವಾದುದಾಗಿದೆ.

ನಿನ್ನೆ, ಇಂತಹ ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡಿ, ಇದೇ ವರ್ಷದಿಂದ ಘನ ರಾಜ್ಯಪಾಲರು ಶನಿವಾರ ರಾಜಭವನದಲ್ಲಿ, ಪ್ರಶಸ್ತಿಯನ್ನು ವಿತರಣೆ ಮಾಡಿರುವುದನ್ನು ನೋಡಿ ಸಂತೋಷವನ್ನು ಉಂಟು ಮಾಡಿದೆ. .ತಮ್ಮಲ್ಲಿನ ಬದ್ಧತೆ ಮತ್ತು ದೂರದೃಷ್ಟಿಯ ಫಲವಾಗಿ, ಆಡಳಿತದಲ್ಲಿ ಸುಧಾರಣೆಗೆ ಪ್ರೇರಣೆಯನ್ನು ತಂದುಕೊಡುವಂತಹ, ಇಂತಹ ನೌಕರರನ್ನು ಸ್ವಾಗತಿಸಿ, ಗೌರವಿಸುವಂತಹ ಯೋಜನೆ ಅನುಷ್ಠಾನಗೊಳ್ಳಲು ಕಾರಣರಾದ ನಿಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿಮ್ಮ ಸೇವೆ ನಮ್ಮ ರಾಜ್ಯದ ಅಭಿವೃದ್ಧಿಗೆ ಅಷ್ಟೇ ಅಲ್ಲ, ನಮ್ಮ ರಾಷ್ಟ್ರಕ್ಕೆ ಇನ್ನೂ ಹೆಚ್ಚಿನ ದೊಡ್ಡ ಮಟ್ಟದಲ್ಲಿ ಲಭಿಸುವಂತಾಗಲೆಂದು ಹಾರೈಸುತ್ತೇನೆ. ಮತ್ತೊಮ್ಮೆ ನಿಮಗೆ ನನ್ನ ನಮಸ್ಕಾರಗಳು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,
ಎಂ.ವಿ.ರಾಜಶೇಖರನ್
(ಎಂ.ವಿ.ರಾಜಶೇಖರನ್)

ಶ್ರೀಮತಿ.ಶಾಲಿನಿ ರಜನೀಶ್, ಐಎಎಸ್.,
ಮಾನ್ಯ ಕಾರ್ಯದರ್ಶಿಗಳು,
ಡಿ.ಪಿ.ಎ.ಆರ್.,
ಕರ್ನಾಟಕ ಸರ್ಕಾರ,
ವಿಧಾನ ಸೌಧ, ಬೆಂಗಳೂರು 560 001.

New Delhi Address : Chairman, Vishwa Yuvak Kendra (International Youth Centre), Circular Road, Chanakyapuri, New Delhi-110021. Tel. : 011-23013631 Fax : 011-23016604 Email : vyk@vykonline.org

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ-583101

OFFICE OF THE DEPUTY COMMISSIONER, BELLARY DISTRICT, BELLARY-583101

Telephone : 08392-277100. Fax : 08392-272538 Email: dcbellary@gmail.com


ಸಂ:ಕಂ: ಸಕಾಲ/ 18/12-13 ದಿನಾಂಕ: -24-01-2013

ಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಕಾಲ ವಿಭಾಗ,
2 ನೇ ಹಂತ, 6 ನೇ ಮಹಡಿ,
ಬಹು ಮಹಡಿಗಳ ಕಟ್ಟಡ,
ಡಾ// ಬಿಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.-560001

ವಿಷಯ:-ನಿವಾಸಿ ದೃಢೀಕರಣ ಪತ್ರ ಗ್ರಾಮ ಪಂಚಾಯಿತಿಯಲ್ಲಿ ಅಭಿವೃದ್ಧಿ ಅಧಿಕಾರಿ ಕಾರ್ಯದರ್ಶಿ ಇವರಿಂದ ಪಡೆಯುವಂತೆ ಸರ್ಕಾರಿ ಆದೇಶವನ್ನು ನಮ್ಮ ರಾಜ್ಯದಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಯಲ್ಲಿ ದೊರೆಯುವ ಹಾಗೆ ಮಂಜೂರಾತಿ ಮಾಡಿಕೊಡುವ ಬಗ್ಗೆ ಮನವಿ.

ಉಲ್ಲೇಖ:-ಪವಾಡ ಶೆಟ್ಟಿ ಕೊಟ್ರೇಶ, ಸಮಾಜ ಸೇವಕರು, ಹೊಳಲು, ಹಡಗಲಿ ತಾಲೂಕು, ಬಳ್ಳಾರಿ ಜಿಲ್ಲೆ ಇವರ ಅರ್ಜಿ ದಿನಾಂಕ :-08-01-2013

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದ ಮೂಲಕ ಪವಾಡ ಶೆಟ್ಟಿ ಕೊಟ್ರೇಶ, ಸಮಾಜ ಸೇವಕರು, ಹೊಳಲು, ಹಡಗಲಿ ತಾಲೂಕು ಇವರು ನಿವಾಸಿ ದೃಢೀಕರಣ ಪತ್ರ ಗ್ರಾಮ ಪಂಚಾಯಿತಿಯಲ್ಲಿ ಅಭಿವೃದ್ಧಿ ಅಧಿಕಾರಿ ಕಾರ್ಯದರ್ಶಿ ಇವರಿಂದ ಪಡೆಯುವಂತೆ ಸರ್ಕಾರಿ ಆದೇಶವನ್ನು ನಮ್ಮ ರಾಜ್ಯದಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಯಲ್ಲಿ ದೊರೆಯುವ ಹಾಗೆ ಮಂಜೂರಾತಿ ಮಾಡಿಕೊಡುವ ಬಗ್ಗೆ ಮನವಿ ಸಲ್ಲಿಸಿರುತ್ತಾರೆ.

ಸದರಿ ಅರ್ಜಿಯನ್ನು ಲಗತ್ತಿಸಿ ನಿಯಮಾನುಸಾರ ಸೂಕ್ತ ಕ್ರಮಕ್ಕಾಗಿ ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಅಪರ ಜಿಲ್ಲಾಧಿಕಾರಿಗಳು,
ಬಳ್ಳಾರಿ.

| | |
|---|---|
| ಜಿ ಪಿ ಮಿಸರಪ್ಪಿ ನಿಪ್ಪಾಣಿ ಚಿಕ್ಕೋಡಿ ಬೆಳಗಾಂ, ನಗರಾಭಿವೃದ್ಧಿ (ಸಕಾಲೇತರ ದೂರು) | ನೈರ್ಮಲಿಕರಣ ನಿರ್ವಹಣೆ : ಸಕಾಲಕ್ಕೆ ದೂರು ನೀಡಿದ ನಂತರ ಕೋರಿದ ಸೇವೆಯನ್ನು ಅಪೂರ್ಣವಾಗಿ ಪೂರೈಸಲಾಗಿದೆ. ಸಾರ್ವಜನಿಕರ ಹಿತಸಕ್ತಿಗಾಗಿ ಸರಕಾರ ಯೋಜನೆಗಳನ್ನು ಮಾಡಿದ್ದರು ಸರಕಾರಿ ಸಿಬ್ಬಂದಿಗಳು ಬೇಜವಾಬ್ದಾರರಾಗಿ /ಸರಿಯಾಗಿ ಕರ್ತವ್ಯ ಪಾಲನೆ ಮಾಡದಿರುವುದು ಶೋಚನೀಯ ಪರಿಸ್ಥಿತಿಯಾಗಿದ್ದು ನಿಯೋಜಿತ ಅಧಿಕಾರಿಗಳು ಕರ್ತವ್ಯ ಭ್ರಷ್ಟರಾದಾಗ ಸಂಭಂಧ ಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಜರುಗಿಸಬೇಕು ಇದರಿಂದ ಉತ್ತಮ ಯೋಜನೆಗಳ ಸಂಪೂರ್ಣ ಅಳವಡಿಕೆಯಾಗಬೇಕಿದೆ. |
| ದಿವಾಕರ್ ರಾವ್ – ಬೆಂಗಳೂರು | ನಾನು ಕೋರಿದ ಸರಕಾರಿ ಕೆಲಸವು ಕೇವಲ 5 ದಿನಗಳಲ್ಲಿ ಮಾಡಿ ಕೊಟ್ಟಿರುತ್ತಾರೆ ಎಂದು ತಿಳಿಸಲು ಹರ್ಷಿಸುತ್ತೇನೆ. ಸಕಾಲದ ಕಾರ್ಯ ವೈಖರಿಯು ಆಶ್ವರ್ಯಚಕಿತವಾಗಿದೆ ಆದರೆ ಎಲ್ಲಾ ನಾಗರಿಕರಿಗೂ ಸಕಾಲದ ಬಗ್ಗೆ ಅರಿವಿಲ್ಲ , ಸರಕಾರಿ ಸೇವೆಗಳು ದೊರಕುತ್ತಿಲ್ಲ ಎಂದು ಹಲುಬುವುದಕ್ಕಿಂತ ಜನತೆಯು ಸಕಾಲದ ಬಗ್ಗೆ ತಿಳಿದು ಅವಶ್ಯಕವಾದ ಸೇವೆಗಳನ್ನು ಪಡೆಯಬೇಕು. ಒಂದು ಸಲಹೆ ಸೇವೆ ದೊರಕಿಸಿಕೊಳ್ಳಲು ಬೇಕಾದ ದಾಖಲೆಗಳ ಪಟ್ಟಿ ಹಾಗೂ ಯಾವ ಗೆಜೆಟೆಡ್ ಅಧಿಕಾರಿಯಿಂದ ಧೃಡಿಕರಿಸಬೇಕೆಂದು ತಿಳಿಸಬೇಕು ತಂತ್ರಾಂಶದಲ್ಲಿ ನಮೂದಿಸಬೇಕು. ಬಿಡಿಎ ಇಲಾಖೆಯೊಂದು ಪ್ರಮಾಣಿಕವಾಗಿ ದಾಖಲಾತಿಗಳ ಪಟ್ಟಿಯನ್ನು ತಂತ್ರಾಂಶದಲ್ಲಿ ಲಗತ್ತಿಸಿರುವುದು (ದಿನಾಂಕ 10.1.2013) |
| ರಾಘವೇಂದ್ರ – ಬೆಂಗಳೂರು, ಗೃಹ ನಿರ್ಮಾಣ ಮಂಡಳಿ (ಸಕಾಲೇತರ ದೂರು), | ಮುಂಗಡ ಮೊತ್ತವನ್ನು ಹಿಂಪಡೆಯುವಲ್ಲಿ ವಿಳಂಬ: ಗೃಹ ನಿರ್ಮಾಣ ಇಲಾಖೆಯು ಅರ್ಜಿದಾರರಿಗೆ ಅನುಮೋದಿಸಿರುವ ಸೈಟ್ ಮೊತ್ತವನ್ನು ನಿಗದಿತ ಕಾಲಮಿತಿಗಿಂತ ಮೊದಲೇ ನೀಡಬೇಕೆಂದು ಒತ್ತಡ ನೀಡಿದ್ದರ ಸಲುವಾಗಿ ಅರ್ಜಿದಾರರು ಮುಂಗಡ ಮೊತ್ತವನು (25000 ರೂಪಾಯಿಗಳನ್ನು ) ಹಿಂದಿರುಸಲು ಕೋರಿದ್ದರು ಆದರೆ ಕಛೇರಿಯ ಸಿಬ್ಬಂದಿಯು ಇಂದು ನಾಳೆ ಎಂದು ಸಬೂಬು ಹೇಳುತ್ತಿದ್ದಾರೆ. ಮಂಡಳಿಯು ಸಮಸ್ಯೆಯನ್ನು ಪರಿಹರಿಸಬೇಕೆಂದು ಕೋರಿದ್ದಾರೆ |
| ಸಂಘರ್ಷ – ಬೆಂಗಳೂರು | ಸಕಾಲವು ಒಂದು ಅತ್ಯುತ್ತಮ ಅಧಿನಿಯಮವಾಗಿದ್ದು ಗಣನೀಯ ಪ್ರಮಾಣದಲ್ಲಿ ಬದಲಾವಣೆಗಳಾಗಿದ್ದು ಅದರಲ್ಲೂ ಸರಕಾರಿ ಕಛೇರಿಯ ಸಿಬ್ಬಂದಿ ವರ್ತನೆಗಳೂ ಆರೋಗ್ಯಕರ ರೀತಿಯಲ್ಲಿ ಬದಲಾವಣೆಯಾಗಿದೆ, ಇನ್ನೂ ಹೆಚ್ಚಿನ ಬೆಳವಣಿಗೆ ಬದಲಾವಣೆಗಳ ಅವಶ್ಯಕತೆಯಿದೆ. ಸಿಬ್ಬಂದಿಗಳು ಪ್ರಪಂಚ ಆಳುವ ದೊರಗಳೆಂದು ಪರಿಗಣಿಸಿಕೊಳ್ಳದೆ ಇರಲು ಸಕಾಲದಡಿ ಸೇವೆಗಳನ್ನು ಉತ್ತಮವಾಗಿ ಹೊರತರಲಾಗಿದೆ. ನಾನು ನನ್ನ ಪಾಸ್ ಪೋರ್ಟ್ ನ್ನು ಕೇವಲ 5 ದಿನದಲ್ಲಿ ಪಡೆದೆ! ಕೇಂದ್ರದ ನಿಯಮಗಳೂ ಇಷ್ಟು ತ್ವರಿತವಾಗಿ ಸಾರ್ವಜನಿಕರಿಗೆ ವಿಲೇ ಮಾಡಿರುವುದು, ರಾಜ್ಯ ಸರಕಾರಿ ಸೇವೆಗಳೂ ಕೂಡ ಇದೇ ರೀತಿಯಲ್ಲಿ ತ್ವರಿತವಾಗಿ ಸಾರ್ವಜನಿಕರಿಗೆ ದೊರಕುವಂತಾಗಬೇಕು. ಪರಿಹಾರ ಧನ ಕೋರುವ ರೀತಿಯು ಸರಿಯಾಗಿ ತಿಳಿದಿಲ್ಲ ಇದರ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕಿದೆ, ಅನಿಯಮಿತ ಕಾಲಮಿತಿಯಲ್ಲಿ ಒದಗಿಸುವ ಸಿಬ್ಬದಿಯಿಂದ ಶಿಸ್ತಿನ ಕರ್ತವ್ಯ ಪಾಲನೆಗಾಗಿ ಪ್ರತಿಯೊಬ್ಬ ಭಾರತೀಯ ನಾಗರಿಕನ ಬ್ಯಾಂಕ್ |


| | |
|---|---|
| | ಖಾತೆಗೆ ಪರಿಹಾರ ಧನ ವರ್ಗಾವಣೆಯಾಗಬೇಕು ಸುಮ್ಮನೆ ಕಛೇರಿಗಳಿಗೆ ಸಮಯ ಹಣ ವ್ಯಯ ಆಗದ ರೀತಿ ನಿಯಮಗಳು ಅಳವಡಿಸಬೇಕು |
| ಪದ್ಮಕುಮಾರಿ ವಿ ಬಂಗಾರ ಪೇಟೆ – ಕೋಲಾರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸಕಾಲೇತರ ದೂರು) | ನಿವೃತ್ತಿ ಸೇವ ಮೊತ್ತವನ್ನು ನೀಡುವಲ್ಲಿ ವಿಳಂಬ 26/6/2007ರಿಂದ ಬಿ ಇ ಒ  ಕಛೇರಿ, ಕೆ ಜಿ ಎಫ್. ಡಿ ಡಿ ಪಿ ಐ ಬೆಂಗಳೂರು (ಉನ್ನತ ನ್ಯಾಯಲಯ ನಿವೃತ್ತಿ ನೀಡಬಹುದು ಎಂದು ಸೂಚಿದ್ದರು ಇದುವರೆಗೆ ಸದರಿ ಮೊತ್ತವನ್ನು ಬಿಡುಗಡೆ ಮಾಡದಿರುವ ಬಗ್ಗೆ ದೂರು. ಅರ್ಜಿದಾರರು ಹೆಡ್ ಮಾಸ್ಟರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ – ಶ್ರೀ ನುಂಪರಿಮಾಳ್ ಬಾಲಕರ ಪೌಢಶಾಲೆ, ಅಂದರಸನ್ಪಪ್ ಕೆ ಜಿ ಎಫ್ (C83*RHM/10/2012-13)---: ಸಕಾಲದಲ್ಲಿ ದೂರು ನೀಡಿದ ನಂತರ ಕೋರಿದ ಸೇವೆಯ ಬಗ್ಗೆ ಸಕ್ಷಮ ಅಧಿಕಾರಿಗಳು ಕ್ರಮ ತೆಗೆದುಕೊಂಡ ಬಗ್ಗೆ ಪತ್ರವೊಂದನ್ನು ಕಳುಹಿಸಿದ್ದಾರೆ ಆದರೆ ಸಚಿವಾಲದಲ್ಲಿ ಈಗ ಕಡತ ವಿಲೇ ಬಾಕಿ ಇದ್ದು ಅರ್ಜಿ ದಾರರು ವಿಧವೆಯಾಗಿದ್ದು  ಜೀವನ ನಿರ್ವಹಣೆಗೆ ಸದರಿ ಮೊತ್ತವು ಅವಶ್ಯಕವಾಗಿ ಬೇಕಿರುವುದೆಂದು ಮಂಡಳಿಯು ಇದರ ಬಗ್ಗೆ ದಯಮಾಡಿ ಸಹಾಯ ಮಾಡಬೇಕೆಂದು ಕೋರಿರುತ್ತಾರೆ (ಕಳೆದ 5 ವರ್ಷಗಳಿಂದ ಕೋರಿದ ಸೇವೆಯು ದೊರೆತಿಲ್ಲ ಎಂದು ಖೇದ ವ್ಯಕ್ತಪಡಿಸಿದ್ದಾರೆ. |
| ಶ್ರೀಧರ ನಾಯ್ಡು – ಚಿಕ್ಕಬಳ್ಳಾಪುರ | **ಹಿರಿಯ ಅಧಿಕಾರಿಗಳು ಖಾಸಗಿ ಕಂಪೆನಿಗಳಂತೆ ಸಿಬ್ಬಂದಿಯ ಗೌರು/ಹಾಜರಾತಿಯನ್ನು ಕಡ್ಡಾಯವಾಗಿ ಗಮನಿಸಬೇಕು,** ಸರಕಾರಿ ನೌಕರರು ನಾಗರಿಕರ ಹಣದಿಂದ ಜೀವಿಸುತ್ತಿರುವುದು ನಿಜವಷ್ಟೇ! ಕರ್ತವ್ಯದ ಸಮಯದಲ್ಲಿ ಹೊರ ಹೋದರು ನಿಗದಿತ ಕಾಲಮಿತಿಯಲ್ಲಿ ವಾಪಸು ಬರಬೇಕು. ಸರಕಾರಿ ವಾಹನ/ಕಾರ್ ಗಳನ್ನು ತಮ್ಮ ಮಕ್ಕಳನ್ನು ಮೋಜಿಗಾಗಿ ಉಪಯೋಗಿಸದೆ ಸಾರ್ವಜನಿಕರ ಕುಂದುಕೊರತೆಗಳಿಗೂ ಮೀಸಲಿಡಬೇಕು. ಹಿರಿಯ ಅಧಿಕಾರಗಳೂ ಸಹಾಯಕ ಆಯುಕ್ತರಂತೆ ವರ್ತಿಸದೆ ಸೌಜನ್ಯಯುತರಾಗಿರುವುದನ್ನು ಕಲಿಯಬೇಕು |
| ಸಿ ಎಮ್ ವರ್ಗಿಸ್ , ಬೆಂಗಳೂರು ಪೂರ್ವ, ಆಹಾರ ಮತ್ತು ನಾಗರೀಕರ ಸರಬರಾಜು ಇಲಾಖೆ (ಸಕಾಲೇತರ ದೂರು) | ಪಡಿತರ ಚೀಟಿ ನೀಡುತ್ತಿಲ್ಲ : ನಿಗದಿತ ದಾಖಲೆಗಳನ್ನು ಒದಗಿಸಿದ್ದರು ಪಡಿತರ ಚೀಟಿಯನ್ನು ನೀಡಿಲ್ಲ ಕುಟುಂಬದ ಯಾವುದೇ ಸದಸ್ಯರಲ್ಲಿ ಯಾವುದೆ ಬದಲಾವಣೆ ಇಲ್ಲ ಕಳೆದ 10 ವರ್ಷಗಳಿಂದ ಅರ್ಜಿದಾರರು ಪಡಿತರ ಚೀಟಿಯನ್ನು ಹೊಂದಿದ್ದರು ಆದರೆ ಹೊಸ ಪಡಿತರ ಚೀಟಿಯನ್ನು ನೀಡುತ್ತಿಲ್ಲ, ಪಡಿತರ ಚೀಟಿಯು ವಜಾ ಆಗಿದೆ ನೀಡಲು ಬರುತ್ತಿಲ್ಲ ಎಂದು ಹೇಳುತ್ತಿದ್ದಾರೆ. ದಯಮಾಡಿ ಈ ಬಗ್ಗೆ ಗಮನಕೊಟ್ಟು ಅರ್ಜಿದಾರರಿಗೆ ಸಹಾಯ ಮಾಡಬೇಕೆಂದು ಮಂಡಳಿಯನ್ನು ಕೋರಿದ್ದಾರೆ. ಪಡಿತರ ಚೀಟಿ ವಜಾ ಮಾಡಿರುವುದ್ದಕ್ಕೆ ಯಾವುದೇ ಕಾರಣಗಳನ್ನು ನೀಡುತ್ತಿಲ್ಲ |
| ನಾರಾಯಣ್ ರಾವ್ – ರಾಜಾಜಿ ನಗರ, ಬೆಂಗಳೂರು ಕಂದಾಯ ಇಲಾಖೆ | ಕಳೆದ ಒಂದು ವರ್ಷದಿಂದ ಅಂಗವಿಕಲರ ಪೆನ್ಷನ್ ನೀಡುತ್ತಿಲ್ಲ: ಅರ್ಜಿದಾರರು ಅಂಗವಿಕಲರಾಗಿದ್ದು ನಡೆದಾಡಲು ಅಶಕ್ತರಾಗಿದ್ದಾರೆ ಆದರು ಖುದ್ದು ಕಛೇರಿಗೆ ಭೇಟಿ ನೀಡಿದ್ದರು ಸರಕಾರಿ ಸಿಬ್ಬಂದಿಯು ಒರಟಾಗಿ ವರ್ತಿಸಿದರು, ಅವರ ವರ್ತನೆ ಪರಿವರ್ತನೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಕೋರಿದ ಸೇವೆಯ ಬಗ್ಗೆ ವಿಚಾರಿಸಿದಾಗ ನೀವು |

| | |
|---|---|
| | ಹೊರಡಬಹುದು ಪದೇ ಪದೇ ಬರುವ ಅವಶ್ಯಕತೆಯಿಲ್ಲ ಪೆನ್ ಷನ್ ಬರುವವರೆಗೆ ನೀವು ನಿರೀಕ್ಷಿಸಬೇಕು ಎಂದು ಒರಟಾಗಿ ವರ್ತಿಸಿದರು ಇದರಿಂದ ಅಶಕ್ತ ಅರ್ಜಿದಾರರು ನೊಂದಿದಾರೆ ಹಾಗೂ ಮಂಡಳಿಗೆ ಇದರ ಬಗ್ಗೆ ಸೂಕ್ತ ಗಮನಹರಿಸಿ ಕೋರಿದ ಸೇವೆ ನೀಡುವಲ್ಲಿ ಸಹಕರಿಸಬೇಕೆಂದು ಕೋರಿದ್ದಾರೆ |
| ರಮೇಶ್ ರೆಡ್ಡಿ | ಎಲ್ಲಾ ಸೇವೆಗಳನ್ನು ಸಕಾಲದಡಿ ತರಬೇಕು.ಪ್ರತಿಯೊಬ್ಬರ/ ಪ್ರತಿಯೊಂದು ಕರ್ತವ್ಯವನ್ನು ಸಕಾಲದ ಆಡಳಿತ ನಿರ್ವಹಣೆಯ ರೀತಿ ನಿರಂತರವಾಗಿ ಮೇಲಿಚ್ವಾರಿಸಬೇಕು ತಪ್ಪಿದಲ್ಲಿ ಶಿಕ್ಷಿಸಬೇಕು ಹಾಗಿದ್ದಲ್ಲಿ ಮಾತ್ರ ನಮ್ಮ ದೇಶವು ಅಭಿವೃದ್ಧಿ ಪಥದತ್ತ ಸಾಗುವುದು. **ಸಕಾಲವು ಅಭುತಪೂರ್ವ ಅತ್ಯುತ್ತಮ ಅಧಿನಿಯಮವಾಗಿದೆ ಸರಕಾರಿ ಉತ್ತಮ ಆಡಳಿತಕ್ಕೆ ಮತ್ತೋಂದು ಹೆಸರೇ ಸಕಾಲ ಎಂಬುವ ಹಾಗೆ ಆಗಬೇಕು. ನಾಗರೀಕರು ಪರಿಹಾರಧ ನ ಬಯಸದಿದ್ದರು ಕರ್ತವ್ಯ ಚ್ಯುತಿ ಮಾಡುವ ಸಿಬ್ಬಂದಿಯಿಂದ ದಂಡ ವಸೂಲು ಕಡ್ಡಾಯವಾಗಬೇಕು – ಹೊಣೆ**ಗಾರಿತನ ಹೆಚ್ಚು ಮಾಡಲು ಇದು ಅನಿರ್ವಯವಾಗಿರುವುದು, ಇದರಿಂದ ಮಧ್ಯವರ್ತಿಗಳ ಹಾವಳಿಯು ನಾಶವಾಗುವುದು ಹಾಗು ಪ್ರತಿಯೊಬ್ಬ ನಾಗರಿಕನು ಶಕ್ತಿಯುತನಾಗುವನುಯಾಗಬೇಕು. |
| ಪ್ರದೀಪ್ ಕುಮಾರ್ – ಚಿತ್ರದುರ್ಗ,<br>ಶಿಕ್ಷಣ ಇಲಾಖೆ | ಡಿಪ್ಲೊಮೊ ಸರ್ಟಿಪಿಕೇಟ್ ನೀಡುವಲ್ಲಿ ವಿಳಂಬ:– ಕೋರಿದ ಸೇವೆಯನ್ನು ಸಕಾಲಕ್ಕೆ ದೂರು ನೀಡಿದ ನಂತರ ನೀಡಲಾಗಿದೆ. ಆದರೂ ಅರ್ಜಿದಾರರು ಸಕಾಲದ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರೆ ಸಕಾಲೇತರ ದೂರನ್ನು ಸಹ ಮಂಡಳಿಯು ಪರಿಗಣಿಸಿ ಸಾರ್ವಜನಿಕರ ಕುಂದುಕೊರತೆಗಳನ್ನು ಅವಿರತವಾಗಿ ನೀಡುತ್ತಿರುವುದು ಗಮನಾರ್ಹ ವಿಷಯವಾಗಿದೆ. ವಾಸ್ತವಾವಗಿ ಕೋರಿ ಸೇವೆ ನೀಡಲು 4000/ ರೂ ವಿಳಂಬ ಶುಲ್ಕ ಕೇಳಿದ್ದರೂ ಆದರೆ ಸಕಾಲಕ್ಕೆ ದೂರು ನೀಡಿದ ನಂತರ ಯಾವುದೇ ಶುಲ್ಕ ತೆಗೆದುಕೊಳ್ಳದೆ ಮಂಡಳಿಯ ವತಿಯಿಂದ ಅರ್ಜಿದಾರರ ಕೋರಿಕೆಯನ್ನು ನೆರವೇರಿಸುವಲ್ಲಿ ಸಫಲರಾಗಿದ್ದಾರೆ. ಸಕಾಲ ಅಧಿನಿಯಮವು ಅತ್ಯುತ್ತಮ ಸರಕಾರಿ ಕಾರ್ಯವೈಖರಿಗೆ ಚುಕ್ಕಾಣಿಯಾಗಿದೆ ಎಂದು ಶ್ಲಾಘಿಸಿದರು ಹಾಗೂ ಹೃತ್ಪೂರ್ವಕ ಅಭಿನಂದನೆಯನ್ನು ತಿಳಿಸಿದ್ದಾರೆ |
| ದತ್ತ ಎನ್ ಶಂಕರ್ ಜೊಯ್ಸ್ –ತುಮಕೂರು<br>ನೆಮ್ಮದಿ ಕೇಂದ್ರ<br>ಕಂದಾಯ ಇಲಾಖೆ | ಕುಟುಂಬ ಜೀವಂತ ಪ್ರಮಾಣ ಪತ್ರ : ಸಕಾಲವು ಉತ್ತಮ ಅಧಿನಿಯಮವಾಗಿದ್ದು ಸರಕಾರದ ಸೇವೆ ನಿರ್ವಹಣೆಗಳು ಚುರುಕಾಗುತ್ತಿದೆ ಸಕಾಲಕ್ಕೆ ದೂರು ಕೊಟ್ಟ ನಂತರ ಕೋರಿದ ಸೇವೆಯನ್ನು ನೀಡಲಾಗಿದೆ. ಕಛೇರಿಯ ಸಿಬ್ಬಂದಿಯು ಮೂಲ ದಾಖಲಾತಿಗಳನ್ನು ಕಳೆದುಹಾಕಿದ್ದರು ದೂರು ನೀಡಿದ ನಂತರ ಖುದ್ದು ಕಛೇರಿಯ ಸಿಬ್ಬಂದಿ ಅರ್ಜಿದಾರರ ವಿಳಸಕ್ಕೆ ಬಂದು ಕೋರಿದ ಸೇವೆಯ ಪ್ರತಿಗಳನ್ನು ತೆಗೆದುಕೊಂಡು ಕುಟುಂಬ ಜೀವಂತ ಪ್ರಮಾಣ ಪತ್ರವನ್ನು ನೀಡಿದರು. ವಾಸ್ತವವಾಗಿ ಸಕಾಲದ ಅನುಷ್ಠಾನದ ನಂತರ ಸೇವೆಗಳನ್ನು ನೀಡುವ ಗತಿ ತ್ವರಿತವಾಗಿದ್ದರು ಬೈಪಾಸ್ ಆಗುತ್ತಿದೆ ನಿಗದಿತ ಸಮಯದಲ್ಲಿ ಸೇವೆ ಒದಗಿಸಬೇಕನ್ನುವ ಅಂಶವನ್ನು ನೆಪ ಮಾತ್ರಕ್ಕೆ ತಂತ್ರಾಂಶದಲ್ಲಿ ನೀಡಲಾಗಿದೆ ಎಂದು ತಿಳಿಸಿ ಹಿಂದಿ |

| | |
|---|---|
| | ದಿನಾಂಕದಲ್ಲಿ ತಂತ್ರಾಂಶ ಹಾಗೂ ದಾಖಲತಿ ಪುಸ್ತಕದಲ್ಲಿ ಸ್ವೀಕೃತಿ ಪತ್ರ/ಸುಳ್ಳು ದಾಖಲಾತಿಗಳನ್ನು ಸೃಷ್ಟಿಸುತ್ತಿರುವುದು/ ಸೇವೆ ನೀಡಲಾಗಿದೆ ಎಂದು ನಮೂದಿಸುತ್ತಿರುವುದು ಆತಂಕಕರ ಬೆಳವಾಣಿಗೆ ಯಾಗಿರುವುದು,ಹಾಗೂ ಕೋರಿದ ಸೇವೆಯ ಎಲ್ಲಾ ದಾಖಲಾತಿಗಳನ್ನು ನೀಡಿದ್ದರು ಅರ್ಜಿ ತಿರಸ್ಕೃತವಾಗುತ್ತಿದೆ. ಆದುದರಿಂದ ಮಂಡಳಿಯು ಸರಕಾರಿ ಕಛೇರಿಗಳು ತಿರಸ್ಕೃತ ಮಾಡುತ್ತಿರುವ ಅರ್ಜಿಗಳ ಬಗ್ಗೆ ಗಮನಹರಿಸಿ ನಿಯಂತ್ರಿಸಬೇಕು. ಮಂಡಳಿಯು ಕಛೇರಿಯು ಸೇವೆ ಒದಗಿಸಿರುವ ದಿನಾಂಕಗಳ ರಿಜಿಸ್ಟರ್ ಅನ್ನು ನಿರಂತರವಾಗಿ ಪರಿಶೀಲಿಸಿದರೆ, ಸಕಾಲದ ಅತ್ಯುತ್ತಮ ಅನುಷ್ಠಾನ/ಅಳವಡಿಕೆಗೆ ನಾಂದಿ ಆಗಬಹುದು. |
| ಮಂಜುಳ – ಕುಣಿಗಲ್ , ತುಮಕೂರು<br>ನಗರಾಭಿವೃದ್ದಿ ಇಲಾಖೆ<br>L30990000136035 | ಕಟ್ಟಡ ಪರವಾನಿಗೆ ನೀಡುವಲ್ಲಿ ವಿಳಂಬ (ಕುಣಿಗಲ್ ಪಟ್ಟಣ ಮುನಿಸಿಪಲ್ ಕೌನ್ಸಿಲ್): ತುಮಕೂರಿನ ಸರಕಾರಿ ಸಿಬ್ಬಂದಿ ಭ್ರಷ್ಟರಾಗಿದ್ದು ಸರಕಾರ ಸಾರ್ವಜನಿಕರ ಹಿತಸಕ್ತಿಗಾಗಿ ಅನುಷ್ಠಾನಗೊಳಿಸಿರುವ ಉತ್ತಮ ಕಾಯಿದೆಗಳ ನಿಯಮಗಳನ್ನು ಪಾಲಿಸುತ್ತಿಲ್ಲ ಉಲ್ಲಂಘಿಸುತ್ತಿದ್ದಾರೆ, ಅನ್ನದಾನಿ ಅಧಿಕಾರಿಯು ಸೇವೆ ನೀಡುತ್ತಿರುವ ದಿನಾಂಕದ ಬದಲು ಹಿಂದಿನ ದಿನಾಂಕ ನಮೂದಿಸುತ್ತಿದ್ದಾರೆ. |
| ನರಸಮ್ಮ – ಸರಹುಸ್ಸ್ ಗ್ರಾಮ ಬೆಂಗಳೂರು .<br>ಕಂದಾಯ ಇಲಾಖೆ<br>ಜಿ ಎಸ್ ಸಿ ಸ್ವೀಕೃತಿ ಸಂಖ್ಯೆಯನ್ನು ನೀಡಿಲ್ಲ | ಇಂದಿರಾ ಗಾಂಧಿ ವೃದ್ಯಾಪ ವೇತನವು 1 ವರ್ಷದಿಂದ (2012 ಜನವರಿಯಿಂದ ದೊರೆತಿಲ್ಲ 17/10/2012ರಂದು ಕೆ ಆರ್ ಪುರಂ ತಾಲೂಕು ಕಛೇರಿಯಲ್ಲಿ ದೂರನ್ನು ನೀಡಿದ್ದೇವೆ, ಆದೇಶ ಸಂಖ್ಯೆ 1513 (ವರ್ತೂರು ಹೊಬಳಿ) |
| ಮಾಯಮ್ಮ  ತುಮಕೂರು<br>ಕಂದಾಯ ಇಲಾಖೆ<br>ಜಿ ಎಸ್ ಸಿ ಸ್ವೀಕೃತಿ ಸಂಖ್ಯೆಯನ್ನು ನೀಡಿಲ್ಲ | ವಿಧವಾ ವೇತನ ನೀಡುವ ಆದೇಶ ಪ್ರತಿಯನ್ನು ನೀಡುವಲ್ಲಿ ವಿಳಂಬ (10/8/2012ರಿಂದ) ತುರುವೇಕೆರೆ ತಾಲೂಕು ಕಛೇರಿ (ಸಂಭಂದ ಪಟ್ಟ ಕಛೇರಿಯು ಜಿ ಎಸ್ ಸಿ ಸಂಖ್ಯೆಯನ್ನು ನೀಡುತ್ತಿಲ್ಲ) |
| ಸತ್ಯ ನಾರಾಯಣ್ ಕೃಷ್ಣಪ್ಪ ಕಂದಕೂರ್ ಕೆರೂರ್ ಬಾದಾಮಿ –ಬಾಗಲಕೋಟೆ,<br>ನಗರಾಭಿವೃದ್ದಿ ಇಲಾಖೆ<br>ಜಿ ಎಸ್ ಸಿ ಸ್ವೀಕೃತಿ ಸಂಖ್ಯೆಯನ್ನು ನೀಡಿಲ್ಲ | ಖಾತಾ ಉಧೃತ ನೀಡುವಲ್ಲಿ ವಿಳಂಬ 27.12.2012ರಿಂದ (ಕಛೇರಿ ನೀಡಿರುವ ಸ್ವೀಕೃತಿ ಸಂಖ್ಯೆ 62516) |

**ಸಾರ್ವಜನಿಕರ ಮರುಸ್ಪಂದನೆ:** ಮಂಡಳಿಯ ಜಿಲ್ಲೆಗಳ ಮಾಹಿತಿ ಸಮಾಲೋಚಕರು ತಾಲೋಕು ಕಛೇರಿಗಳಲ್ಲಿ ನಡೆಸಿದ ಸಂದರ್ಶನದ ಕೆಲವು ವಿವರವನ್ನು ಇಲ್ಲಿ ಮಂಡಿಸಲಾಗಿದೆ. 771 ಸಂಖ್ಯೆಯ ಸಾರ್ವಜನಿಕರ ಮರುಸ್ಪಂದನೆಯಲ್ಲಿ 695 ಜನರು ಸಕಾಲ ಸೇವೆಗಳನ್ನು ಉಪಯೋಗಿಸಿರುತ್ತಾರೆ, ಇದರಲ್ಲಿ 76 ಜನರು ಸಕಾಲದ ಯಾವುದೇ ಸೇವೆಗಳನ್ನು ಉಪಯೋಗಿಸಿಲ್ಲ. ಈ ಕೆಳ ಕಂಡ ಪಟ್ಟಿಯಲ್ಲಿ ವಿವರಗಳನ್ನು ನಮೂದಿಸಲಾಗಿದೆ

| ವರ್ಗ | ಮರುಸ್ಪಂದನೆ ಸಂಖ್ಯೆಗಳಲ್ಲಿ | **% ಪ್ರಮಾಣ** |
|---|---|---|
| **ಉತ್ತಮ ರೀತಿಯ ಬದಲಾವಣೆಗಳಾಗಿದೆ ಎಂದು ಒಪ್ಪಿರುವವರ ಸಂಖ್ಯೆ** | 621 | **89%** |
| **ಉತ್ತಮವಾಗಿದೆ – ಆದರೆ ಸಂಪೂರ್ಣ ಪಾಲನೆ/ಜಾರಿಯ ಅವಶ್ಯಕತೆಯಿದೆ** | 41 | **6%** |
| **ಸಕಾಲದ ಬಗ್ಗೆ ಮಾಹಿತಿ ಇಲ್ಲ ಆದರೆ ಸೇವೆಗಳು ದೊರೆತಿವೆ** | 24 | **4%** |
| **ಸಕಾಲದಿಂದ ಯಾವುದೇ ಬದಲಾವಣೆಗಳು ಆಗಿಲ್ಲ** | 9 | **1%** |




**ಒಟ್ಟಾರೆ ಉತ್ತಮ ರೀತಿಯ ಬದಲಾವಣೆಗಳಾಗಿದೆ ಎಂದು ಒಪ್ಪಿರುವವರ ಸಂಖ್ಯೆ ಪ್ರಮಾಣ 89% ಸಕಾಲದಿಂದ ಯಾವುದೇ ದಲಾವಣೆಗಳು ಆಗಿಲ್ಲ ಎಂದು ತಿಳಿಸಿರುವವರ ಸಂಖ್ಯೆ ಪ್ರಮಾಣ 1% . 4% ಸಕಾಲದ ಬಗ್ಗೆ ಮಾಹಿತಿ ಇಲ್ಲ ಆದರೆ ಸೇವೆಗಳು ದೊರೆತಿವೆ, ಉಳಿದವರು ಸಕಾಲ ಉತ್ತಮವಾಗಿದೆ – ಆದರೆ ಸಂಪೂರ್ಣ ಪಾಲನೆ/ಜಾರಿಯ ಅವಶ್ಯಕತೆಯಿದೆ**

## ಸೇವಾ ವಿಷಯದಲ್ಲಿ ಪಾರದರ್ಶಕತೆಯ ಅವಶ್ಯಕತೆ:–

ಕ್ಷೇತ್ರ ಇಲಾಖೆಗಳಲ್ಲಿ ಯಾವ ರೀತಿ ಕೆಲವೊಮ್ಮೆ ಸೇವಾ ವಿಷಯಗಳನ್ನು ತೀರಾ ಬೇಜವಬ್ದಾರಿಯುತವಾಗಿ ನಿರ್ವಹಿಸಲಾಗುತ್ತಿದೆ ಎಂಬುದಕ್ಕೆ ಬೆಳಗಾವಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನಡೆದಿರುವ ಘಟನೆ ಸಾಕ್ಷಿಯಾಗುತ್ತದೆ.

ಶ್ರೀ ರಾಜೇಂದ್ರ ಕಾರ್ನಿಂಗ್ – ದ್ವಿತೀಯ ದರ್ಜೆ ಸಹಾಯಕರು 2 ವರ್ಷಕ್ಕೂ ಮೇಲ್ಪಟ್ಟು ಅವಧಿಗೆ ಗೈರು ಹಾಜರಾಗಿ, ಈ ಅವಧಿಯಲ್ಲಿ 1 ಲಕ್ಷಕ್ಕೂ ಮೀರಿ ಭತ್ಯೆಯನ್ನು ಅಕ್ರಮವಾಗಿ ಸೆಳೆದಿರುವರೆಂದು ಮೇಲಾಧಿಕಾರಿಗಳು ವರದಿಸಿರುವ ಜೊತೆಗೆ ಈ ಘಟನೆಯಲ್ಲಿ ಮೇಲಾಧಿಕಾರಿಗಳ ಅಸಡ್ಡೆಯು ವ್ಯಕ್ತವಾಗಿದೆ.

ದ್ವಿತೀಯ ದರ್ಜೆ ಸಹಾಯರೋರ್ವರು ಕರ್ತವ್ಯಕ್ಕೆ ಹಾಜರಾಗದೆ 2 ವರ್ಷಗಳ ವೇತನ ಹಾಗೂ 10 ಹೆಚ್ಚುವರಿ ವಾರ್ಷಿಕ ಭತ್ಯೆಯನ್ನು ಪಡೆದಿರುವ ವಿಷಯ ಬೆಳಕಿಗೆ ಬಂದಿದೆ.

ಕ್ಷೇತ್ರ ಇಲಾಖೆಯಲ್ಲಿ ಸೇವಾ ವಿಷಯಗಳ ಬಗೆಗೆ ಇದು ಸಕಾಲದ ಅನುಷ್ಟಾನದ ಪ್ರಾಮುಖ್ಯತೆಯ ಬಗ್ಗೆ ಒತ್ತಿ ಹೇಳುತ್ತದೆ. ಮಾನವ ಸಂಪನ್ಮೂಲ ಮೇಲ್ವಿಚಾರಣೆ ತಂತ್ರಾಂಶದ ವಿವರಣೆ (ಹೆಚ್.ಆರ್.ಎಂ.ಎಸ್) ಅನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದರೆ ಇಂತಹ ಪ್ರಕರಣಗಳನ್ನು ನಿಯಂತ್ರಿಸಬಹುದಾಗಿದೆ.

## ಕ್ಷೇತ್ರ ವರದಿಗಳು

ಮಂಗಳೂರು ಕ್ಷೇತ್ರದ ಭೇಟಿ: ದಿನಾಂಕ:16/01/2013 ರಂದು ಡಾ||.ಶಾಲಿನಿ ರಜನೀಶ್ ರವರ ಮಂಗಳೂರು ಸ್ವತಃ ಕ್ಷೇತ್ರದ ಭೇಟಿಯಲ್ಲಿ ಅಲ್ಲಿನ ಅಧಿಕಾರಿಗಳನ್ನು ಭೇಟಿ ಮಾಡಿ ತಂಡ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸ್ಪಷ್ಟ ಗ್ರಹಿಕೆಯನ್ನು ಮಾಡಿದರು ಹಾಗೂ ಸಕಾಲ ಅಧಿನಿಯಮದ ಸಂಪೂರ್ಣ ಅನುಷ್ಠಾನದ ಬಗ್ಗೆ ವಿಮರ್ಶಿಸಿದರು. ಅಲ್ಲಿನ ಕೆಲವು ಸಮಸ್ಯೆಗಳನ್ನು ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

- ಸಂಪರ್ಕ ಕಲ್ಪಿಸುವಿಕೆಯ ಸಮಸ್ಯೆಗಳ ಬಗ್ಗೆ ತಂಡ ಹಾಗೂ ಇಲಾಖೆಗಳ ವರದಿ – ಪ್ರಮುಖವಾಗಿ ಐ.ಜಿ.ಆರ್ ಮತ್ತು ಕಾರ್ಮಿಕ ಇಲಾಖೆಯಿಂದ.

- ಮಂಗಳೂರು ಸಿಟಿ ಕಾರ್ಪೋರೇಷನ್ನಿನ ಕೆಲವು ಉತ್ತಮ ಅಭ್ಯಾಸಗಳು, ಕಛೇರಿಗಳಲ್ಲಿ ಕಾಗದ ರಹಿತವಾಗಿಸುವುದು,


  ಕಂದಾಯ ಮಾದರಿಯಲ್ಲಿ ನೀರು ಸರಬರಾಜನ್ನು ಹೊರಗುತ್ತಿಗೆ ನೀಡುವುದು, ಪರಿಶೀಲನಾ ಪಟ್ಟಿಯನ್ನು ಗುಣಮಟ್ಟದ ಆಧಾರದ ಮೇಲೆ ಉದಾಹರಣೆಯನ್ನಾಗಿ ಅಳವಡಿಸಿಕೊಳ್ಳುವುದು.
- ನಾಗರೀಕ ಕೌಂಟರ್ 'ಪಡಶಾಲೆ' ಎಂಬ ಹೆಸರಿನಲ್ಲಿ ಗಣಕೀಕರಣಗೊಳಿಸಿದ ಟೋಕನ್ ವ್ಯವಸ್ಥೆಯನ್ನು ನಾಗರೀಕರಿಗೆ ಸರಿಯಾದ ರೀತಿಯಲ್ಲಿ ಒದಗಿಸುವುದು. ಸಕಾಲ ಸಹಾಯವಾಣಿಯಲ್ಲಿ ವೈಯಕ್ತಿಕವಾಗಿ ಕುಳಿತು ನಾಗರೀಕರಿಗೆ ಸರಿಯಾದ ಸಲಹೆ ಸೂಚನೆಗಳನ್ನು ನೀಡುವುದು.
- ನೋಂದಣಿ ಪ್ರಕ್ರಿಯೆಯನ್ನು ಸರಳಿಕರಣಗೊಳಿಸಲು 11ಇ ಸ್ಕೆಚ್ ಎಂದು ಸ್ಮೂಥನ್ ನೋಂದಣಿ ಪ್ರಕ್ರಿಯೆಯ ಪ್ರಕಾರವನ್ನು ಸಕಾಲ ಅಡಿಯಲ್ಲಿ ತರುವುದು. (11ಇ ವ್ಯವಸ್ಥೆಯು ಎಲ್ಲಾ ಅಧಿಕಾರಿಗಳಿಗೂ ಸಹಗೊಂದಲವನ್ನು ಉಂಟುಮಾಡಿ ನೊಂದಣಿಯನ್ನು ವಿಳಂಬ ಅಥವಾ ಮುಂದೂಡಲು ಕಾರಣವಾಗಿರುವುದು)
- ಒಬ್ಬ ಅದಿಕಾರಿಯನ್ನು ಬೇಟಿ ಮಾಡದೆಯೇ ಟಚ್ ಸ್ಕ್ರೀನ್ ವ್ಯವಸ್ಥೆಯು ಅಂತರ್‌ಜಾಲದ ಮುಖಾಂತರ ಮಾಹಿತಿಯನ್ನು ಪುನಃ ಪುನಃ ತಿಳಿಯಬಹುದಾಗಿದೆ (ಇದು ಈಗ ಕ್ರಿಯಾತ್ಮಕವಾಗಿ ಇಲ್ಲ).



### ತುಮಕೂರು ಕ್ಷೇತ್ರದ ಬೇಟಿ: 21 ಜನವರಿ 2013

ಇದೇ ರೀತಿಯ ಕ್ಷೇತ್ರ ಬೇಟಿಯನ್ನು ದಿನಾಂಕ:22 ಜನವರಿ 2013 ರಂದು ಅಲ್ಲಿನ ಸಕಾಲಕ್ಕೆ ಮಾಡಲಾಯಿತು. ಆಗ ಅಲ್ಲಿನ ಸಮಸ್ಯೆಗಳು ಮತ್ತು ಪ್ರಾಮುಖ್ಯತೆಗಳನ್ನು ಚರ್ಚಿಸಿ ಅಂಕಗಳನ್ನು ನೀಡಲಾಯಿತು. ಸಕಾಲಕ್ಕೆ ಸಂಬಂಧಿಸಿದ ನಿರ್ದಿಷ್ಟ ಅಂಶಗಳು ಈ ಕೆಳಗಿನಂತೆ ಇವೆ.

- ಆರೋಗ್ಯ ಇಲಾಖೆಯು ಜನನ / ಮರಣ ಪ್ರಮಾಣ ಪತ್ರಗಳ ಅರ್ಜಿಗಳ ಸ್ವೀಕೃತಿ ಕಡಿಮೆಯಾಗಿರುವುದು. ನಿರ್ದೇಶಕರು ಆರೋಗ್ಯ ಇಲಾಖೆ ಇವರು ಭರವಸೆ ನೀಡಿ ಈ ಸಮಸ್ಯೆಯನ್ನು ಪರಿಹರಿಸುತ್ತೇವೆ ಎಂದು ಹೇಳಿರುತ್ತಾರೆ.
- ಕೆಲವು ಮೂಲಭೂತ ಸೌಲಭ್ಯಗಳು ಅವಶ್ಯಕವಾಗಿ ಬೇಕಾಗಿರುತ್ತವೆ ಉದಾಹರಣಗೆ ಫೋಟೋ ಕಾಪಿ ಯಂತ್ರಗಳು, (ಜೆರಾಕ್ಸ್) ಸ್ಕ್ಯಾನರ್. ಹೆಚ್ಚಿನ ಅರ್ಜಿಗಳು ತುಮಕೂರು ತಾಲ್ಲೂಕು ಕಛೇರಿಯಲ್ಲಿ ಇರುತ್ತವೆ.
- ಭೂ ಸುಧಾರಣೆಗಳ ಆಕ್ಟ್‌ನ್ನು ಉಲ್ಲೇಖಿಸಿ ಭೂ ರಹಿತ ಪ್ರಮಾಣ ಪತ್ರಗಳಿಗೆ ಸಂಬಂದಿಸಿದಂತೆ ಇರುವ ಕೆಲವು ಕಾನೂನು ಸಮಸ್ಯೆಗಳನ್ನು ಮಿಷನ್ ನಿರ್ದೇಶಕರ ಗಮನಕ್ಕೆ ತರಲಾಯಿತು.
- ಗ್ರಾಮ ಲೆಕ್ಕಾಧಿಕಾರಿಗಳ ಮಟ್ಟದಲ್ಲಿ ತರಬೇತಿಯನ್ನು ತಾಲ್ಲೂಕು ಮಟ್ಟದಲ್ಲಿ ಆಯೋಜಿಸುವುದು.
- ಬಹಳಷ್ಟು ಇಲಾಖೆಯಲ್ಲಿ ದತ್ತಾಂಶ ನಮೂದಕರ ಹೆಚ್ಚಿನ ಕೊರತೆ ಇರುತ್ತದೆ ದತ್ತಾಂಶ ನಮೂದಕರ ಕೊರತೆಯಿಂದಾಗಿ ಕೆಲಸವು ನಿಧಾನಗತಿಯಲ್ಲಿ ಸಾಗುತ್ತಿದೆ.
- ಕೆಲವು ಇಲಾಖೆಗಳು ವ್ಯವಸ್ಥೆಯ ತಾಂತ್ರಿಕ ಸಮಸ್ಯಗಳ ಬಗ್ಗೆ ವರದಿ ಮಾಡಿರುತ್ತವೆ.
- ಒಂದು ಸವಾಲು ನಿಧಿಯನ್ನು ಅಸಾಧಾರಣ ನಾವೀನ್ಯತೆಯ ಬಳಕೆಗೆ ಸಾರ್ವಜನಿಕ ಕ್ಷೇತ್ರದಲ್ಲಿ ಇಂತಹ ಉಪಕ್ರಮಗಳ ಧನ ಸಹಾಯವನ್ನು ಬಳಸಬಹುದು ಎಂದು ಡಾ॥ಶಾಲಿನಿ ರಜನೀಶ್‌ರವರು ಹೇಳಿದರು. ಅಲ್ಲದೆ ಅವರು ಯಾರು ಬೇಕಾದರೂ ಪ್ರಸ್ತಾವನೆಯನ್ನು ನಮಗೆ ಕೊಡಿ ಎಂದು ಹೇಳಿ ಮತ್ತು ಅದಕ್ಕೆ ಬೆಲೆ ಇರಬೇಕು ಎಂದು ಹೇಳಿದರು. ಅದು ನಿಧಿಯನ್ನು ಬೆಂಬಲಿಸುತ್ತದೆ. ನಂತರ ಒಂದು ಪತ್ರಿಕಾ ಸಭೆಯನ್ನು ಆಯೋಜಿಸಲಾಯಿತು.



ಶ್ರೀ ಆಫ್ಜಲ್ ಅಹಮದ್ ಖಾನ್, ಪ್ರಾದೇಶಿಕ ಸಾರಿಗೆ ಅಧಿಕಾರಿ, ತುಮಕೂರಿನಲ್ಲಿ ಸಕಾಲ ಅರ್ಜಿಗಳನ್ನು ವಿಕ್ಷೀಸುತ್ತಿದ್ದಾರೆ


# ಅಧ್ಯಾಯ 5

## ಕರೆ ಕೇಂದ್ರದ ವರದಿ:

ಕರೆಕೇಂದ್ರಕ್ಕೆ (080–44554455) ಈವರೆಗೆ 1,60,000 ಕರೆಗಳು ದಾಖಲಾಗಿವೆ. ಕರೆಗಳಲ್ಲಿ ಅಧಿನಿಯಮದ ವಿವರ, ವಿಧಾನ, ಹೇಗೆ ಅವಹಾಲು ಸಲ್ಲಿಸುವುದು, ಕಛೇರಿಯ ಅಧಿಕಾರಿಗಳ ವಿವರ ಇತರೆ ವಿಷಯಕ್ಕೆ ಸಂಬಂದಿಸಿದಾಗಿದೆ. ಕರೆ ಕೇಂದ್ರವು ನೋಡಲ್ ಕಛೇರಿಗಳಂತೆ ಕಾರ್ಯವೆಸಗುತ್ತಿದೆ ಅಂದರೆ ದೂರು ಸ್ವೀಕರಿಸಿ ಹಾಗೂ ಪರಿಹರಿಸುವ ನಿಟ್ಟಿನಲ್ಲಿ ತೊಡಗಿರುತ್ತದೆ.

ಸ್ವೀಕೃತಿಯಾಗಿರುವ ದೂರುಗಳು 2 ರೀತಿಯ ದೂರುಗಳಾಗಿರುತ್ತದೆ 1) ಸಕಾಲ ದೂರುಗಳು 2) ಸಕಾಲೇತರ ದೂರುಗಳು


ಅ) ಸಕಾಲ ದೂರುಗಳು: ಮಾಹೆಯಾನ ಕರೆಕೇಂದ್ರದಲ್ಲಿ ದಾಖಲಾಗುತ್ತಿರುವ ದೂರುಗಳ ನಕ್ಷೆ ಈ ಕೆಳಕಂಡಂತೆ ಇದೆ –




ನಕ್ಷೆ ಈ ಜನರವರಿ 2013 ಮಾಹೆಯಲ್ಲಿ ದೂರುಗಳು ಗರಿಷ್ಟವಾಗಿರುವುದನ್ನು ನಾವು ಗಮನಿಸಿದ್ದೇವೆ, ಇದು ಸಕಾಲದಲ್ಲಿ ಹೆಚ್ಚುವರಿ ಇಲಾಖೆಗಳ ಸೇರ್ಪಡೆಯಿಂದಾಗಿದೆ. ಮತ್ತೊಂದು ಪ್ರಮುಖ ದೂರಿನಲ್ಲಿ ಸಾರ್ವಜನಿಕರು ದೂರನ್ನು ಸರಿಯಾಗಿ ನಿರ್ವಹಿಸದೆ ದೂರು ಪರಿಹರಿಸಲ್ಪಟ್ಟಿದೆ ಎಂಬುದು ಗಮನಕ್ಕೆ ಬಂದಿದೆ. ದೂರುಗಳ ನಿರ್ವಹಣೆಗೆ ಯಾವುದೆ ಕಟ್ಟುನಿಟ್ಟಲ್ಲದೆ/ಸಡಿಲವಾಗಿ/ಖಚಿತಪಾಡಿಸದೆ ಪರಿಗಣಿಸುವುದರ ವಿರುದ್ಧ ಮಂಡಳಿಯು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಇದರಿಂದ 2 ಆಯಾಮಗಳಲ್ಲಿ ಪ್ರಕರಣದ ವಿವರಗಳು ಸನ್ನಿವೇಶಗಳ ಮೇರೆಗೆ ಖಚಿತ ಮಾಹಿತಿ ಮತ್ತು ಕ್ರಮಕ್ಕೆ ಪರಿಧಿಯಾಗುವುದು 1 – ಕರೆ ಕೇಂದ್ರವು ಸಾರ್ವಜನಿಕ ಅರ್ಜಿದಾರರ ದೂರನ್ನು ಪರಿಹರಿಸದೆ ದೂರುನ್ನು ಮುಕ್ತಯ ಮಾಡುವಂತೆ ಇಲ್ಲ. 2 – ಖಚಿತವಾಗಿ ಕಛೇರಿಯ ಸಿಬ್ಬಂದಿಗಳು ಕಾಲಮಿತಿ ಸೇವೆಗಳಿಗೆ ಪರಿಹಾರ ಧನ ನೀಡ ಬೇಕೆನ್ನುವ ಕಾರಣಕ್ಕೆ ಸೇವೆ ನೀಡಿದೆಯೆಂದು ಎಂದು ತಂತ್ರಾಂಶದಲ್ಲಿ ನಮೂದಿಸಿ ಸಾರ್ವಜನಿಕರಿಗೆ ಪರಿಹಾರ ಧನ ನೀಡದೆ ಸತಾಯಿಸದೆ ಇರುವುದಕ್ಕೆ ಕಡಿವಾಣವಾಗುವುದು.


ಈ ಮಾಹೆಯಲ್ಲಿ ಬೆಂಗಳೂರು (45), ಉತ್ತರ ಕನ್ನಡ (9) ಹಾಗೂ ತುಮಕೂರು (8) ಸಕಾಲ ದೂರುಗಳು ದಾಖಲಾಗಿದೆ.

ಸಕಾಲ ದೂರುಗಳ ಸ್ಥಿತಿ ಈ ಕೆಳಗಿನಂತಿದೆ:




ಆ) ಸಕಾಲೇತರ ದೂರುಗಳು: ಒಟ್ಟಾರೆ ಸಕಾಲೇತರ ದೂರುಗಳು ಕಡಿಮೆಯಾಗಿದೆ ಕಳೆದ ತಿಂಗಳು 194 ಇದ್ದ ದೂರುಗಳು 137ಕ್ಕೆ ಇಳಿದಿದೆ ಇದ್ದು ಹೆಚ್ಚುವರಿ ಇಲಾಖೆಗಳ ಸೇರ್ಪಡೆಯ ಪರಿಣಾಮವಾಗಿದೆ. ಆಂದೋಲಕ ನಿಯಮದ ಅನ್ವಯದ ಹಾಗೆ ಕಳೆದ ಮಾಹೆಗಳಲ್ಲಿ ಸಕಾಲೇತರ ದೂರುಗಳು ಎಂದು ಪರಿಗಣಿಸುತ್ತಿದ್ದ ದೂರುಗಳು ಸಾರ್ವಜನಿಕರ ಬೇಡಿಕೆಯಂತೆ ಈಗ ಸಕಾಲ ಅಧಿನಿಯಮದಡಿ ಬಂದಿವೆ ಇದರಿಂದ ಸಕಾಲೇತರ ದೂರುಗಳು ಇಳಿಮುಖವಾಗಿವೆ. ಯಾವುದೇ ಅಧಿನಿಯಮ ಯೋಜನೆಗಳು ಸಫಲವಾಗಲು ಸಾರ್ವಜನಿಕರ ಗರಿಷ್ಟ ಪಾಲ್ಗೊಳ್ಳುವಿಕೆಯೇ ಕಾರಣವಾಗಿದೆ. ಸಾರ್ವಜನಿಕರು ಸಕಾಲ ಅಧಿನಿಯಮವನ್ನು ಸೂಕ್ಷ್ಮವಾಗಿ ಗಮನಿಸಿ ನೀಡುವತ್ತಿರವ ಫಲಶ್ರುತಿಯಿಂದಾಗಿ ಹೆಚ್ಚಿನ ಸೇವೆಗಳು ಸಕಾಲದಲ್ಲಿ ಸೇರಿಸಲು ಕಾರಣವಾಗಿದೆ.

ಮಾಹೆಯಾನ ಸಕಾಲ ದೂರುಗಳ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.




ಬೆಂಗಳೂರು (600), ಮಂಡ್ಯ (82) ಹಾಗೂ ಮೈಸೂರು (81) ಜಿಲ್ಲೆಗಳಿಂದ ಅತೀ ಹೆಚ್ಚು ಸಕಾಲೇತರ ದೂರುಗಳು ಸಕಾಲ ಕರೆಕೇಂದ್ರದಲ್ಲಿ ದಾಖಲಾಗುತ್ತಿವೆ.

**ಸಕಾಲ ದೂರುಗಳ – ಇಲಾಖಾವಾರು ಮಾಹೆಯಾನ ವಿವರ:**

| ಇಲಾಖೆ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟಂ ಬರ್ | ಅಕ್ಟೋ ಬರ್ | ನವೆಂ ಬರ್ | ಡಿಸೆಂ ಬರ್ | ಜನ ವರಿ | ಒಟ್ಟು |
|---|---|---|---|---|---|---|---|---|---|---|---|---|
| ಕಂದಾಯ ಇಲಾಖೆ | 11 | | 11 | 48 | 32 | 32 | 58 | 23 | 27 | 15 | 69 | 326 |
| ಗ್ರಾಮೀಣಾಭಿವೃದ್ಧಿ | 11 | | 13 | 7 | 6 | 10 | 8 | 9 | 15 | 7 | 13 | 99 |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | | | 6 | 3 | 1 | 2 | 8 | 2 | 4 | 4 | 17 | 47 |
| ಆಹಾರ | 1 | | 3 | | 2 | 2 | 4 | 2 | 8 | 9 | 6 | 37 |
| ನಗರಾಭಿವೃದ್ಧಿ | | | 5 | 4 | | 4 | 4 | 4 | 8 | 1 | 7 | 37 |
| ಒಳಾಡಳಿತ | | | 1 | 1 | | | 1 | | 9 | 7 | 1 | 20 |
| ಸಾರಿಗೆ ಇಲಾಖೆ ಬೆಂಗಳೂರು | 1 | | 3 | 1 | | | | | 2 | 1 | 4 | 12 |
| ನೀರು ಸರಬರಾಜು ಹಾಗೂ ಒಲಚರಂಡಿ | | | | | | | 4 | 1 | 1 | | 1 | 7 |
| ಶಿಕ್ಷಣ ಇಲಾಖೆ | | 1 | | 2 | | 1 | | | 1 | 1 | 1 | 7 |
| ವಾಣಿಜ್ಯ ತೆರಿಗೆ ಇಲಾಖೆ | 1 | | 2 | 1 | | | | 1 | | | 1 | 6 |
| ಆರೋಗ್ಯಹಾಗೂ ಕುಟುಂಬ ಕಲ್ಯಾಣ | | | 2 | | | | 1 | | | | 1 | 4 |
| ಸಿಬ್ಬಂದಿ ಹಾಗೂ ಆಡಳಿತ ಸುಧಾರಣೆ | | | | | | | | | 3 | | 2 | 5 |
| ಕಾರ್ಮಿಕ ಇಲಾಖೆ | | | | | | 1 | | | | 1 | | 2 |
| ಪಟ್ಟಣ ಮುನಿಸಿಪ್ ಕೌನ್ಸಿಲ್ | | | | | | | | | | | 1 | 1 |
| ಬಿಡಿಎ | | | | | | | | | 1 | | | 1 |
| ಇ ಎಸ್ ಐ ಸಿ | | | | | | | | | 1 | | | 1 |
| ಮಹಿಳೆ ಮತ್ತು ಮಕ್ಕಳ ಕಲ್ಯಾಣ | | | 1 | | | | | | | | | 1 |
| ಕಾರ್ಖಾನೆ ಮತ್ತು ಬಾಯ್ಲರ್ | | | | | | | | | 1 | | | 1 |
| ಕೊಳಚೆ ನಿರ್ಮೂಲನೆ ಮಂಡಳಿ | | | | | | | | | 1 | | | 1 |
| **ಒಟ್ಟು** | **25** | **1** | **47** | **67** | **41** | **52** | **88** | **42** | **82** | **46** | **124** | **615** |

# ಕರೆ ಕೇಂದ್ರದಿಂದ ಪ್ರಕರಣಗಳ ಅಧ್ಯಾಯನ:

| | |
|---|---|
| *ಶ್ರೀ ಹೆಗ್ಗಡೆ*<br>*ವಿನಾಯಕನಗರ, ಜೀವನಭೀಮ ನಗರ, ಬೆಂಗಳೂರು* | ಮತ್ತೊಂದು ಸಕಾಲೇತರ ದೂರಿನಲ್ಲಿ ಹಿರಿಯ ನಾಗರಿಕರೊಬ್ಬರು ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ ಹೆಚ್ಚು ತೆರಿಗೆ ವಿಧಿಸಿದೆ ಎಂದು ತಿಳಿಸಿದರು (ರೂ 23224/– ) ಕಳೆದ 8 ವರ್ಷಗಳಿಂದ ಇದರ ಬಗ್ಗೆ ಅವರು ಕಛೇರಿಯ ಸಿಬ್ಬಂದಿಯೊಟ್ಟಿಗೆ ಪರಿಶೀಲಿಸಲು ಕೋರಿದ್ದರು. ಸಕಾಲ ಕರೆಕೇಂದ್ರದಲ್ಲಿ ದಾಖಲಾದ ದೂರಿನ ಮೇರೆಗೆ ಹಾಗೂ ಎ ಆರ್ ಒ ಬಿ ಬಿ ಎಂ ಪಿ (ವಾರ್ಡ್ # 58) ಸಹಕಾರದ ಮೇರೆಗೆ ಪ್ರಕರಣವನ್ನು ಬಗೆಹರಿಸಲಾಯಿತು. 8 ವರ್ಷಗಳಿಂದ ಪರಿಹಾರ ಕಾಣದಿದ್ದ ಪ್ರಕರಣಕ್ಕೆ ಸಕಾಲ ತಂಡ ತ್ವರಿತವಾಗಿ ಸಹಕರಿಸಿದ್ದಕ್ಕೆ ಮಂಡಳಿಗೆ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ತಮ್ಮ ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸಿದರು. |
| ರಾಮ ಕೃಷ್ಣ – ಮಂಡ್ಯ. | ಸಕಾಲೇತರ ದೂರು: ಅರ್ಜಿ ಸ್ವೀಕರಿಸಲಾಗಿದೆ ಆದರೆ ಪ್ರಕರಣವನ್ನು ಸಂಭಂದಿಸಿದವರಿಗೆ ವರ್ಗವಣೆಯಾಗಿಲ್ಲ, ಖಾತೆ ಬದಲಾವಣೆ ಉಚಿತ ಭೂ ಅಧಿನಿಯಮದಡಿ ಮಂಜೂರಾತಿ(ತೋಟಿನನುಮತಿ) ಯಾಗಿರುವ(10ನೇ ನವೆಂಬರ್ 1986ರಂದು) ಪ್ರಕರಣದಲ್ಲಿ ಇದುವರೆಗೆ ಖಾತೆ ಬದಲಾವಣೆಯಾಗಿಲ್ಲ (29ನೇ ಮಾರ್ಚ್ 2009ರಲ್ಲಿ ಅರ್ಜಿ ಸಲ್ಲಿಸಿದರು), ಈ ಪ್ರಕರಣದ ಬಗ್ಗೆ ಕರೆ ಕೇಂದ್ರದವರೂ ಮಂಡಳಿಗೆ ತಿಳಿಸಿದರು ದೂರಿನ ಮೇರೆಗೆ ಮಂಡ್ಯ ಜಿಲ್ಲಾಧಿಕಾರಿಯರ ಸಹಯೋಗದೊಂದಿಗೆ, (ಮಾಹಿತಿಗಾಗಿ ಆರ್ ಟಿ ಐ ಗೆ 16ನೇ ಮಾರ್ಚ್ 2012ರಂದು ಅರ್ಜಿದಾರರು ಅರ್ಜಿ ನೀಡಿದರು ಆರ್ ಟಿ ಐ ಇವರೊಟ್ಟಿಗೆ ಸಹಕರಿಸಿರಲಿಲ್ಲ) ಪ್ರಕರಣವನ್ನು ಬಗೆಹರಿಸಲಾಯಿತು. ಸ್ವೀಕೃತಿ ಪತ್ರ ಅರ್ಜಿದಾರರಿಗೆ ನೀಡುವುದು ಬಾಕಿ ಇದೆ. |
| ಮಹೇಶ್ – ಕೋಲಾರ, | ಕೋಲಾರ ಜಿಲ್ಲೆಯಲ್ಲಿ 30 ದಿನಗಳಿಂದ ಸರಿಯಾದ ನೀರು ಸರಬರಾಜು ಆಗುತ್ತಿಲ್ಲವೆಂದು ದೂರು ಸ್ವೀಕರಿಲಾಗಿದ್ದು ಸಂಭಂದಿಸಿದವರು ಸೂಕ್ತ ಕ್ರಮ ತೆಗೆದುಕೊಂಡಿಲ್ಲವೆಂಬ ಮಹೇಶ್ ಎಂಬುವರ ದೂರಿನ ಮೇರೆಗೆ ಸಕಾಲ ಮಂಡಳಿಯ ಕ್ರಮದಿಂದ ನಿಯೋಜಿತ ಎ ಇ ಇ ಹಾಗೂ ಪಿ ಡಿ ಒ ಅಧಿಕಾರಿಯು ಕಾರ್ಯ ಪರವೃತ್ತರಾಗಿ ನೀರು ಸರಬರಾಜು ಮಾಡಿದರು ಹಾಗೂ ಕೆಲವೊಂದು ತಾಂತ್ರಿಕ ಸಮಸ್ಯೆಗಳಿಂದ ಹೊರ ಬರುವ ತನಕ ನೀರು ಸರಬರಾಜಿಗೆ ವ್ಯವಸ್ಥೆ ಮಾಡಲಾಯಿತು, ಸಕಾಲ ಮಂಡಳಿಯ ನಿರಂತರ ಮೇಲ್ವಿಚಾರಣೆ ಕ್ರಮದಿಂದು ಇದು ಸಾಧ್ಯವಾಯಿತು, 48 ಗಂಟೆಗಳ ಒಳಗೆ ದೂರು ಪರಿಹರಿಸಲಾಯಿತು. |

# ಅಧ್ಯಾಯ 6

# ಸಕಾಲೇತರ ನಾವಿನ್ಯತೆಗಳು

## 1. ತಾಲೂಕುವಾರು ಸಹಾಯಕೇಂದ್ರಗಳ ವರದಿಗಳು – ದತ್ತಾಂಶ 28.1.2013

ಫೆಬ್ರವರಿ 1, 2013 ರಂದು ಸಹಾಯಕೇಂದ್ರಗಳೊಂದಿಗೆ ನಡೆಸಿದ ವಿಡಿಯೋ ಸಮಾಲೋಚನೆ ಸಭೆಯಲ್ಲಿ ತಾಲೋಕು ಮಟ್ಟದಲ್ಲಿ ದೊರೆತ ವಿವರ:-

| | |
|---|---|
| ಸಹಾಯ ಕೇಂದ್ರ ಸ್ಥಾಪಿತವಾಗಿರುವುದು | 146 |
| ಸಹಾಯ ಕೇಂದ್ರ ಸ್ಥಾಪಿತವಾಗಬೇಕಿರುವುದು | 60 |

ಬಾಕಿ ಸ್ಥಾಪಿತವಾಗಬೇಕಿರುವ 12 ಸಹಾಯ ಕೇಂದ್ರಗಳು 28.1.2013ರಿಂದ ಕಾರ್ಯ ನಡೆಸುವುದು, ಉಳಿದ ಕೆಲವು ಸಹಾಯ ಕೇಂದ್ರಗಳು 1ನೇ ಫೆಬ್ರವರಿ 2013 ರಿಂದ ಕಾರ್ಯ ಪ್ರವೃತ್ತವಾಗಬಹುದು (ಇದರಲ್ಲಿ ಸ್ಥಾಪಿತವಾಗಬೇಕಿರುವ 17 ಸಂಖ್ಯೆಯು ಸೇರಿದೆ)

ಸಹಾಯ ಕೇಂದ್ರ ತರಬೇತಿ ಕಾರ್ಯಕ್ರಮ: 31ನೇ ಜನವರಿ 2013: ಕೊಠಡಿ ಸಂಖ್ಯೆ 122, ವಿಕಾಸ ಸೌಧ.

ಕಾರ್ಯ ವರದಿಯ ನಮೂನೆಯ ಬಗ್ಗೆ , ಕ್ಷಿಷ್ಟ ನಿರ್ವಹಣೆಯನ್ನು ಬಗ್ಗೆಹರಿಸುವ ಬಗ್ಗೆ , ಎನ್ ಐ ಸಿ ಪೋರ್ಟಲ್ ವಿವರ ಮಂಡಳಿಯ ಕಾರ್ಯವೈಖರಿ ಸಹಾಯ ಕೇಂದ್ರ ಕಾರ್ಯ ವರದಿ ಕಾಲಮಿತಿಯಲ್ಲಿ ಸಲ್ಲಿಸು ಬಗ್ಗೆ ರಚನಾತ್ಮಕ ವಿಧಾನಗಳಿಂದ ಸಕಾಲದ ಬಗ್ಗೆ ಅರಿವು ಮೂಡಿಸಲು ಹಾಗು ಕೊನೆಯದಾಗಿ ದತ್ತಾಂಶಗಳನ್ನು ತಿರುವುಮುರುವು ಮಾಡುವುದರ ಸಂಪೂರ್ಣ ನಿಷೇಧವೆಂದು ತಿಳಿಸಲಾಯಿತು. ಹಿಂದಿನ ತಿಂಗಳುಗಳ ವರದಿಯನ್ನು ಪ್ರತಿ ತಿಂಗಳು 5ನೇ ದಿನಾಂಕದೊಳಗೆ ನೀಡಬೇಕೆಂದು ಸೂಚಿಸಲಾಯಿತು. ಜಿಲ್ಲಾ ಮಾಹಿತಿ ಸಮಾಲೋಚಕರು ಡಾಡ ಎಂಟ್ರಿಯಲ್ಲಿ ಸಲಹೆ ನೀಡುವರೆಂದು ತಿಳಿಸಲಾಯಿತು ಹಾಗು ಸಹಾಯಕೇಂದ್ರವು ಸ್ವತಃ ವರದಿಗಳನ್ನು ನೀಡಬೇಕೆಂದು ತಿಳಿಸಲಾಯಿತು.

**ಒಟ್ಟಾರೆ ಗಮನಿಸಿರುವ ಅಂಶಗಳು:**

- ಎಲ್ಲಾ ಜಿಲ್ಲಾ ಮಾಹಿತಿ ತಂತ್ರಜ್ಞರ ಜೊತೆಗೂಡಿ ಸಹಾಯ ಕೇಂದ್ರಗಳನ್ನು ನೇಮಿಸಲಾಗಿದೆ
- ಮಂಡ್ಯ ಹಾಗೂ ಹಾಸನ ಸಹಾಯ ಕೇಂದ್ರಗಳನ್ನು ಹೊರತುಪಡಿಸಿ ಉಳಿದೆಲ್ಲ ಸಹಾಯ ಕೇಂದ್ರದ ಸಿಬ್ಬಂದಿಗಳ ತರಬೇತಿಯ ಅವಶ್ಯಕತೆಯಿದೆ ಅಧಿನಿಯಮದ ಬಗ್ಗೆ ನೈಪುಣ್ಯತೆ/ಪರಿಣತೆಯ ಮಟ್ಟ ಜ್ಞಾನ ಹೆಚ್ಚಾಗಿರಬೇಕು.
- ಕಠಿಣತೆಗಳನ್ನು ಕೇಂದ್ರಿಕರಿಸಿ ಅಧಿನಿಯಮದ ಬಗ್ಗೆ ತರಬೇತಿ ನೀಡುವುದರ ಅವಶ್ಯಕತೆಯಿದೆ – ತಂತ್ರಾಂಶ ಹೇಗೆ (ಸಕಾಲ ಪೋರ್ಟ್) ಉಪಯೋಗಿಸುವುದೆಂಬುದನ್ನು ತಿಳಿದಿರಬೇಕಾಗಿರುವುದರ ಅವಶ್ಯಕತೆಯಿರುತ್ತದೆ.
- ಅವಾಹಲು/ ದೂರುಗಳನ್ನು ನಿರ್ವಹಿಸುವಲ್ಲಿ ಇಷ್ಟವಿಲ್ಲದಿರುವುದು/ಆಸಕ್ತರಿಲ್ಲದಿರುವುದು ಕಂಡುಬಂದಿದೆ.

**ಪ್ರಕರಣಗಳು ಹಾಗೂ ಕಳಜಿ**

- ಮಹಿಳಾ ಫೋರಂ ಹಾಗೂ ಇತರೆ ಸ್ವಯಂ ಸೇವೆ ಸಂಸ್ಥೆಗಳು **ದೊಡ್ಡ ವ್ಯಕ್ತಿಗಳ ಹೆಸರುಗಳನ್ನು ಉಪಯೋಗಿಸಿ ಸಹಾಯ ಕೇಂದ್ರಗಳಸಿಬ್ಬಂದಿಗಳ ಮುಖಾಂತರ** ಬೆದರಿಸಿ ಸೇವೆಗಳನ್ನು ಪಡೆಯುತ್ತಿರುವುದು ಕಂಡು ಬರುತ್ತಿದೆ. ಇಂಥಹ ನಡುವಳಿಕೆಗಳನ್ನು ಪುಷ್ಟಿಕರಿಸಬಾರದೆಂದು ಸಹಾಯ ಕೇಂದ್ರದವರಿಗೆ ಮಂಡಳಿಯು ತಿಳಿಸಿದೆ.

- ಸಹಾಯ ಕೇಂದ್ರಗಳ ಸಿಬ್ಬಂದಿಗಳನ್ನು ಡಾಟ ಎಂಟ್ರಿ ಆಪರೇಟರ್ ಗಳಾಗಿ ಉಪಯೋಗಿಸುತ್ತಿರುವ ಬಗ್ಗೆ: ಕೌಂಟರ್ ನಿಂದ ದೂರವಿದ್ದು ಕಛೇರಿಯ ಕೇಸ್ ವರ್ಕ್‌ರ್ (ವಿಷಯ ನಿರ್ವಾಹಕರು) ಮುಖಾಂತರ ಡಾಟ ಎಂಟ್ರಿಗೆ ಸಹಾಯ ಮಾಡಬೇಕು. ಈ ಕೆಲಸಕ್ಕೆ ಅವರನ್ನು ಅಡ್ಡಿಪಡಿಸಿಕೊಂಡರೆ ಸಹಾಯ ಕೇಂದ್ರವು ಕರ್ತವ್ಯ ನಿರ್ವಹಣೆಯಲ್ಲಿ ವಿಫಲತೆವೆಂದು ಪರಿಗಣಿಸಬೇಕಾಗುತ್ತದೆ.ಉನ್ನತ ಅಧಿಕಾರಿಗಳ ಆರ್ಶಿವಾದದಿಂದ ಈ ಅಭ್ಯಾಸ ಇರುತ್ತದೆ. ಮತ್ತೇ ಸಹಾಯ ಕೇಂದ್ರದ ಸಿಬ್ಬಂದಿಗಳೊಟ್ಟಿಗೆ ಅಸಭ್ಯವಾಗಿ, ದರ್ಪದಿಂದ ವರ್ತಿಸುತ್ತಿರುವರೆಂದು ಮಂಡಳಿಗೆ ದೂರು ನೀಡಲಾಗಿದೆ.
- ಕೆಲವೊಂದು ಸ್ಥಳಗಳಲ್ಲಿ ನೆಟ್ (ಅಂತರ್ ಜಾಲ) ಸಂಪರ್ಕಗಳು ಹಾಗೂ ಇತರೆ ಮೂಲ ಸೌಲಭ್ಯಗಳಲ್ಲಿ ತೊಡಕುಗಳು ಇರುವುದು ಕಂಡುಬಂದಿದೆ (ಹಾಸನ, ಚಿಕ್ಕಬಳ್ಳಾಪುರ).
- ಕಛೇರಿಗಳು ಮುದ್ರಣ ಸಾಮಾಗ್ರಿಗಳನ್ನು ಪೂರೈಸುತ್ತಿಲ್ಲವೆಂದು ತಿಳಿದುಬಂದಿದೆ.
- ಸಂಬಳವನ್ನು ನಿಯಮಾನುಸಾರ ಪಾವತಿಸುತ್ತಿಲ್ಲದಿರುವುದು ಗಮನಕ್ಕೆ ಬಂದಿದೆ.
- ಚಿತ್ರದುರ್ಗ: ಸಹಾಯ ಕೇಂದ್ರವು ಸುಳ್ಳು ದಾಖಾಲಾತಿಗಳನ್ನು ನೀಡಿದ್ದರ ಸಲುವಾಗಿ ಅವರನ್ನು ಜಿಲ್ಲಾಧಿಕಾರಿಗಳು ಅನುರ್ಜಿತಗೊಳಿಸಿದ್ದಾರೆ. ಹೊಸ ಜನರನ್ನು ಗುರುತಿಸಲಾಗಿ ಮುಂದಿನ 15 ದಿನಗಳ ಒಳಗೆ ಕಾರ್ಯನಿರತರಾಗುವರು.

## ಸಲಹೆಗಳನ್ನು ಸ್ವೀಕರಿಸಿರುವ ಬಗ್ಗೆ:

265 ಸೇವಾ ನಿರ್ವಾಹಣೆಯ ಬಗ್ಗೆ ಸವಿಸ್ತಾರ ವಿವರಗಳನ್ನು ಹೊಂದಿರುವ ಮುದ್ರಿತ ಬುಕ್ ಲೆಟ್ ನ್ನು ಇಲಾಖೆಗಳಿಂದ ಸಹಾಯಕೇಂದ್ರಗಳ ಉಪಯೋಗಕ್ಕೆ ನೀಡುವುದು. ಒಂದು ಸಂಪೂರ್ಣ ದಿನ ಅಧಿನಿಯಮದ,ಪೋರ್ಟಲ್ ಬಗ್ಗೆ ತರಬೇತಿ ಮತ್ತು ಒಂದು ಸಣ್ಣ ಪರೀಕ್ಷೆಯ ಮುಖಾಂತರ ಹೇಗೆ ಅರಿತಿದ್ದರೆ/ಅಳವಡಿಸಿದ್ದಾರೆ ಎಂಬುದನ್ನು ಕಂಡುಕೊಳ್ಳುವುದು.

ಸಹಾಯ ಕೇಂದ್ರದ ವ್ಯಕ್ತಿಯು ಚಕ್ ಲಿಸ್ಟ್ ನಲ್ಲಿ ವ್ಯತ್ಯಾಸ ಧೃಡಿಪಡಿಸಿಕೊಂದು ಇಲಾಖೆಯ ನೋಡಲ್ ಅಧಿಕಾರಿಗಳನ್ನು ಭೇಟಿ ಮಾಡಲು ಅಪ್ಪಣೆ ನೀಡುವುದು (ಕೆಲವೊಂದು ಸಂಧರ್ಬದಲ್ಲಿ ಹೆಚ್ಚುವರಿ ದಾಖಾಲತಿಗಳನ್ನು ಒದಗಿಸಬೇಕಾದಂತಹ ಪರಿಸ್ಥಿತಿಗಳಲ್ಲಿ ವಿಶೇಷವಾಗಿ ನಗರಾಭಿವೃದ್ಧಿ ಇಲಾಖೆಯಲ್ಲಿ) ಹಾಗೂ ನಾಗರೀಕರ ಹೊಸ ಬೇಡಿಕೆಗೆ ಅನುಸಾರವಾಗಿ ಮಂಡಳಿಗೆ ಪೋರ್ಟಲ್ ಉನ್ನತಿಕರಿಸಲು/ಬದಲಾಯಿಸಲು ತಿಳಿಸುವುದು (ಸಲಹೆ ಕೃಪೆ: ದಾವಣಗೆರೆ ಸ್ವಯಂ ಸೇವಾ ಸಂಸ್ಥೆ)

ಇಲಾಖೆಗಳ ಬಲವರ್ಧನೆಗಾಗಿ ರಾಜ್ಯಾದ್ಯಂತ ಭರ್ತಿ ಮಾಡಬೇಕಿರುವ ಹುದ್ದೆಗಳ ವಿವರ, ಗಮನಿಸಬೇಕಾದ ಅಂಶವೆಂದರೆ 56007 ಹುದ್ದೆಗಳು ಭರ್ತಿ ಮಾಡಬೇಕಿರುವುದು ಕಂಡುಬಂದಿದೆ. ಈ ಮೊದಲು ಸರಕಾರಿ ಸಿಬ್ಬಂದಿಗಳು ಹೆಚ್ಚಿರುವರೆಂದು ತಿಳಿದುಬಂದಿತ್ತು. ಆದರೆ ಈಗ ಇಲಾಖೆಗಳು ಹೊರಡಿಸಿರುವ ಅವಶ್ಯಕ ಹುದ್ದೆಗಳನ್ನು ಪುನರ್ ವಿಮರ್ಶಿಸಬೇಕಾದ ಅವಶ್ಯಕತೆಯಿರುವುದು. ಇನ್ನೂ ಹಲವು ಇಲಾಖೆಗಳು ಹುದ್ದೆ ಭರ್ತಿ ಮಾಡಲು ಬೇಕಿರುವ ಜನ ಸಂಖ್ಯೆಯ ವಿವರಗಳನ್ನು ನೀಡಬೇಕಿದೆ.

## ಖಾಲಿ ಇರುವ ಹುದ್ದೆಗಳ ವಿವರ ಸೇರಿಸುವುದು –

ರಾಜ್ಯದ ವಿವಿಧ ಇಲಾಖೆಗಳಿಂದ ಪ್ರಸ್ತುತ ನೀಡಿರುವ ವರದಿ ಪ್ರಕಾರ – ಖಾಲಿಯಿರುವ ಹುದ್ದೆಗಳ ಪಟ್ಟಿ

| ಕ್ರ. ಸಂ | ಇಲಾಖೆಗಳ ಹೆಸರು | ಮಂಜೂರಾದ ಹುದ್ದೆಗಳು ವರ್ಗಾವಾರು | | | | ಖಾಲಿಯಿರುವ ಹುದ್ದೆಗಳು ವರ್ಗಾವಾರು | | | | ಖಾಲಿಯಿರುವ ಹುದ್ದೆಗಳಲ್ಲಿ ಅತ್ಯವಶ್ಯಕವಾಗಿ ತುಂಬಬೇಕಾದ ಹುದ್ದೆಗಳು ವರ್ಗಾವಾರು | | | | ದಿನಾಂಕ 12/31/2012 ರಲ್ಲಿದ್ದಂತೆ ಬಾಕಿಯಿದ್ದ ಕಡತಗಳ ಸಂಖ್ಯೆ | ಸಕಾಲ ಸೇವೆಗಳ ಅರ್ಜಿಗಳ ಸಂಖ್ಯೆ | |
|---|---|---|---|---|---|---|---|---|---|---|---|---|---|---|---|---|
| | | | | | | | | | | | | | | | ಸ್ವೀಕೃತಿ | ವಿಲೆ |
| | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | | | |
| –1 | –2 | –3 | –4 | –5 | –6 | –7 | –8 | –9 | –10 | –11 | –12 | –13 | –14 | –15 | –16 | –17 |
| 1 | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 282 | 596 | 1076 | – | 39 | 187 | 655 | – | – | – | 655 | – | 5730 | 170143 | 157094 |
| 2 | ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ | 61 | 114 | 1831 | 338 | 6 | 11 | 394 | 84 | 6 | 11 | 394 | 84 | 1171 | 834415 | 829346 |
| 3 | ಕಾರ್ಮಿಕ ಇಲಾಖೆ | 710 | 255 | 5574 | 2059 | 246 | 52 | 1923 | 924 | 138 | 38 | 1657 | 839 | 2195 | 101707 | 98682 |
| 4 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 122 | 337 | 4906 | 1191 | 22 | 168 | 1115 | 453 | – | 83 | 452 | 397 | 1495 | 64466 | 64308 |
| 5 | ಆರ್ಥಿಕ ಇಲಾಖೆ | 9 | 73 | 923 | 133 | 2 | 8 | 213 | 39 | 2 | 8 | 213 | 39 | 7338 | 1544758 | 1515516 |
| 6 | ಸಾರಿಗೆ ಇಲಾಖೆ | 56 | 278 | 1756 | 379 | 3 | 13 | 460 | 38 | 3 | 13 | 460 | 38 | 770 | 3109295 | 3039148 |
| 7 | ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ | 1840 | 17324 | 72730 | 4828 | 444 | 3958 | 7770 | 3142 | 444 | 3298 | 7028 | 2814 | 9667 | 71030 | 67293 |
| 8 | ಒಳಾಡಳಿತ ಇಲಾಖೆ | 19 | 48 | 6817 | 74 | 5 | 6 | 2806 | 22 | 3 | 2 | 1916 | 24 | 17842 | 657926 | 638677 |
| 9 | ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ | 602 | 2642 | 8150 | 7365 | 50 | 727 | 2197 | 2189 | 43 | 684 | 2074 | 2148 | 1934 | 72 | 70 |

| ಕ್ರ. ಸಂ | ಇಲಾಖೆಗಳ ಹೆಸರು | ಮಂಜೂರಾದ ಹುದ್ದೆಗಳು ವರ್ಗಾವಾರು | | | | ಖಾಲಿಯಿರುವ ಹುದ್ದೆಗಳು ವರ್ಗಾವಾರು | | | | ಖಾಲಿಯಿರುವ ಹುದ್ದೆಗಳಲ್ಲಿ ಅತ್ಯವಶ್ಯಕವಾಗಿ ತುಂಬಬೇಕಾದ ಹುದ್ದೆಗಳು ವರ್ಗಾವಾರು | | | | ದಿನಾಂಕ 12/31/2012 ರಲ್ಲಿದ್ದಂತೆ ಬಾಕಿಯಿದ್ದ ಕಡತಗಳ ಸಂಖ್ಯೆ | ಸಕಾಲ ಸೇವೆಗಳ ಅರ್ಜಿಗಳ ಸಂಖ್ಯೆ | |
|---|---|---|---|---|---|---|---|---|---|---|---|---|---|---|---|---|
| | | | | | | | | | | | | | | | ಸ್ವೀಕೃತಿ | ವಿಲೆ |
| | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | | | |
| –1 | –2 | –3 | –4 | –5 | –6 | –7 | –8 | –9 | –10 | –11 | –12 | –13 | –14 | –15 | –16 | –17 |
| 10 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 117 | 258 | 595 | 287 | 22 | 50 | 155 | 91 | 22 | 40 | 130 | 91 | 5263 | 4963 | 4938 |
| 11 | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ | 6 | 9 | 18 | 6 | 4 | 3 | 10 | 3 | 4 | 3 | 10 | 3 | 6279 | 92 | 56 |
| 12 | ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ | 84 | 110 | 617 | 380 | 26 | 30 | 176 | 92 | 13 | 25 | 141 | 41 | 1974 | 176 | 137 |
| 13 | ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ | 997 | 2576 | 4709 | 2230 | 18 | 482 | 780 | 226 | 15 | 461 | 711 | 114 | 4515 | 39 | 33 |
| 14 | ಸಿಆಸುಇ | 673 | 407 | 1875 | 963 | 239 | 17 | 550 | 396 | 239 | 17 | 550 | 396 | 11891 | 44 | 6 |
| | ಒಟ್ಟು | 5578 | 25027 | 111577 | 20233 | 1126 | 5712 | 19204 | 7699 | 932 | 4683 | 16391 | 7028 | | | |

# ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ಬಗ್ಗೆ ವಿವರಣಾ ಪಟ್ಟಿ

| ಕ್ರ. ಸಂ | ಇಲಾಖೆಗಳ ಹೆಸರು | ಮಂಜೂರಾದ ಹುದ್ದೆಗಳು | | | | ಖಾಲಿಯಿರುವ ಹುದ್ದೆಗಳು | | | | ಖಾಲಿಯಿರುವ ಹುದ್ದೆಗಳಲ್ಲಿ ಅತ ಅವಶ್ಯವಾಗಿ ತುಂಬಬೇಕಾದ ಹುದ್ದೆಗಳು | | | | ದಿನಾಂಕ 12/31/2012 ರಲ್ಲಿದ್ದಂತೆ ಬಾಕಿಯಿದ್ದ ಕಡತಗಳ ಸಂಖ್ಯೆ | ಸಕಾಲ ಸೇವೆಗಳ ಅರ್ಜಿಗಳ ಸಂಖ್ಯೆ | |
|---|---|---|---|---|---|---|---|---|---|---|---|---|---|---|---|---|
| | | ವರ್ಗಾವಾರು | | | | ವರ್ಗಾವಾರು | | | | ವರ್ಗಾವಾರು | | | | | ಸ್ವೀಕೃತಿ | ವಿಲೆ |
| | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | | | |
| -1 | -2 | -3 | -4 | -5 | -6 | -7 | -8 | -9 | -10 | -11 | -12 | -13 | -14 | -15 | | |
| 15 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ) | 1667 | 308 | 4166 | 1556 | 560 | 205 | 2652 | 1010 | 560 | 205 | 2652 | 1010 | 2184 | | |
| 16 | ಜಲಸಂಪನ್ಮೂಲ ಇಲಾಖೆ | 2381 | 1425 | 5480 | 2939 | 929 | 333 | 1329 | 566 | 929 | 333 | 1329 | 566 | 4718 | | |
| 17 | ಯೋಜನಾ ಇಲಾಖೆ | 29 | 48 | 47 | 25 | 5 | 16 | 32 | 15 | 5 | 16 | 32 | 15 | 1322 | | |
| 18 | ಪ್ರವಾಸೋದ್ಯಮ ಇಲಾಖೆ | 12 | 22 | 115 | 45 | 0 | 5 | 42 | 20 | 0 | 5 | 42 | 20 | 770 | | |
| 19 | ಸಾರ್ವಜನಿಕ ಉದ್ದಿಮೆಗಳ ಇಲಾಖೆ | 11 | 5 | 30 | 11 | 3 | 1 | 18 | 7 | 3 | 1 | 18 | 7 | 126 | | |
| 20 | ತೋಟಗಾರಿಕೆ ಇಲಾಖೆ | 209 | 1485 | 1802 | 2130 | 46 | 538 | 575 | 489 | 18 | 293 | 380 | 331 | 2015 | | |
| 21 | ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ | 12 | 5 | 24 | 8 | 2 | 1 | 14 | 8 | 1 | 1 | 4 | 6 | 716 | | |
| 22 | ಇಂಧನ ಇಲಾಖೆ | 75 | 80 | 158 | 69 | 10 | 43 | 63 | 35 | 2 | 8 | 15 | 14 | 1034 | | |
| 23 | ಸಂಸದೀಯ ವ್ಯವಹಾರಗಳ ಇಲಾಖೆ | 10 | 43 | 26 | 11 | 5 | 22 | 10 | 4 | 5 | 22 | 10 | 4 | 490 | | |
| 24 | ಕೃಷಿ ಇಲಾಖೆ | 631 | 3337 | 4949 | 1509 | 138 | 1883 | 1963 | 469 | 133 | 1774 | 1751 | 411 | 1966 | | |

| ಕ್ರ. ಸಂ | ಇಲಾಖೆಗಳ ಹೆಸರು | ಮಂಜೂರಾದ ಹುದ್ದೆಗಳು ವರ್ಗಾವಾರು | | | | ಖಾಲಿಯಿರುವ ಹುದ್ದೆಗಳು ವರ್ಗಾವಾರು | | | | ಖಾಲಿಯಿರುವ ಹುದ್ದೆಗಳಲ್ಲಿ ಅತ ಅವಶ್ಯವಾಗಿ ತುಂಬಬೇಕಾದ ಹುದ್ದೆಗಳು ವರ್ಗಾವಾರು | | | | ದಿನಾಂಕ 12/31/2012 ರಲ್ಲಿದ್ದಂತೆ ಬಾಕಿಯಿದ್ದ ಕಡತಗಳ ಸಂಖ್ಯೆ | ಸಕಾಲ ಸೇವೆಗಳ ಅರ್ಜಿಗಳ ಸಂಖ್ಯೆ ಸ್ವೀಕೃತಿ | ವಿಲೆ |
|---|---|---|---|---|---|---|---|---|---|---|---|---|---|---|---|---|
| | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | | | |
| -1 | -2 | -3 | -4 | -5 | -6 | -7 | -8 | -9 | -10 | -11 | -12 | -13 | -14 | -15 | | |
| 25 | ಯುವಜನ ಸೇವಾ ಇಲಾಖೆ | 7 | 2 | 21 | 19 | 5 | 2 | 12 | 12 | 5 | 2 | 12 | 12 | 499 | | |
| 26 | ಸಹಕಾರ ಇಲಾಖೆ | 192 | 696 | 5703 | 1594 | 21 | 166 | 2509 | 742 | 4 | 47 | 925 | 442 | 2822 | | |
| 27 | ಸಮಾಜ ಕಲ್ಯಾಣ ಇಲಾಖೆ | 112 | 639 | 12409 | 19491 | 50 | 497 | 6030 | 11234 | 29 | 94 | 1573 | 10897 | 3894 | | |
| | ಒಟ್ಟು | 5348 | 8095 | 34930 | 29407 | 1774 | 3712 | 15249 | 14611 | 1694 | 2801 | 8743 | 13735 | | | |
| | ಒಂದನೇ ಪುಟ | 5578 | 25027 | 111577 | 20233 | 1126 | 5712 | 19204 | 7699 | 932 | 4683 | 16391 | 7028 | | | |
| | ಎರಡನೇ ಪುಟ | 5348 | 8095 | 34930 | 29407 | 1774 | 3712 | 15249 | 14611 | 1694 | 2801 | 8743 | 13735 | | | |
| | ಒಟ್ಟಾರೆ ಮೊತ್ತ | **10926** | **33122** | **146507** | **49640** | **2900** | **9424** | **34453** | **22310** | **2626** | **7484** | **25134** | **20763** | | | |

# ಅಧ್ಯಾಯ 7

## ಸಕಾಲದ ಘಟನಾವಳಿಗಳು ಹಾಗೂ ಪತ್ರಿಕಾ ವರದಿ:

1) **ಸಕಾಲ ಕುರಿತು ಜಾಗೃತಿ ಮೂಡಿಸಲು ಎಫ್.ಕೆ.ಸಿ.ಸಿ.ಐ ಸಿದ್ಧ**, ಬೆಂಗಳೂರು, ಜನವರಿ 02 2013: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು ಸಕಾಲ – ಕರ್ನಾಟಕ ನಾಗರಿಕ ಸೇವಾ ಖಾತರಿ ಯೋಜನೆಯ ಕುರಿತು ನಾಗರಿಕರಲ್ಲಿ ಹೆಚ್ಚಿನ ಅರಿವು ಮೂಡಿಸುವ ನಿಟ್ಟಿನಲ್ಲಿ ತೊಡಗಿಕೊಳ್ಳಲು ಸಿದ್ಧವಿರುವುದಾಗಿ ಎಫ್.ಕೆ.ಸಿ.ಸಿ.ಐ ನ ಅಧ್ಯಕ್ಷರಾದ ಶ್ರೀ ಕೆ.ಶಿವಷಣ್ಮುಗಂ ತಿಳಿಸಿದರು.

ಸಕಾಲ ಕುರಿತು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಸದಸ್ಯರಿಗೆ ಹಮ್ಮಿಕೊಂಡಿದ್ದ ಜಾಗೃತಿ ಮೂಡಿಸುವ ಸಭೆಯಲ್ಲಿ ಮಾತನಾಡಿದ ಅವರು ಸಂಸ್ಥೆಯಲ್ಲಿ ಸುಮಾರು 1.5 ಲಕ್ಷ ಸದಸ್ಯರಿದ್ದು ಇವರಿಗೆ ಸಕಾಲದ ಬಗ್ಗೆ ಜಾಗೃತಿ ಮೂಡಿಸಿ ತನ್ಮೂಲಕ ಇತರರಿಗೂ ಸರ್ಕಾರದ ಸೇವೆಗಳನ್ನು ನಿಗದಿತ ವೇಳೆಯೊಳಗೆ ಪಡೆಯಲು ಸಾಧ್ಯವಿದೆ ಎಂಬ ವಿಷಯವನ್ನು ತಿಳಿಸುವ ನಿಟ್ಟಿನಲ್ಲಿ ಪ್ರಯತ್ನಿಸುವುದಾಗಿ ಹೇಳಿದರು.




ಸಭೆಯಲ್ಲಿ ಮಾತನಾಡಿದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್ ಅವರು 'ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಆಡಳಿತದಲ್ಲಿ ಸುಧಾರಣೆ ಅಥವಾ ಬದಲಾವಣೆ ತರುವ ಯಾವುದೇ ವಿನೂತನ ಕಾರ್ಯಕ್ರಮವನ್ನು ಪ್ರಯೋಗಿಕವಾಗಿ ಜಾರಿಗೆ ತರಲು ತಯಾರಾಗಿದೆ' ಎಂದರು.

'ಸಾರ್ವಜನಿಕರಿಗೆ ಸರ್ಕಾರಿ ಸೇವೆಗಳು ನಿರ್ದಿಷ್ಟ ಅವಧಿಯಲ್ಲಿ ದೊರಕಲು ಮತ್ತು ಸರ್ಕಾರಿ ನೌಕರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಸಕಾಲ – ಜಾರಿಗೆ ತರಲಾಗಿದೆ' ಎಂದು, ಸಕಾಲ ಕುರಿತಂತೆ ವಿಸ್ತೃತವಾಗಿ ವಿವರಿಸಿದ ಶಾಲಿನಿ ರಜನೀಶ್, 'ಸಕಾಲದ ಕಾಲ್ ಸೆಂಟರ್‌ಗೆ ಈವರೆಗೆ 1.40 ಲಕ್ಷ ಕರೆಗಳು ಬಂದಿದ್ದು, ಇತ್ತೀಚೆಗೆ ಕರೆ ಕೇಂದ್ರದ ಬಗ್ಗೆಯೇ ದೂರೊಂದು ದಾಖಲಾಗಿತ್ತು ಎಂದರು. ಸಕಾಲದ ಎಲ್ಲ ಪ್ರಕ್ರಿಯೆಗಳು ಸಂಪೂರ್ಣವಾಗಿ ಯಂತ್ರೀಕೃತವಾಗಿದ್ದು, ಅರ್ಜಿ ಸಲ್ಲಿಸುವಾಗಲೇ ದಾಖಲೆಗಳನ್ನು ಪರಿಶೀಲಿಸಿ, ಅಗತ್ಯವಿರುವ ದಾಖಲೆಗಳು ಇಲ್ಲದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಪ್ರಸ್ತುತ ತಿರಸ್ಕೃತಗೊಳ್ಳುವ ಅರ್ಜಿಗಳ ಸಂಖ್ಯೆ ಇಳಿಮುಖವಾಗಿದೆ.

ಪ್ರಾರಂಭದಲ್ಲಿ 11 ಇಲಾಖೆಗಳ 151 ಸೇವೆಗಳನ್ನು ಸಕಾಲದ ವ್ಯಾಪ್ತಿಗೆ ಒಳಪಟ್ಟಿದ್ದವು. ಇದೀಗ 19 ಇಲಾಖೆಗಳ ಒಟ್ಟು 265 ಸೇವೆಗಳನ್ನು ಸಕಾಲದಡಿಗೆ ತರಲಾಗಿದೆ' ಎಂದು ವಿವರಿಸಿದರು.

ಮಾರ್ಚ್ 2013 ರೊಳಗೆ ಸಕಾಲದ ಎಲ್ಲ ಸೇವೆಗಳನ್ನು ಆನ್‌ಲೈನ್ ಮಾಡಲಾಗುವುದೆಂದ ಅವರು ನಾಗರಿಕರಿಗಾಗಿ ರೂಪಿಸಲಾದ ಸಕಾಲ ನಿರಂತರ ಯಶಸ್ವಿಯಾಗಬೇಕಾದರೆ ನಾಗರಿಕರು ತಮ್ಮ ಹಕ್ಕನ್ನು ಚಲಾಯಿಸಬೇಕು. ಸಕಾಲದಡಿ ಸೇರ್ಪಡೆಯಾದ ಅನೇಕ ಸೇವೆಗಳು ಸಾರ್ವಜನಿಕರ ಬೇಡಿಕೆಯನ್ನು ಆಧರಿಸಿದೆ. ಇನ್ನು ಮುಂದೆ ಸರ್ಕಾರದ ಎಲ್ಲ ಸೇವೆಗಳನ್ನು ಸಕಾಲದ ವ್ಯಾಪ್ತಿಗೆ ತರಲಾಗುವುದೆಂಬ ನಿರೀಕ್ಷೆಯಿದೆ ಎಂದು ಶಾಲಿನಿ ರಜನೀಶ್ ತಿಳಿಸಿದರು.

ಎಫ್.ಕೆ.ಸಿ.ಸಿ.ಐ ಸದಸ್ಯರು ಕೇಳಿದ ಈ ಕೆಳಕಂಡ ಪ್ರಶ್ನೆಗಳಿಗೆ ಡಾ॥ ಶಾಲಿನಿ ರಜನೀಶ್ ಉತ್ತರಿಸಿದರು. ಎಫ್.ಕೆ.ಸಿ.ಸಿ.ಐ'ನ ಹಿರಿಯ ಪದಾಧಿಕಾರಿಗಳು ಈ ಸಂವಾದ ಸಭೆಯಲ್ಲಿ ಪಾಲ್ಗೊಂಡಿದ್ದರು.

- ರಾಜಕೀಯ ಮತ್ತು ನಾಯಕತ್ವ ಬದಲಾವಣೆಯ ವಿರುದ್ಧ ಹೇಗೆ ನೀವು ಸಕಾಲದಲ್ಲಿ ವಿರೋದಿಸುತ್ತೀರಾ?

  ಉತ್ತರ: ನಾಗರೀಕರು ಇದರ ಬಗ್ಗೆ ಒಗ್ಗಟ್ಟಾಗಿ ಎಚ್ಚರಿಸಬೇಕು ನಮಗೆ ಸಿಗಬೇಕಾಗಿರುವುದನ್ನು ಪಡೆಯುವುದು ನಮ್ಮ ಹಕ್ಕು ಎಂದು ತಿಳಿಯಬೇಕು. ಯಾರೂ ಅದನ್ನು ಜನರಿಗೆ ತುಂಬಾ ಅಂದರೆ ಯಾವಾಗ ಶಾಸನವು ಜಾರಿಗೆ ಬಂದಿತು ಎಂಬ ವಿವಾದಕ್ಕೂ ಸಾದ್ಯವಾಗುತ್ತದೆ.

- ಒಬ್ಬ ನಾಗರೀಕ ಹೆಚ್ಚು ಭಾಗವಹಿಸುತ್ತಾನೆ ಎಂದಾಗ ಏನು ಮಾಡಬೇಕು?
  ಉತ್ತರ: ನಿಮ್ಮ ಪ್ರತಿಕ್ರಿಯೆಗೆ ಎಲ್ಲರೂ ನಿಜವಾಗಿಯೂ ಸಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಒಳ್ಳೆಯ ಕೆಲಸವನ್ನು ಮಾಡುತ್ತಿದೆ ಎಂದು ಎಲ್ಲಾ ಕಡೆ ಹರಡುತ್ತಾರೆ. ಭಾಗವಹಿಸುವಿಕೆ ಕಾರ್ಯದಿಂದ ಕೆಟ್ಟ ಕೆಲಸಗಳು ನಮ್ಮ ಗಮನಕ್ಕೆ ಬರುತ್ತವೆ ಅಲ್ಲದೆ ಉತ್ತಮ ಮಾರ್ಗಗಳನ್ನು ಕಂಡುಕೊಳ್ಳಬಹುದು. 114 ಸೇವೆಗಳು ನಾಗರೀಕರ ಪ್ರತಿಕ್ರಿಯೆಯ ಸಂಪೂರ್ಣವಾಗಿ ನಿಮಗೆ ತರಲಾಯಿತು.

- ಉತ್ತರ: ಎಪಿಎಂಸಿ, ಕೆಐಎಡಿಬಿ ಮತ್ತು ಕಾನೂನು ಇಲಾಖೆಗಳನ್ನು ಸಕಾಲ ಸೇವೆಗೆ ಸೇರಿಸಲು ಸಾದ್ಯವೆ? ಹೆಚ್ಚಿನ ಭ್ರಷ್ಟಾಚಾರಕ್ಕೆ ಹೆಸರುವಾಸಿಯಾದ ನೆಲೆ ಎಪಿಎಂಸಿ ಆಗಿದೆ.
  ಉತ್ತರ: ರಾಜ್ಯ ಸರ್ಕಾರದ ನಿಯಂತ್ರಣದ ವ್ಯಾಪ್ತಿಯೊಳಗೆ ಕಾರ್ಯಗಳನ್ನು ಸಕಾಲದಲ್ಲಿ ಎಪಿಎಂಸಿ, ಕೆಐಎಡಿಬ ಮತ್ತು ಕಾನೂನು ಇಲಾಖೆ ಇತ್ಯಾಧಿಗಳನ್ನು ಮಾಡಬಹುದಾಗಿದೆ. ಆದಾಗ್ಯೂ ನ್ಯಾಯಾಂಗವು ಕೇಂದ್ರ ಸಂಗತಿಯಾಗಿರುತ್ತದೆ. ಮತ್ತು ನಾವು ಕೇಂದ್ರ ಸರ್ಕಾರದ ಮೂಲಕ ಕಾರ್ಯ ನಿರ್ವಹಿಸಬೇಕಾಗಿರುತ್ತದೆ. ನಿರೂಪಿತವಾದ ವಿಷಯಗಳ ಮೇಲೆ ತನ್ನ ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲ. ನಾವು ಎಪಿಎಂಸಿ ಮತ್ತು ಕೆಐಎಡಿಬಿಗಳನ್ನು ನೋಡೋಣ.

- ಅರ್ಜಿಯು ಸ್ವತಃ ತಾನೇ ಸೇವೆ ಪಡಯುವುದಕ್ಕೂ ಮುಂಚೆ ತಿರಸ್ಕೃತವಾದರೆ ಅವಲಂಬಿತರ ಪುನರ್ ಪ್ರಕ್ರಿಯೆ ಏನು?
  ಉತ್ತರ: ಯಾವುದಾದರು ಅರ್ಜಿಯು ಸರಿಯಾದ ಕಾರಣದಿಂದ ತಿರಸ್ಕೃತವಾದರೆ. ನಾವು ಆ ಅರ್ಜಿಯ ಬಗ್ಗೆ ತಿರಸ್ಕೃತವಾಗಲು ಕಾರಣ ಏನು ಎಂಬುದನ್ನು ತಿಳಿದುಕೊಂಡಿರಬೇಕಾಗಿರುತ್ತದೆ. ನಿರಾಕರಣೆಗೆ ನಿಜವಾದ ನಿದರ್ಶನಗಳೂ ಸಹ ಸಾಧ್ಯತೆ ಇರುವಂತಹವು.

- ನಾನು ಸಕಾಲ ಅಡಿಯಲ್ಲಿ ಸೇರಿಸದೇ ಇರುವ ಸೇವೆಗಳ ಬಗ್ಗೆ ದೂರನ್ನು ನೀಡಬಹುದೆ?
  ಹೌದು. ನೀವು ಅದನ್ನು ಮಾಡಬಹುದು. ಈ ದೂರವಾಣಿ ಸಂಖ್ಯೆಗೆ 080-44554455 ಗೆ ಕರೆ ಮಾಡುವುದರ ಮೂಲಕ ನೀವು ಯಾವುದಾದರೂ ವಿಷಯದ ಬಗ್ಗೆ ದೂರನ್ನು ನೀಡಬಹುದು. ಒಂದೇ ಒಂದು ವ್ಯತ್ಯಾಸವೆಂದರೆ ನಾನ್ ಸಕಾಲ ದೂರುಗಳನ್ನು ಸಕಾಲ ಸಿಬ್ಬಂಧಿಗಳು ಸಂಬಂಧಿಸಿದ ಇಲಾಖೆಗೆ ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಪತ್ರವಬರೆಯುವುದರ ಮೂಲಕ ಅಥವಾ ನೋಟೀಸನ್ನು ನೀಡುವುದರ ಮೂಲಕ ಇಲಾಖೆಗೆ ಕಳುಹಿಸುತ್ತಾರೆ. ಈ ಬಗ್ಗೆ 1000ಕ್ಕಿಂತಲೂ ಹೆಚ್ಚು ಕರೆಗಳು ಸ್ವೀಕೃತವಾಗಿವೆ. ಇದರಲ್ಲಿ 800ಕ್ಕೂ ಅಧಿಕ ದೂರುಗಳು ವಿಲೇವಾರಿಯಾಗಿರುತ್ತವೆ.

2) **ಸಕಾಲ ಕ್ಯಾಲೇಂಡರ್ 2013ರನ್ನು ಬಿಡುಗಡೆ:** ಕರ್ನಾಟಕ ರಾಜ್ಯ ಮುಖ್ಯ ಮಂತ್ರಿಗಳಾದ ಜಗದೀಶ್ ಶೆಟ್ಟರ್ ರವರ ಇಲ್ಲಾ ನಾರೀಕರಿಗೂ ಹೊಸ ವರ್ಷದ ಶುಭಾಶಯಗಳನ್ನು ಹಾರೈಸಿದ್ದಾರೆ.

ಇದು ವಿಧಾನ ಮಂಡಲದ ಎರಡು ಮನೆಗಳಲ್ಲೂ ಸರ್ವಾನುಮತದಿಂದ ಸಕಾಲ ಸೇವೆಗಳ ಅಧಿನಿಯಮವನ್ನು ಅಂಗೀಕರಿಸಿ ಒಂದು ವರ್ಷ ಪೂರ್ಣಗೊಳಿಸಿದ ಸುಸಂದರ್ಭವಾಗಿದೆ. ಕೇವಲ 8 ತಿಂಗಳಲ್ಲಿ ಸಕಾಲವು ರಾಜ್ಯದ್ಯಾಂತ 1.52 ಕೋಟಿ ನಾಗರಿಕರಿಗೆ ಸಂತಸವನ್ನು ಮೂಡಿಸಿದೆ.

ಮಾರ್ಚ್ ೬ 2012ರ ಪ್ರಾಯೋಗಿಕ ಹಂತದಲ್ಲಿ ನಾವು 1.35 ಲಕ್ಷ ಅರ್ಜಿಗಳನ್ನು ಸ್ವೀಕರಿಸಿದೆವು, ನಂತರ ಅದರ ಹತ್ತು ಪಟ್ಟು ಅಂದರೆ 1.52 ಕೋಟಿ ಅರ್ಜಿಗಳನ್ನು ನಿರ್ವಹಿಸಿದ್ದೇವೆ. 156000 ಕ್ಕೂ ಹೆಚ್ಚು ನಾಗರಿಕರು ಕರೆಕೇಂದ್ರವನ್ನು ಸಂಪರ್ಕಿಸಿ ಸೌಲಭ್ಯಗಳನ್ನು ಪಡೆದಿರುತ್ತಾರೆ ಹಾಗೂ ಅಧಿನಿಯಮ ಹಾಗೂ ಅದರ ಅಳವಡಿಕೆ ಬಗ್ಗೆ ತಿಳಿದುಕೊಂಡಿರುತ್ತಾರೆ. ಇದು ಸರ್ಕಾರ ಮತ್ತು ನಾಗರೀಕರ ಮಧ್ಯೆ ಸೇತುವಾಗಿ ರಚಿಸಲ್ಪಟ್ಟಿದೆ.

ಆಡಳಿತ ತರಬೇತಿ ಸಂಸ್ಥೆ ಮೈಸೂರು ಹಾಗೂ ಜಿಲ್ಲಾ ತರಬೇತಿ ಕೇಂದ್ರಗಳಲ್ಲಿ 10600 ಕ್ಕೂ ಹೆಚ್ಚು ಸಿಬ್ಬಂದಿಗಳು ಕೇವಲ ಕ್ರಿಯಾತ್ಮಕ ಜ್ಞಾನವನ್ನಲ್ಲದೇ ಮನೋಭಾವನೆಯಲ್ಲಿ ಪರಿವರ್ತನೆ ಉಂಟು ಮಾಡುವಂತಹ ಒಟ್ಟು 322 ಅಧಿವೇಶನಗಳಲ್ಲಿ ಪಾಲ್ಗೊಂಡಿರುತ್ತಾರೆ.

ಏಪ್ರಿಲ್ – ಮೇ ಯಲ್ಲಿ 98% ಸೇವಾ ವಿತರಣೆಯಿದ್ದರೆ, ಆಗಸ್ಟ – ಸೆಪ್ಟಂಬರ್ ಅವಧಿಯನ್ನು 96%, ನಂತರದ 2 ತಿಂಗಳಲ್ಲಿ ಪುನ: ನಾವು 97.35% ತಲುಪಿದ್ದೇವೆ. ಇಂತಹ ಬೃಹತ್ ಯೋಜನೆಗಳಲ್ಲಿ ಈ ರೀತಿ ಬದಲಾವಣೆಯಾಗುವುದು ಸ್ವಾಭಾವಿಕ. ನಮ್ಮ ಸಿಬ್ಬಂದಿಗಳು 99% ಕ್ಕೆ ತಲಪುವ ತರಾತುರಿಯಲ್ಲಿದ್ದಾರೆ.

ಕ್ಷೇತ್ರ ಸಂದರ್ಶನ, ಅಧಿವೇಶನಗಳು/ಕಾನ್ಫರೆನ್ಸಗಳು, ರೆಸಿಡೆಟ್ ವೆಲ್ ಫೇರ್ ಅಸೋಸಿಯೇಷನ್‌ಗಳೊಂದಿಗೆ ಸಭೆಗಳು, ಬಳಕೆದಾರರ ವೇದಿಕೆಗಳು ಇವೆಲ್ಲಾ ಸಕಾಲದ ಇಂದಿನ ಮೆರುಗಿಗೆ ಬಣ್ಣ ನೀಡಿವೆ. ಜೊತೆಗೆ ಐ ಐ ಎಂ, ಕ್ರಿಯೇಟ್, ಸಿವಿಕ್, ಐ ಎ ಸಿ ಮುಂತಾದ ಸಂಸ್ಥೆಗಳು ನಮಗೆ ಹೆಚ್ಚಿನ ಬೆಂಬಲ ನೀಡಿದ್ದು ನಮ್ಮ ಯೋಜನೆಯನ್ನು ಅಭಿವೃದ್ಧಿಗೊಳಿಸಲು ಪ್ರೋತ್ಸಾಹ ನೀಡಿರುತ್ತಾರೆ.
ಎಲ್ಲಕ್ಕಿಂತಲೂ ಮೇಲಾಗಿ, ನೀವು ಸಂಪೂರ್ಣ ಭಾಗಿಗಳಾಗುತ್ತಾ, ನಿಮ್ಮ ಪ್ರಶಂಸೆ ಅಥವಾ ದೂರನ್ನು ಹೃದಯ ಸ್ಪರ್ಶಿಯಾಗಿ ಮುಂದಿಟ್ಟು ಸಕಾಲದ ಇಂದಿನ ಅದ್ಭುತ ಯಶಸ್ಸಿಗೆ ಕಾರಣಕರ್ತರಾಗಿರುವಿರಿ. ಪ್ರತಿಯೋರ್ವರಿಗೂ ಧನ್ಯವಾದ ಹಾಗು ನಮ್ಮ ಮುಂದಿನ ಒಂದು ಉತ್ತಮ ವರ್ಷದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.



3) **ಶ್ರೀಸಾಮಾನ್ಯನ ಶೋಷಣೆ ತಪ್ಪಿಸಲು "ಸಕಾಲ"** – ಐ.ಐ.ಎಂ ಬೆಂಗಳೂರು ವತಿಯಿಂದ ಭಾರತದಲ್ಲಿ ವಿವಿಧ ರಾಜ್ಯಗಳ 30 ಐಎಎಸ್ ಅಧಿಕಾರಿಗಳಿಗೆ ಸರ್ಕಾರದಲ್ಲಿ ಸೇವೆಗಳ ವಿಲೇವಾರಿ ನಿರ್ವಹಣೆ ಕುರಿತಂತೆ ಹಮ್ಮಿಕೊಂಡಿದ್ದ ತರಬೇತಿ 8 ಜನವರಿ 2013:– ಶ್ರೀಸಾಮಾನ್ಯರು ಸರ್ಕಾರಕ್ಕೆ ದೇವರಿದ್ದಂತೆ, ದುರದೃಷ್ಟವಶಾತ್ ಜನ ಸಾಮಾನ್ಯನೇ ಅತ್ಯಂತ ಶೋಷಣೆಗೊಳಪಟ್ಟಿದ್ದಾನೆ. ಈ ಕಾರಣಕ್ಕಾಗಿಯೇ ಸರ್ಕಾರದ ಆಡಳಿತ ವ್ಯವಸ್ಥೆಯ ಬಗ್ಗೆ ಜನರಲ್ಲಿ ಒಳ್ಳೆಯ ಅಬಿಪ್ರಾಯ ದೂರಾಗಿದೆ. ಇದಕ್ಕೆ ಒಂದು ಇತಿಶ್ರೀ ಹಾಡಿ, ಸರ್ಕಾರದ ಆಡಳಿತ ಯಂತ್ರದ ಬಗೆಗೆ ಸದಭಿಪಾರಾಯ

ಮೂಡುವಂತೆ ಮಾಡಿದ್ದು "ಸಕಾಲ" ಯೋಜನೆ ಎಂದು ನಗರಾಭಿವೃದ್ಧಿ ಮತ್ತು ಕಾನೂನು ಸಚಿವರಾದ ಶ್ರೀ ಸುರೇಶ್ ಕುಮಾರ್ ತಿಳಿಸಿದರು.

ವಿಕಾಸ ಸೌಧದಲ್ಲಿಂದು, ಐ.ಐ.ಎಂ ಬೆಂಗಳೂರು ವತಿಯಿಂದ ಭಾರತದಲ್ಲಿ ವಿವಿಧ ರಾಜ್ಯಗಳ 30 ಐಎಎಸ್ ಅಧಿಕಾರಿಗಳಿಗೆ ಸರ್ಕಾರದಲ್ಲಿ ಸೇವೆಗಳ ವಿಲೇವಾರಿ ನಿರ್ವಹಣೆ ಕುರಿತಂತೆ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಕ್ರಮದ ಅಂಗವಾಗಿ ಸಕಾಲ ಕುರಿತಂತೆ ಸಚಿವರು ಮಾಹಿತಿ ನೀಡಿದರು.




ಭಾರತದಲ್ಲಿ ವಿವಿಧ ರಾಜ್ಯಗಳ 30 ಐಎಎಸ್ ಅಧಿಕಾರಿಗಳ ಜೊತೆ ಮಾನ್ಯ ಕಾನೂನು ಮಂತ್ರಿ ಶ್ರೀ ಸುರೇಶ್ ಕುಮಾರ್ ರವರು – ಸಕಾಲ ಕುರಿತಂತೆ ಮಾಹಿತಿ ನೀಡಿದರು

ನಿರ್ದಿಷ್ಠ ಪ್ರಕರಣವೊಂದು ಸಕಾಲದ ಹುಟ್ಟಿಗೆ ಕಾರಣವಾಯಿತು. ಹುಟ್ಟು ಕುರುಡನೊಬ್ಬ 2000 ರೂ.ಗಳ ಲಂಚ ನೀಡಲಿಲ್ಲವೆಂಬ ಕಾರಣಕ್ಕೆ ಆತನಿಗೆ ದೊರೆಯಬೇಕಿದ್ದ ಪಿಂಚಣಿಯನ್ನು ರದ್ದುಪಡಿಸಲಾಗಿತ್ತು. ಈ ಪ್ರಸಂಗ ರಾಜ್ಯದ ಮುಖ್ಯಮಂತ್ರಿಗಳ ಗಮನಕ್ಕೆ ಬಂದು, ಈ ರೀತಿಯ ಪ್ರಕರಣಗಳು ರಾಜ್ಯದಲ್ಲಿ ಮರುಕಳಿಸದಂತೆ ನೋಡಿಕೊಳ್ಳುವ ಉದ್ದೇಶದಿಂದ ರಾಜ್ಯದಲ್ಲಿ ಕರ್ನಾಟಕ ನಾಗರಿಕ ಸೇವೆಗಳ ಖಾತರಿ ಅಧಿನಿಯಮ 2011 – ಸಕಾಲ ಜಾರಿಗೆ ಬರಲು ಕಾರಣವಾಯಿತು.

ಮೊದಲ ಹಂತದಲ್ಲಿ 151 ಸೇವೆಗಳನ್ನು ಮತ್ತು 2 ನೇ ಹಂತದಲ್ಲಿ 30 ಇಲಾಖೆಗಳ 114 ಸೇವೆಗಳು ಒಟ್ಟಾರೆ 265 ಸೇವೆಗಳು ಲಭ್ಯವಿದ್ದು, ಪ್ರಸ್ತುತ ದೇಶದಲ್ಲಿಯೇ ಅತ್ಯಂತ ಹೆಚ್ಚಿನ ಸೇವೆಗಳನ್ನು ಸಕಾಲ ಯೋಜನೆಯಡಿ ನೀಡಲಾಗುತ್ತಿದೆ. ಈವರೆಗೆ 1.52 ಕೋಟಿ ಸಾರ್ವಜನಿಕರು ಸಕಾಲವನ್ನು ಬಳಸಿದ್ದಾರೆ. ಶೇಕಡ 98 ರಷ್ಟು ಯಶಸ್ವಿಯಾಗಿದೆ. ಪ್ರತಿ ತಿಂಗಳು ಯೋಜನೆಯ ಪ್ರಗತಿಯನ್ನು ಪರಿಶೀಲಿಸಲಾಗುತ್ತಿದ್ದು, ಪ್ರತಿ ತಿಂಗಳ ಕೊನೆಯಲ್ಲಿ ಪ್ರಗತಿ ವರದಿಯನ್ನು ಸಲ್ಲಿಸಲಾಗುತ್ತಿದೆ ಎಂದರು.

2013ರ ಮಾರ್ಚ್ 31 ರೊಳಗೆ ಎಲ್ಲಾ ಸೇವೆಗಳನ್ನು ಆನ್‌ಲೈನ್ ಮೂಲಕವೇ ಲಭ್ಯವಾಗುವಂತೆ ಮಾಡುವುದು ನಮ್ಮ ಮುಂದಿರುವ ಗುರಿ ಎಂದು ಸಚಿವರು ಸಭೆಗೆ ವಿವರಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ ಅವರು ಮಾತನಾಡಿ ಸಾರ್ವಜನಿಕರಿಗೆ 7 ಬಾರಿ ಸೇವೆಯನ್ನು ನೀಡದಿರುವ ಅಧಿಕಾರಿ/ಸಿಬ್ಬಂದಿಯ ಮೇಲೆ ಕಾನೂನು ರೀತಿ ಕ್ರಮ ಜರುಗಿಸಲಾಗುವುದು. ಸಕಾಲದ ಜಾರಿಯಿಂದಾಗಿ ಸರ್ಕಾರಿ ನೌಕರರ ಹೊಣೆಗಾರಿಕೆ, ಕಾರ್ಯದಕ್ಷತೆ ಹೆಚ್ಚಿದೆಯಲ್ಲದೆ ಕಚೇರಿಗಳಲ್ಲಿ ಪಾರದರ್ಶಕತೆ ಉಂಟುಮಾಡಿದೆ ಎಂದರು.

ಭ್ರಷ್ಟಾಚಾರಕ್ಕೂ ಕಡಿವಾಣ ಹಾಕಿರುವ ಸಕಾಲ, ಅಹವಾಲುಗಳ ಸ್ವೀಕೃತಿಯಲ್ಲಿಯೂ ಇಳಿಮುಖ ತಂದಿದೆ. ಸಾರ್ವಜನಿಕರ ಸಮಯ ಮತ್ತು ಹಣವನ್ನು ಉಳಿಸುವುದೇ ಅಲ್ಲದೆ ಸಕಾಲದಲ್ಲಿ ಸೇವೆ ಒದಗಿಸುತ್ತಿದೆ.

ಸರ್ಕಾರದ ಕೆಲವು ಅಂಶಗಳನ್ನು ಸಕಾಲದ ಕಾರಣದಿಂದಾಗಿ ಪುನರ್ ರೂಪಿಸಲಾಗುತ್ತಿರುವುದೂ ಹೌದು ಎಂದ ಡಾ: ಶಾಲಿನಿ ರಜನೀಶ್, ಪಾಸ್‌ಪೋರ್ಟ್‌ಗಳ ಪೊಲೀಸ್ ವೆರಿಫಿಕೇಷನ್ ವೇಳೆಯನ್ನು 90 ದಿನಗಳಿಂದ 20 ದಿನಗಳಿಗೆ ಇಳಿಸಿದೆ. ಮತ್ತು ರೆಕಾರ್ಡ್ ರೂಂ ನ ಗಣಕೀಕರಣಗೊಳಿಸಲಾಗುತ್ತಿದೆ ಎಂದರು.

ಸದ್ಯಕ್ಕೆ ಸಂಬಂಧಪಟ್ಟ ಇಲಾಖೆಗಳ ಮೂಲಕವೇ ಸೇವೆಗಳನ್ನು ಒದಗಿಸಲಾಗುತ್ತಿದೆ ಎಂದ ಶಾಲಿನಿ ರಜನೀಶ್, ತುರ್ತಾಗಿ ಪ್ರಮಾಣಪತ್ರಗಳು ಬೇಕಾದವರಿಗೆ ತಕ್ಷಣವೇ ಒದಗಿಸುವಂತೆ ಸುತ್ತೋಲೆ ನೀಡಲಾಗಿದೆ ಎಂದರು.

ತರಬೇತಿಗಳನ್ನು ಹೇಗೆ ನೀಡಿದಿರಿ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಉಪಗ್ರಹ ಆಧಾರಿತ ತರಬೇತಿಯನ್ನು ನೀಡಲಾಗಿದೆ. ಮತ್ತು ಐ.ಟಿ ಕನ್ಸಲೆಂಟ್ಸ್ ಆಗಾಗ್ಗೆ ಸಿಬ್ಬಂದಿಗೆ ತರಬೇತಿ ನೀಡುತ್ತಿರುತ್ತಾರೆ ಎಂದರು.

ಸಭೆಯಲ್ಲಿ ಸಕಾಲ ಆಡಳಿತಾಧಿಕಾರಿ ಶ್ರೀ ವರಪ್ರಸಾದರೆಡ್ಡಿ, ರಾಜ್ಯ ನಿರ್ವಹಣಾ ಸಮಾಲೋಚಕರಾದ ಶ್ರೀ ಸುಬ್ರಮಣ್ಯಂ ಉಪಸ್ಥಿತರಿದ್ದರು.

***4) ಸಕಾಲ – ಡಿಸೆಂಬರ್ ವರದಿ ಬಿಡುಗಡೆ* : 09 *ಜನವರಿ* 2013:** ವಿಧಾನ ಮಂಡಲದ ಎರಡು ಮನೆಗಳಲ್ಲೂ ಸರ್ವಾನುಮತದಿಂದ ಸಕಾಲ ಸೇವೆಗಳ ಅಧಿನಿಯಮವನ್ನು ಅಂಗೀಕರಿಸಿ ಒಂದು ವರ್ಷ ಪೂರ್ಣಗೊಳಿಸಿದ ಸುಸಂದರ್ಭವಾಗಿದೆ. ಕೇವಲ 8 ತಿಂಗಳಲ್ಲಿ ಸಕಾಲವು ರಾಜ್ಯದ್ಯಾಂತ 1.52 ಕೋಟಿ ನಾಗರಿಕರನ್ನು ಮುಟ್ಟಿದೆ ಈವರೆಗೆ ತಾಂತ್ರಿಕವಾಗಿ 1/4 ನಾಗರೀಕರನ್ನು ಮುಟ್ಟಿದೆ ಹೆಚ್ಚಿನ ಜಾಗೃತಿಗಾಗಿ ಇನ್ನು ಹೆಚ್ಚಿನ ಪ್ರಗತಿ ಸಾಧಿಸಬೇಕಿದೆ ಪತ್ರಿಕೆಗಳ ಮುಖಾಂತರ ಸಾರ್ವಜನಿಕರಿಗೆ ಅವರ ಹಕ್ಕಿನ ಬಗ್ಗೆ ಇನ್ನು ಹೆಚ್ಚಿನ ಜಾಗೃತಿ ಮೂಡಬೇಕಿದೆ ಎಂದು ಕಾನೂನು ಸಚಿವ ಶ್ರೀಯುತ ಸುರೇಶ್ ಕುಮಾರ್ ರವರು ತಿಳಿಸಿದರು.

5) ವಿಶ್ವ ಬ್ಯಾಂಕ್ ಮೂಖಾಂತರ ಆಯೋಜಿತಗೊಂಡಿದ್ದ ಕೋರ್ ಕಮಿಟಿ ಸಭೆ 10ನೇ ಜನವರಿ 2013– ಸಕಾಲದ ಅಧಿನಿಯಮ ವಿಷಯನ್ನು ಪ್ರಮುಖವಾಗಿ ಪರಿಗಣಿಸಿ ಆಯೋಜಿಸಿದ್ದ ಸಭೆಯಲ್ಲಿ ವಿಶ್ವ ಬ್ಯಾಂಕ್ ನಾಯಕತ್ವವನ್ನು ಶ್ರೀಯುತ ರೊನಾಲ್ಡ್ ಲೊಮ್ಮೆ ಅವರೊಟ್ಟಿಗೆ ಗ್ಲೋಬರ್ ಐ ಸಿ ಟಿ ನಾಯಕತ್ವ ವಹಿಸಿದ್ದ ಶ್ರೀಯುತ ದೀಪಕ್ ಭಾಟಿಯ ಅವರು ಡಾ॥ ಶಾಲಿನಿ ರಜನೀಶ್ ಅವರನ್ನು ಭೇಟ್ಟಿ ಮಾಡಿದರು – ಇದೇ ರೀತಿಯ ಆಡಳಿತ ಕ್ರಮಗಳನ್ನು ರೂಢಿಸಲು ತಂಡವು ವಿಶ್ವದ್ಯಾಂತ 'ಸಕಾಲ" ಮಾದರಿ ಸಾರ್ವಜನಿಕ ಸೇವೆಗಳು ಸರಕಾರದಿಂದ ನಿಗದಿತ ಸಮಯದಲ್ಲಿ ಎಂಬುದನ್ನು ಅರ್ಥೈಸಿಕೊಳ್ಳಲು ಆಸಕ್ತಿ ವಹಿಸಿತ್ತು.



6) **ಒರಿಸ್ಸಾ ಸರ್ಕಾರದ ಆಡಳಿತ ಸುದಾರಣೆ ಇಲಾಖೆ**ಯ ಭೇಟಿ: ಒರಿಸ್ಸಾ ಸರ್ಕಾರದ ಆಡಳಿತ ಸುದಾರಣೆ ಇಲಾಖೆಯಿಂದ ದೋಬಬ್ರತ ಮಲ್ಲಿಕ್, ವಿಶೇಷ ಕಾರ್ಯಾಧಿಕಾರಿ, ಶ್ರೀ.ರಸ್ಮಿ ರಂಜನ್ ಸಾಹೂ, ಸಿಸ್ಟಮ್ ಅನಾಲಿಸ್ಟ್ ಹಾಗೂ ಪ್ರಸಾಂತ್

ಕುಮಾರ್ ಮಿಶ್ರ, ಸಾಫ್ಟ್‌ವೇರ್ ಇಂಜಿನಿಯರ್ ಸರ್ಕಾರಿ ಆಧುನೀಕರಣ ಕೇಂದ್ರ ಇವರನ್ನೊಳಗೊಂಡ ಅಧಿಕಾರಿಗಳ ತಂಡವು ಇಂದು ಸಕಾಲ ಮಂಡಳಿಗೆ ಭೇಟಿ ನೀಡಿತು.

ಸಕಾಲ ಮಂಡಳಿಯ ಅಪರ ನಿರ್ದೇಶಕರಾದ ಶ್ರೀ ಮುನೀಶ್ ಮೌದ್ಗಿಲ್ ರವರನ್ನು ಭೇಟಿ ಮಾಡಿದರು, ಅಪರ ನಿರ್ದೇಶಕರು ಒರಿಸ್ಸಾ ತಂಡಕ್ಕೆ "ಸಕಾಲ" ನಡೆದುಬಂದ ದಾರಿಯ ಬಗ್ಗೆ ಮಾಹಿತಿ ನೀಡಿದರು ಹಾಗೂ ಒರಿಸ್ಸಾ ರಾಜ್ಯದಲ್ಲಿ ಅನುಸರಿಸಬೇಕಾದ ಪದ್ಧತಿಗಳ ಬಗ್ಗೆ ತಿಳಿಸಿದರು. ವಿಶೇಷವಾಗಿ ತಂತ್ರಜ್ಞಾನ, ತರಬೇತಿ, ಪ್ರಚಾರದ ಅವಶ್ಯಕತೆ, ವಿವಿಧ ಇಲಾಖೆಗಳೊಂದಿಗೆ ಸಹಕಾರದ ಅವಶ್ಯಕತೆ ಬಗ್ಗೆ ತಿಳಿಸಿದರು. ತಂತ್ರಾಂಶ ಅಭಿವೃದ್ಧಿಯಲ್ಲಿ "ಸಕಾಲ" ತಂತ್ರಾಂಶದ ರೀತಿಯಲ್ಲಿ ಒಂದು ಕ್ರೂಢೀಕೃತ ತಂತ್ರಾಂಶದ ಅಭಿವೃದ್ಧಿಯನ್ನು ಎನ್.ಐ.ಸಿ ಮುಖಾಂತರ ಮಾಡಿಸುವ ಅವಶ್ಯಕತೆ ಬಗ್ಗೆ ಒತ್ತು ನೀಡಿದರು. ಸಾರ್ವಜನಿಕರಿಂದ ಸಲಹೆ ಸೂಚನೆಗಳನ್ನತು ಹಾಗೂ ದೂರುಗಳನ್ನು ಪಡೆದುಕೊಳ್ಳಲು ಕರೆ ಕೇಂದ್ರದ ವ್ಯವಸ್ಥೆ, ಸಹಾಯ ಕೇಂದ್ರದ ಸ್ಥಾಪನೆ ಬಗ್ಗೆ ಕ್ರಮ ವಹಿಸಲು ತಿಳಿಸಿದರು. ಇದಲ್ಲದೇ, ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರನ್ನು ನೇಮಕಾತಿ ಮಾಡಿಕೊಳ್ಳಲು ಹಾಗೂ ಸಾಧ್ಯವಾದರೆ ತಾಲ್ಲೂಕು ಮಟ್ಟದಲ್ಲೂ ಸಹ ತಾಲ್ಲೂಕು ಮಾಹಿತಿ ಸಮಾಲೋಚಕರನ್ನು ನೇಮಿಸಿಕೊಂಡಲ್ಲಿ ಒರಿಸ್ಸಾ ಸೇವಾ ಖಾತರಿ ಅಧಿನಿಯಮ ಯಶಸ್ವಿಯಾಗಿ ಅನುಷ್ಠಾನಗೊಳ್ಳುವುದರಲ್ಲಿ ಸಂದೇಹವಿಲ್ಲವೆಂದು ತಿಳಿಸಿದರು.

ನಂತರ, ಒರಿಸ್ಸಾ ತಂಡವು ಎನ್.ಐ.ಸಿ ತಂಡವನ್ನು ಭೇಟಿ ಮಾಡಿತು. ಶ್ರೀ. ಶ್ರೀನಿವಾಸನ್ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ., ಇವರು ತಂತ್ರಾಂಶದ ಅಭಿವೃದ್ಧಿಯ ಬಗ್ಗೆ ಎದುರಿಸಿದ ಸವಾಲುಗಳ ಬಗ್ಗೆ ಸಕಾಲ ತಂತ್ರಾಂಶವನ್ನು ಇಲಾಖಾ ತಂತ್ರಾಂಶಗಳ ಜೊತೆಗೆ ಜೋಡಣೆ ಮಾಡುವ ಬಗ್ಗೆ ತಿಳಿಸಿದರು. ಉದಾಹರಣೆಗಳೊಂದಿಗೆ ಅರ್ಜಿಗಳನ್ನು ಸ್ವೀಕರಿಸುವ ಬಗ್ಗೆ, ಅರ್ಜಿದಾರರಿಗೆ ಸ್ವೀಕೃತಿ ಪತ್ರ ನೀಡುವ ಬಗ್ಗೆ, ಅರ್ಜಿದಾರರಿಗೆ ಎಸ್.ಎಂ.ಎಸ್ ಮುಖಾಂತರ ಅರ್ಜಿಯ ಸ್ಥಿತಿಗತಿ ತಿಳಿಸುವ ಬಗ್ಗೆ, ಮಂಡಳಿಯ ಉದ್ದೇಶಕ್ಕಾಗಿ ತಯಾರಿಸುವ ಹಲವಾರು ವಿಶ್ಲೇಷಣಾ ವರದಿಗಳ ಬಗ್ಗೆ, ಸಾಧನೆಗನುಗುಣವಾಗಿ ಜಿಲ್ಲಾ ಮತ್ತು ಇಲಾಖೆಗಳು ಶ್ರೇಣಿ ನಿಗದಿಪಡಿಸುವ ಬಗ್ಗೆಯು ಪ್ರಾತ್ಯಕ್ಷಿಕೆ ನೀಡಲಾಯಿತು.

ನಂತರ, ತಂಡವು ಬೆಂಗಳೂರು ಒನ್ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ನಾಗರೀಕ ಸ್ನೇಹಮಯ ವಾತಾವರಣ ನೋಡಿ ಆಶ್ಚರ್ಯಚಕಿತರಾಗಿ ಅದೇ ಮಾದರಿಯನ್ನು ಒರಿಸ್ಸಾ ರಾಜ್ಯದಲ್ಲಿ ಅಳವಡಿಸುವ ಬಗ್ಗೆ ಇ-ಆಡಳಿತ ಶಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಸಕಾಲ ಯಶಸ್ವಿ ಅನುಷ್ಠಾನಕ್ಕೆ ಕಾರಣೀಕೃತರಾದ ಮಾಹಿತಿ ಮತ್ತು ಪ್ರಚಾರ ಇಲಾಖೆಯ ಕೊಡುಗೆಯ ಬಗ್ಗೆ ತಿಳಿದುಕೊಳ್ಳಲು ಇಲಾಖೆಯ ಜಂಟಿ ನಿರ್ದೇಶಕರಾದ ಮಮತಾ ಗೌಡ ಇವರನ್ನು ಭೇಟಿ ಮಾಡಿ ಪ್ರಚಾರಾಂದೋಲದ ಬಗ್ಗೆ ತಿಳಿದುಕೊಂಡರು. ಜಂಟಿ ನಿರ್ದೇಶಕರು ಒರಿಸ್ಸಾ ರಾಜ್ಯದಲ್ಲಿ ನಾಗರೀಕ ಸೇವಾ ಖಾತರಿ ಯಶಸ್ವಿಯ ಅನುಷ್ಠಾನಕ್ಕೆ ವ್ಯಾಪಕ ಪ್ರಚಾರದ ಅವಶ್ಯಕತೆಯ ಬಗ್ಗೆ ತಿಳಿಸಿದರು. ಒರಿಸ್ಸಾ ರಾಜ್ಯದಲ್ಲಿ ಅಳವಡಿಸಬಹುದಾದ ಮಾದರಿಗಳ ಬಗ್ಗೆ ಚರ್ಚಿಸಲಾಯಿತು. ಬೀದಿ ನಾಟಕ ಹಾಗೂ ಇತರೆ ಜಾನಪದ ಮಾಧ್ಯಮದಲ್ಲಿ ಹಿಂದುಳಿದ ಹಾಗೂ ಬುಡಕಟ್ಟು ಜನಾಂಗಕ್ಕೆ ಅಧಿನಿಯಮದ ಬಗ್ಗೆ ಮಾಹಿತಿ ನೀಡಬಹುದೆಂದು ತಿಳಿಸಿದರು. ಯುವ ಜನಾಂಗವನ್ನು ಆಕರ್ಷಿಸಲು ಸಾಮಾಜಿಕ ತಾಣಗಳಾದ ಫೇಸ್‌ಬುಕ್, ಇತ್ಯಾದಿಗಳನ್ನು ಉಪಯೋಗಿಸಿಕೊಳ್ಳುವ ಅವಶ್ಯಕತೆ ಬಗ್ಗೆ ಒತ್ತು ನೀಡಿದರು.


ಒರಿಸ್ಸಾ ತಂಡವು ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ. ಸುಬೀರ್ ಹರಿಸಿಂಗ್ ಹಾಗೂ ಸಕಾಲ ಮಂಡಳಿಯ ನಿರ್ದೇಶಕರಾದ ಡಾ|| ಶಾಲಿನಿ ರಜನೀಶ್ ರವರನ್ನು ಭೇಟಿ ಮಾಡಿದರು. ಒರಿಸ್ಸಾ ರಾಜ್ಯದಲ್ಲಿ ನಾಗರೀಕ ಸೇವಾ ಖಾತರಿ ಅಧಿನಿಯಮ ಅನುಷ್ಠಾನಗೊಂಡಿರುವುದು ಸ್ವಾಗತಾರ್ಹ ಕ್ರಮವೆಂದು ತಿಳಿಸಿದರು. ವಿಶೇಷವಾಗಿ ಒರಿಸ್ಸಾ ನಾಗರೀಕ ಸೇವಾ ಖಾತರಿ ಅಧಿನಿಯಮವು ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡುವ ಸಂಬಂಧ ಮೇಲ್ವಿಚಾರಣಾ ತಂತ್ರಾಂಶವನ್ನು ಅಭಿವೃದ್ಧಿಪಡಿಸುವ ಬಗ್ಗೆ ಸಲಹೆ ನೀಡಿದರು. ಒರಿಸ್ಸಾ ರಾಜ್ಯದಲ್ಲಿ ನಾಗರೀಕ ಸೇವಾ ಖಾತರಿ ಅಧಿನಿಯಮ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ "ಸಕಾಲ" ಮಂಡಳಿಯಿಂದ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತೇವೆಂದು ತಿಳಿಸಿದರು.

7) **ಪಂಜಾಬ್ ತಂಡ ಭೇಟಿ** (ಬೆಂಗಳೂರು, ಜನವರಿ 15 2013) : ಪಂಜಾಬ್ ಸರ್ಕಾರದ ನಾಗರಿಕ ಸೇವಾ ಹಕ್ಕುಗಳ ಆಯೋಗದ ಅಧ್ಯಕ್ಷರು ಹಾಗೂ ಇ-ಆಡಳಿತದ ಹಿರಿಯ ಅಧಿಕಾರಿಗಳು, ಕರ್ನಾಟಕ ರಾಜ್ಯದಲ್ಲಿ ಸಕಾಲದ ಅನುಷ್ಠಾನ ಮತ್ತು ಕಾರ್ಯವೈಖರಿ ಬಗ್ಗೆ ಅರ್ಥೈಸಿಕೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರಧಾನ

ಕಾರ್ಯದರ್ಶಿ ಮತ್ತು ಸಕಾಲ ಮಿಷನ್ ನಿರ್ದೇಶಕರಾದ ಡಾ:ಶಾಲಿನಿ ರಜನೀಶ್ ರವರನ್ನು ಭೇಟಿ ಮಾಡಿ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಡಾ: ಶಾಲಿನಿ ರಜನೀಶ್ ಅವರು ಪ್ರತ್ಯಾಕ್ಷಿಕೆ ಮುಖಾಂತರ ಸಂಪೂರ್ಣವಾಗಿ 'ಸಕಾಲ' ಅಧಿನಿಯಮದ ಅನುಷಾನ/ಮೇಲ್ವಿಚಾರಣೆ, ಕರೆ ಕೇಂದ್ರದ ಕಾರ್ಯ ವೈಖರಿ ಹಾಗೂ ಸೇವಾ ಕೇಂದ್ರಗಳ ಕಾರ್ಯ ನಿರ್ವಯಣೆಗಳನ್ನು ತಂಡಕ್ಕೆ ವಿವರಿಸಿದರು, ಪಂಜಾಬ್ ತಂಡವು ಕೂಡ ತಮ್ಮ ರಾಜ್ಯದಲ್ಲಿ ಇದೇ ರೀತಿಯ ಕ್ರಮಗಳನ್ನು ಅಳವಡಿಸಿಕೊಳ್ಳಲು ಉತ್ಸಕುವಾಗಿತ್ತು ಮತ್ತು ಸಕಾಲ ಮಂಡಳಿಯ ಕಾರ್ಯ ವೈಖರಿಯನ್ನು ಶ್ಲಾಘಿಸಿತು.

ಕರ್ನಾಟಕದಲ್ಲಿ ಸಕಾಲವನ್ನು ಈ ಮಟ್ಟಿಗೆ ಜಾರಿಗೆ ತರುವಲ್ಲಿ ತರಬೇತಿಗಳ ವಿಕೇಂದ್ರೀಕರಣದ ಪಾತ್ರ, ಮಾಹಿತಿ ತಂತ್ರಜ್ಞಾನದ ಸಂಪೂರ್ಣ ಸದ್ಬಳಕೆಯೆ ಮುಖ್ಯವಾಗಿದೆ ಎಂದರು. ಇದುವರೆಗೆ 10600 ನೌಕರರಿಗೆ 27 ತರಬೇತಿ ಕಾರ್ಯಕ್ರಮಗಳು, 337 ಅಧಿವೇಶನಗಳಲ್ಲಿ ತರಬೇತಿಯನ್ನು ನೀಡಲಾಗಿದೆ ಎಂದು ಶಾಲಿನಿ ರಜನೀಶ್ ತಿಳಿಸಿದರು. ತರಬೇತಿಗಾಗಿ ಇಲ್ಲಿರುವ ಮೂಲಭೂತ ಸೌಕರ್ಯಗಳು ನಮ್ಮ ಪಾಲಿನ ಬಹುದೊಡ್ಡ ಆಸ್ತಿ ಎಂದ ಅವರು, ಇದರಲ್ಲಿ ಮೈಸೂರಿನ ಆಡಳಿತ ತರಭೇತಿ ಕೇಂದ್ರ ಮತ್ತು ಜಿಲ್ಲಾ ತರಬೇತಿ ಸಂಸ್ಥೆಗಳು ಅತ್ಯಂತ ಸಮರ್ಥವಾಗಿ ಕಾರ್ಯನಿರ್ವಹಿಸಿವೆ ಎಂದರು.



ಇದಕ್ಕೆ ಪ್ರತಿಕ್ರಿಯಿಸಿದ ಪಂಜಾಬ್ ಆಯೋಗದ ಅಧ್ಯಕ್ಷರಾದ ಶ್ರೀ ಎಸ್.ಎಂ. ಶರ್ಮಾ ಹಾಗೂ ಶ್ರೀ ಹೆಚ್.ಎಸ್ ದಿಲ್ಲೋಂನ್, ಪಂಜಾಬ್ ರಾಜ್ಯದಲ್ಲೂ ತರಬೇತಿಯನ್ನು ವಿಕೇಂದ್ರೀಕರಣ ಮಾಡಬೇಕಿದೆ ಎಂದರು.

ಜಾತಿ, ಆದಾಯ, ಕಲಿಕಾ ಪರವಾನಗಿ, ಪಡಿತರ ಚೀಟಿ ಮುಂತಾದ ಸೇವೆಗಳಿಗೆ ಅತ್ಯಂತ ಬೇಡಿಕೆಯಿದೆ ಎಂದರು.

ವಾರ್ತಾ ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ಸಕಾಲ ನೋಡಲ್ ಅಧಿಕಾರಿ ಸಕಾಲ ಡಾ: ಬಿ.ಆರ್.ಮಮತಾ ಮಾತನಾಡಿ ಸಕಾಲದ ಅನುಷ್ಠಾನದಲ್ಲಿ ಪ್ರಚಾರ ಕಾರ್ಯ ವಹಿಸಿದ ಮಹತ್ವದ ಪಾತ್ರದ ಬಗ್ಗೆ ವಿವರಿಸಿದರು.

ಸಕಾಲ ಕಾಲ್‌ಸೆಂಟರ್ ಕಾರ್ಯನಿರ್ವಹಣೆಯ ಬಗ್ಗೆ ವಿವರಿಸಿದ ಕಾಲ್‌ಸೆಂಟರ್ ಮುಖ್ಯಸ್ಥ ಶ್ರೀ ಆದರ್ಶ್, ಸಕಾಲಕ್ಕೆ ಸಂಬಂಧಪಟ್ಟಂತೆ ಈವರೆಗೆ 500 ದೂರಗಳನ್ನು ಸ್ವೀಕರಿಸಲಾಗಿದ್ದು, ಸಕಾಲಕ್ಕೆ ಸಂಬಂಧಪಡದ 1334 ದೂರುಗಳನ್ನು ಸ್ವೀಕರಿಸಲಾಗಿದೆ ಎಂದರು. ಸಕಾಲೇತರ ದೂರು ಬಂದರೂ ಸಹ ಸಂಬಂಧಪಟ್ಟ ಇಲಾಖೆಗೆ ಈ ದೂರಿನ ಬಗ್ಗೆ ಮಾಹಿತಿ ನೀಡಿ ಸಮಸ್ಯೆಯನ್ನು ಬಗೆಹರಿಸಲಾಗುತ್ತಿದೆ ಹಾಗೂ ಪ್ರತಿ ದೂರನ್ನು ಈ ಕಾಲ್ ಸೆಂಟರ್‌ನಲ್ಲಿ ನಿರ್ವಹಣೆ ಮಾಡಲಾಗುತ್ತಿದೆ ಎಂದರು.

ಸಭೆಯಲ್ಲಿ ಸಕಾಲ ಹೆಚ್ಚುವರಿ ಮಿಷನ್ ನಿರ್ದೇಶಕ ಶ್ರೀ ಮನೀಶ್ ಮೌದ್ಗಿಲ್ (ಐ.ಎ.ಎಸ್), ವ್ಯವಸ್ಥಾಪಕ ಸಮಾಲೋಚಕರಾದ ಶ್ರೀ ಸುಬ್ರಮಣ್ಯಂ, ಐ.ಟಿ.ಸಮಾಲೋಚಕ ಶ್ರೀ ಚಂದ್ರಶೇಖರ್, ಪಂಜಾಬ್ ರಾಜ್ಯದ ಇ-ಆಡಳಿತ ಮಿಷನ್ ತಂಡದ ಹಿರಿಯ ಸಲಹೆಗಾರ ಶ್ರೀ ಮನ್‌ಪ್ರೀತ್ ಸಿಂಗ್, ರಾಷ್ಟ್ರೀಯ ಇನ್‌ಫಾರ್ಮೆಟಿಕ್ಸ್ ಸೆಂಟರ್‌ನ ಶ್ರೀನಿವಾಸ್ ಮತ್ತಿತರರು ಹಾಜರಿದ್ದರು.

**8) ದಿನಾಂಕ: 18.01.2013 ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸಕಾಲ ಮಿಷನ್ ನಿರ್ದೇಶಕರಿಗೆ ಒಂದು ಪ್ರಾತ್ಯಕ್ಷಿಕೆಯನ್ನು ಮಂಡಿಸಲು ಕೋರಿದರು. ಅದರಂತೆ ಕಾರ್ಯದರ್ಶಿ, ಸಿಆಸುಇ (ಆಡಳಿತ ಸುಧಾರಣೆ) ಈ ಕೆಳಗಿನಂತೆ ಸಕಾಲ ಮಂಡಳಿಗೆ ಸಂಬಂಧಟಪ್ಟಂತೆ ಪ್ರಾತ್ಯಕ್ಷತೆಯನ್ನು ಮಂಡಿಸಿದರು.**

**ಮಾನ್ಯ ಮುಖ್ಯ ಕಾರ್ಯದರ್ಶಿಗಳು ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಹಾಗೂ ಸಲಹೆಗಳನ್ನು ಗಮನಿಸಿ ಈ ಕೆಳಕಂಡಂತೆ ಸೂಚನೆ ನೀಡಿದರು.**

- ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ವಿಳಂಬ ವಿಲೇವಾರಿಯನ್ನು ತಡೆಗೊಳಿಸಲು ಹಾಗೂ ಸೇವೆಗಳನ್ನು ನೀಡುವ ಪದ್ದತಿಗಳನ್ನು ಸರಳೀಕರಣ ಮಾಡಲು ಅಧಿಕಾರ ಪ್ರತ್ಯಾಯೋಜನೆ ಮತ್ತು ನಾಗರೀಕ ಸ್ನೇಹಿ ಪದ್ದತಿಗಳನ್ನು ಅಳವಡಿಸುವಂತೆ ಸೂಚಿಸಿದರು.
- ಈತನಕ ಬಹಳ ಕಡಿಮೆ ಅರ್ಜಿ ಸ್ವೀಕೃತವಾದ ಇಲಾಖೆಗಳಲ್ಲಿ ಇಲಾಖಾ ಮುಖ್ಯಸ್ಥರು ವೈಯಕ್ತಿಕ ಆಸಕ್ತಿ ವಹಿಸಿ ಈ ಬಗ್ಗೆ ವಾಸ್ತವಾಂಶ ತಿಳಿದುಕೊಳ್ಳುವುದು.
- "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011"ರಲ್ಲಿ ಸೂಚಿಸಲಾದ ಎಲ್ಲಾ ಕಛೇರಿಗಳಲ್ಲಿ ಕಡ್ಡಾಯವಾಗಿ ಸೂಚನಾ ಫಲಕಗಳನ್ನು ಅಳವಡಿಸುವುದು ಹಾಗೂ ಸಕಾಲ ವ್ಯವಸ್ಥೆಯ ಹೊರತಾಗಿ (ಬೈಪಾಸ್) ವ್ಯವಹಾರ ಮಾಡುವುದನ್ನು ನಿಷೇಧಿಸಿ ಅರ್ಜಿದಾರರಿಂದ ಸಕಾಲ ವ್ಯವಸ್ಥೆಯಲ್ಲಿಯೇ ಅರ್ಜಿ ಪಡೆದು ಜಿ.ಎಸ್.ಸಿ ಸ್ವೀಕೃತಿಯನ್ನು ಪಡೆದು ಸಾಮಾನ್ಯ ಜನರಿಗೆ ಸಕಾಲ ಯೋಜನೆ ಬಗ್ಗೆ ಜಾಗೃತಿ (ಅರಿವು) ಮೂಡಿಸಲು ವ್ಯಾಪಕವಾಗಿ ಪ್ರಚಾರವನ್ನು ಕೈಗೊಳ್ಳುವಂತೆ ಸೂಚಿಸಿದರು.
- ಪಂಜಾಬ್ ರಾಜ್ಯದಲ್ಲಿ ಈಗಾಗಲೇ ಸ್ವಯಂ ದೃಢೀಕರಿಸಿದ ಛಾಪಾ ಕಾಗದದ ಬದಲು ಸಾಧಾರಣ ಕಾಗದದಲ್ಲಿ ನೀಡುತ್ತಿದ್ದು, ಸದರಿ ಪದ್ದತಿಯನ್ನು ಕರ್ನಾಟದಲ್ಲಿ ಅಳವಡಿಸಬಹುದಾಗಿದೆ.
- ಸಿಆಸುಇ (ಇ-ಆಡಳಿತ) ಇಲಾಖೆಯು ಇತರೆ ಎಲ್ಲಾ ಇಲಾಖೆಗಳೊಂದಿಗೆ ದತ್ತಾಂಶಗಳ ಸಮನ್ವಯ ಹಾಗೂ ಅಂತರ್ ಸಂಪರ್ಕದ ಸೌಲಭ್ಯವನ್ನು ಸಮರ್ಪಕವಾಗಿ ನಡೆಸಿಕೊಡುವಂತೆ ಸೂಚಿಸಲಾಯಿತು.
- ಎಲ್ಲಾ ಇಲಾಖೆಗಳಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದ ಸೇವಾ ವಿಷಯಗಳು ಹೆಚ್.ಆರ್.ಎಂ.ಎಸ್ ನಲ್ಲಿ ಅಳವಡಿಸುತ್ತಾ, ಸಕಾಲ ತಂತ್ರಾಂಶದೊಂದಿಗೆ ಅಂತರ್ ಸಂಪರ್ಕ ಹೊಂದುವಂತೆ ಸೂಚಿಸಲಾಯಿತು.
- ಸಕಾಲ ಸೇವೆಗಳ 2ನೇ ಹಂತದ ಜಾರಿಯ ನಂತರ ಕುಂದುಕೊರತೆಗಳಲ್ಲಿ ಗಣನೀಯ ಇಳಿಕೆ ಕಂಡುಬಂದಿದ್ದು, ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಸಲಹೆಯಂತೆ

ಪ್ರತಿಯೊಂದು ಇಲಾಖೆಯಲ್ಲಿ ಕುಂದುಕೊರತೆಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಸರಳೀಕರಣ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಿದರು.

- ದಾರವಾಢ ಜಿಲ್ಲೆ ಭೂ ಪರಿವರ್ತನೆ ಕುರಿತ ಸರಳೀಕರಣ ಕ್ರಮದ ಜಿಲ್ಲಾಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಮ್ಮೇಳನದಲ್ಲಿ ಒಂದು ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸುವಂತೆ ಸೂಚಿಸಿದರು.
- ಬೆಸ್ಕಾಂ ಮತ್ತು ಜಲಮಂಡಳಿ ನೀಡುವ ಬಿಲ್ ಮತ್ತು ರಶೀದಿಗಳಲ್ಲಿ ಸಂಕ್ಷಿಪ್ತವಾಗಿ ಸಕಾಲದ ಮಾಹಿತಿಯನ್ನು ಮುದ್ರಿಸುವುದರಿಂದ ಕೋಟ್ಯಾಂತರ ಜನ ಸಾಮಾನ್ಯರಲ್ಲಿ ಸಕಾಲದ ಬಗ್ಗೆ ಯಶಸ್ವಿಯಾಗಿ ಅರಿವು ಮೂಡಿಸಬಹುದಾಗಿದೆ.
- ಡಿಜಿಟಲ್ ಸಿಗ್ನೇಚರ್‌ಗಳನ್ನು ನೀಡುವಲ್ಲಿ ವಿಳಂಬವಾಗುತ್ತಿದ್ದು, ಈ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆದು ಡಿಜಿಟಲ್ ಸಿಗ್ನೇಚರ್‌ಗಳನ್ನು ಶೀಘ್ರವಾಗಿ ಒದಗಿಸಲು ಶಿಫಾರಸ್ಸು ಮಾಡುವುದಾಗಿ ತಿಳಿಸಿದರು.
- ಸಕಾಲ ಅನುಷ್ಠಾನದಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿಗೆ ನಿಯತವಾಗಿ ತರಬೇತಿಯನ್ನು ಆಡಳಿತ ತರಬೇತಿ ಸಂಸ್ಥೆ/ಜಿಲ್ಲಾ ತರಬೇತಿ ಸಂಸ್ಥೆಗಳ ಮೂಲಕ ತರಬೇತಿಯನ್ನು ನೀಡುವುದು.
- ಸರ್ಕಾರಿ ಕಛೇರಿಗಳಲ್ಲಿರುವ ಅಭಿಲೇಖಾಲಯದಲ್ಲಿರುವ ಕಡತಗಳು/ವಹಿಗಳನ್ನು ಗಣಕೀಕರಣಗೊಳಿಸಿ ವೈಜ್ಞಾನಿಕವಾಗಿ ನಿರ್ವಹಣೆ ಮಾಡುವ ಕ್ರಮವನ್ನು ಅತ್ಯಂತ ತ್ವರಿತವಾಗಿ ಮಾಡಲು ಸೂಚಿಸಿದರು.

**9) ಕೇರಳ ರಾಜ್ಯಕ್ಕೆ ಕರ್ನಾಟಕ ರಾಜ್ಯದ ಸಲಹೆ – ದಿನಾಂಕ 22 ಜನವರಿ 2013:** ತಿರುವನಂತಪುರಂನಲ್ಲಿ ಸರಕಾರಿ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೆಜ್ ಮೆಂಟ್ ಹಾಗೂ ಯೋಜನ ಮಂಡಳಿ ಜಂಟಿಯಾಗಿ ಆಯೋಜಿಸಿದ್ದ ಅಧಿವೇಶನದಲ್ಲಿ ಸೇವೆಗಳ ಹಕ್ಕು ಅನುಷ್ಟಾಕ್ಕೆ ಸರಣಿಯಾಗಿ ಅನುಸರಿಸಿರುವ ಕ್ರಮ ಉತ್ತಮ ನಡವಳಿಕೆಗಳ ಬಗ್ಗೆ ಪದಮಮ್ ಆಡಿಟೋರಿಯಂ – ಐ ಎಮ್ ಜಿ ಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಕೇರಳದ ಅಪರ ಮುಖ್ಯ ಕಾರ್ಯದರ್ಶಿ – ಡಾ॥ ನಿವೇದಿತ ಪಿ ಹರನ್ , ಭಾ ಸ ಆ ರವರು ನೆರವೇರಿಸಿದರು.

ಶ್ರೀ ಸಂಜಯ್ ಕೋಥಾರಿ ಭಾ ಸ ಆ , ಸಿ ಆ ಸು ಇ, ಭಾರತ ಸರಕಾರ ಅವರು ಉಧ್ಘಾಟನ ಭಾಷಣವನ್ನು ಮಾಡಿದರು. ಸೇವೆಗಳ ಹಕ್ಕು ಅಧಿನಿಯಮ 2012 ಹಿನ್ನೆಲೆಯ ಮೇರೆಗೆ ಶ್ರೀ ದಿನೇಶ್ ಶರ್ಮ, ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಭಾ ಸ ಆ – ನಿರ್ದೇಶಕರು ಸಾರ್ವಜನಿಕ ಸೇವೆಗಳ ನಿರ್ವಹಣೆ, ಸರಕಾರಿ ಎಂ ಪಿ ಶ್ರೀಮತಿ ಟಿನಾ ಮಥುರ್, ಸಲಹಕಾರರು – ಸಾರ್ವಜನಿಕ ಕೇಂದ್ರಿಯ ನಿಯಮ ಹೈದರಾಬಾದ್ ಇವರಲ್ಲರ ಉಪಸ್ಥಿತಿಯಲ್ಲಿ ಭಾರತದ ಆಯ್ದ ರಾಜ್ಯಗಳಲ್ಲಿ ಮಾಹಿತಿ ಹಕ್ಕು ಚರ್ಚಿಸಲಾಯಿತು.

ಡಾ॥ ಶಾಲಿನಿ ರಜನೀಷ್ ಅವರು ಸಕಾಲ ಅಳವಡಿಕೆ ಅನುಷ್ಟಾನ ಪರಿಕ್ರಮ ಮೌಲ್ಯಮಾಪನ ಬಗ್ಗೆ ಅಧಿವೇಶನದಲ್ಲಿ ಗಹನವಾಗಿ ಅರ್ಥೈಸಿದರು. ತಂತ್ರಜ್ಞಾನದ ಸಂಪೂರ್ಣ ಮೇಲ್ವಿಚಾರಣೆಯು , ವಿಲೇವಾರಿ ತ್ವರಿತ ವಿಲೇವಾರಿ ಕ್ರಮವೇ ಸಕಾಲ ಅಧಿನಿಯಮದ ಸಫಲತೆಗೆ ಕಾರಣವೆಂದು ತಿಳಿಸಿದರು. ಹೈಯರ್ ಶಿಕ್ಷಣ ಎಫ್ ಕೆ ಸಿ ಸಿ ಐ ಸಹಭಾಗಿತ್ವದೊಂದಿಗೆ ಮಂಡಳಿಯು ವಿಶೇಷವಾಗಿ ವಿನ್ಯಾಸಗೊಳಿಸಿರುವ ತಂತ್ರಾಂಶದ ವಿಶ್ಲೇಷಣೆಯಿಂದ ತ್ವರಿತವಾಗಿ ಸೇವೆಗಳ ವಿಲೇಯಾಗಿರುವುದು ಎಂದು ತಿಳಿಸಿದರು. ಐ ಐ ಎಂ ಬಿ ಮತ್ತು ಕರ್ನಾಟಕ ಮೌಲ್ಯಮಾಪನ ಕಲಿಕೆಯು ಅತ್ಯುಪಯುಕ್ತವಾದದ್ದು ಎಂದು ತಿಳಿಸಲಾಯಿತು.
ಮುಂದಿನ ದಿನಗಳಲ್ಲಿ ಮಾರ್ಚ್ 2013ರಿಂದ ಸೇವೆಗಳ ನಿರ್ವಹಣೆಯನ್ನು ಸಂಪೂರ್ಣವಾಗಿ ಆನ್ ಲೈನ್ ಮೂಖಾಂತರ ನಡೆಸಲಾಗುವುದೆಂದು ತಿಳಿಸಿದರು.




**ತಿರುವನಂತಪುರಂನಲ್ಲಿ ಸರಕಾರಿ ಇನ್ಸ್ಟಿಟ್ಯೂಟ್ ಆಫ್ ಮ್ಯಾನೆಜ್ ಮೆಂಟ್ ಹಾಗೂ ಯೋಜನ ಮಂಡಳ ಜಂಟಿಯಾಗಿ ಆಯೋಜಿಸಿದ್ದ ಅಧಿವೇಶನದಲ್ಲಿ ಡಾ॥ ಶಾಲಿನಿ ರಜನೀಷ್ ಅವರು ಸಕಾಲದ ಬಗ್ಗೆ ವಿವರಿಸುತ್ತಿರುವುದು**

10) **ರಾಜ್ಯ ಮಟ್ಟದ "ಸರ್ವೋತ್ತಮ ಸೇವಾ ಪ್ರಶಸ್ತಿ"** : ದಿನಾಂಕ:13.08.2003ರಲ್ಲಿ ಅತ್ಯುನ್ನತ ಸೇವೆಗೈದ/ಸಾಧನೆಗೈದ ರಾಜ್ಯ ಸರ್ಕಾರಿ ನೌಕರರಿಗೆ ರಾಜ್ಯ ಪ್ರಶಸ್ತಿಯನ್ನು ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಕೇಂದ್ರ ಸರ್ಕಾರವು ಈ ಮಧ್ಯೆ 2006-2007 ನೇ ಸಾಲಿನಲ್ಲಿ ಅತ್ಯುತ್ತಮ ನಾಗರೀಕ ಸೇವೆಗೈದವರಿಗೆ ಪ್ರಧಾನ ಮಂತ್ರಿಗಳ ಪ್ರಶಸ್ತಿಯನ್ನು ನೀಡಲು ಆರಂಭಿಸಿ ಆನಂತರ ಕೇಂದ್ರ ಸರ್ಕಾರಿ ನೌಕರರಿಗೂ ಮತ್ತು ನಾಗರೀಕರಿಗೂ ನೀಡುವ ಕುರಿತು ಪರಿಷ್ಕೃತ ಆದೇಶವನ್ನು ಅಧಿಕೃತ ಜ್ಞಾಪನ ಸಂಖ್ಯೆ:33011/1/98 ದಿನಾಂಕ:21.01.1998 ಮತ್ತು 33011/1/2005 ದಿನಾಂಕ:19.08.2010ರಲ್ಲಿ ರದ್ದು ಪಡಿಸಿದ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಅತ್ಯುನ್ನತ ಸಾಧನೆಗೈದ ನೌಕರರಿಗೆ ನೀಡಲಾಗುತ್ತಿದ್ದ ರಾಜ್ಯ ಪ್ರಶಸ್ತಿ ಪುರಸ್ಕಾರ ನೀತಿಯನ್ನು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:63:ಇಆಸು:2008 ದಿನಾಂಕ:04.03.2011 ರಲ್ಲಿ ಹಿಂದಕ್ಕೆ ಪಡೆಯಲಾಯಿತು. ಆದರೆ 6 ಲಕ್ಷ ಸರ್ಕಾರಿ ನೌಕರರನ್ನು ಪ್ರೋತ್ಸಾಹಿಸಲು ಪ್ರಶಸ್ತಿಗಳ ಅವಶ್ಯಕತೆ ಇದೆ ಎಂದು ಮನಗಂಡು ರಾಜ್ಯ ಸರ್ಕಾರವು ರಾಜ್ಯ ಮಟ್ಟದ "ಸರ್ವೋತ್ತಮ ಸೇವಾ ಪ್ರಶಸ್ತಿ" ಯನ್ನು ಅತ್ಯುನ್ನತ ಸೇವೆಗೈದ/ಸಾಧನೆ ಗೈದ ರಾಜ್ಯ ಸರ್ಕಾರಿ ನೌಕರರಿಗೆ ರಾಜ್ಯ ಪ್ರಶಸ್ತಿಯನ್ನು ನೀಡುವ ಯೋಜನೆಯನ್ನು 2012-2013ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿದೆ.



ರಾಜ್ಯ ಮಟ್ಟದ "ಸರ್ವೋತ್ತಮ ಸೇವಾ ಪ್ರಶಸ್ತಿ" ಈ ಕೆಳಗಿನ ರಂಗಗಳಂದ ಗುರುತಿಸಿ ಪ್ರಶಸ್ತಿ ಪ್ರಧಾನ ಮಾಡಲಾಯಿತು

- ವಿನೂತನ ರೀತಿ ಪದ್ಧತಿ / ಯೋಜನೆಯನ್ನು ಜಾರಿಗೆ ತರುವುದು.
- ಕಾರ್ಯ ವೃಂದದಲ್ಲಿ ಬದಲಾವಣೆ ಮತ್ತು ಸಂಸ್ಥೆಗಳ ವೃದ್ಧಿ.
- ನಾಗರೀಕ ಸೇವಾ ವ್ಯವಸ್ತೆಯಲ್ಲಿ ಗುಣಾತ್ಮಕ, ನಾಗರೀಕ ಸ್ನೇಹಿ ಮತ್ತು ಭ್ರಷ್ಟಾಚಾರ ವಿಲ್ಲದ ವಾತಾವರಣವನ್ನು ನಿರ್ಮಿಸುವುದು.
- ನಾಗರೀಕರ ಅವಶ್ಯಕತೆಗನುಗುಣವಾಗಿ ವಿನೂತನ ರೀತಿ ಪದ್ದತಿ ಅಳವಡಿಸಿಕೊಳ್ಳುವಿಕೆ.
- ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ಅತ್ಯುನ್ನತ ಕಾರ್ಯ.
- ಮೌಲ್ಯವರ್ಧಿತ ಸೇವೆ, ವೃದ್ಧಿ, ಮುಂದಾಳತ್ವ ಮತ್ತು ಚಲನಶೀಲಗಳ ರಚನೆ.

2013ನೇ ಸಾಅಗೆ ಮುಖ್ಯ ಕಾರ್ಯದರ್ಶಿ ಯವರ ಅಧ್ಯಕ್ಷತೆಯಲ್ಲಿ ದಿನಾಂಕ: 23.01.2013 ರಂದು ನಡೆದ ರಾಜ್ಯ ಮಟ್ಟದ "ಸರ್ವೋತ್ತಮ ಸೇವಾ ಪ್ರಶಸ್ತಿ"ಗೆ ಆಯ್ಕೆ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ದಿನಾಂಕ: 26.01.2013 ರಂದು ಘನತೆವೆತ್ತ ರಾಜ್ಯಪಾಲರು ಪ್ರಶಸ್ತಿಗಳನ್ನು ಪ್ರಧಾನ ಮಾಡಡ್ದರೆಂದು ಸರ್ಕಾರದ ಕಾರ್ಯದರ್ಶಿಗಳು ಸಿಆಸುಇ (ಆಸು) ಡಾ॥ ಶಾಅನಿ ರಜನೀಶ್ ರವರು ತಿಳಸಿದರು.

ಪ್ರಶಸ್ತಿ ವಿಜೇತರ ಚಿತ್ರ ಮತ್ತು ಅವರ ವಿವರಗಳು:

| **ಹೆಸರು/ ಹುದ್ದೆ/ ಇಲಾಖೆ** | **ಮೌಲ್ಯವರ್ಧಿತ ಸೇವೆ, ವೃದ್ಧಿ, ಮುಂದಾಳತ್ವ ಮತ್ತು ಚಲನಶೀಲಗಳ ರಚನೆ** |
|---|---|
| **ಶ್ರೀ. ಬಿ.ಎನ್.ವರಪ್ರಸಾದ್ ರೆಡ್ಡಿ, ಆಡಳಿತಾಧಿಕಾರಿ, ಸಕಾಲ ಮಿಷನ್ ಸಿಆಸುಇ** | ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು ಕಛೇರಿಯಲ್ಲಿನ 100 ವರ್ಷಗಳಿಗಿಂತ ಹಳೆಯದಾದ ಸುಮಾರು 30 ಲಕ್ಷ ಭೂ ದಾಖಲೆಗಳನ್ನು ಗಣಕೀಕರಣಗೊಳಿಸಲಾಗಿದೆ. ಈ ಕಾರ್ಯವನ್ನು ಸನ್ಮಾನಿತರು ಸ್ವಯಂ ಪ್ರೇರಿತರಾಗಿ ನಿರ್ವಹಿಸಿ ರಾಜ್ಯಕ್ಕೆ ಮಾದರಿಯಾಗಿರುತ್ತಾರೆ. ಈ ವಿಶೇಷ ನಾಗರೀಕ ಸ್ನೇಹಮಯ ಕಾರ್ಯದಿಂದ ಲಕ್ಷಾಂತರ ರೈತರು, ನಾಗರೀಕರು, ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ತಮ್ಮ ದಿನನಿತ್ಯದ ಕೆಲಸಗಳಿಗೆ ಅನುಕೂಲವಾಗುವಂತೆ ಗಣಕಯಂತ್ರದ ಮೂಲಕ ಕ್ಷಣಾರ್ಧದಲ್ಲಿ ದಾಖಲೆಗಳನ್ನು ಒದಗಿಸಲು ಸಹಕಾರಿಯಾಗಿದೆ.  |
| **ಡಾ.ಮನಿಕಾ ಘೋಷ್, ವಿಶೇಷ ಅಧಿಕಾರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು** | ಉನ್ನತ ಶಿಕ್ಷಣ ಇಲಾಖೆಯಲ್ಲಿ ಸನ್ಮಾನಿತರು ಜಾಗತಿಕ ಮತ್ತು ಕ್ರಿಯಾಶೀಲ ಮಾರುಕಟ್ಟೆ ಆಧಾರಿತವಾಗಿ ಕೈಗಾರಿಕೆಯ ಬೇಡಿಕೆ ಮತ್ತು ಲಭ್ಯವಿರುವ ಮಾನವ ಕೌಶಲ್ಯ ಸಂಪನ್ಮೂಲಗಳ ಮಧ್ಯೆ ಇರುವ ಅಂತರವನ್ನು ಕಡಿಮೆಗೊಳಿಸಲು 'ಹೊಸ ಹೆಜ್ಜೆ' ಎಂಬ ಯೋಜನೆಯಡಿಯಲ್ಲಿ ಮೂರು ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, 'ಆಂಗ್ಲ' ಎಂಬ ಕಾರ್ಯಕ್ರಮದಡಿ ಈಗಾಗಲೇ 10 ಸಾವಿರ ಪದವಿ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷೆಯ ಕ್ಲಿಷ್ಟತೆಯ ಬಗ್ಗೆ ಸರಳೀಕೃತ ತರಬೇತಿ, 'ವಿಕಸನ' ಕಾರ್ಯಕ್ರಮದಡಿ 32,004 ವಿದ್ಯಾರ್ಥಿಗಳಿಗೆ ಪರಿಪೂರ್ಣ ವ್ಯಕ್ತಿತ್ವ ತರಬೇತಿ ಹಾಗೂ 'ಸಹಯೋಗ್' ಕಾರ್ಯಕ್ರಮದಡಿ ಸುಮಾರು 50,000 ವಿದ್ಯಾರ್ಥಿಗಳಿಗೆ ವೃತ್ತಿಪರ ತರಬೇತಿಯನ್ನು ಯಶಸ್ವಿಯಾಗಿ ನೀಡಿರುತ್ತಾರೆ.  |

| | |
|---|---|
| **ಶ್ರೀ.ಆರ್.ಎಸ್. ನಾಯಕ್, ಸಹಾಯಕ ಇಂಜಿನಿಯರ್ ಬೆಳಗಾಂ ನಗರ ಪಾಲಿಕೆ,** | ಮಳೆಯ ತೀರಾ ಅಭಾವದಿಂದ ಬೆಳಗಾಂ ನಗರ ಸಭೆಯ ವ್ಯಾಪ್ತಿಯಲ್ಲಿ ಇರುವ ಬತ್ತಿ ಹೋಗಿದ್ದ 15 ತೆರೆದ ಬಾವಿಗಳನ್ನು ಪುನಃಶ್ಚೇತನಗೊಳಿಸಿ, ಕಿರು ಶುದ್ಧೀಕರಿಸುವ ಘಟಕಗಳನ್ನು ಸ್ಥಾಪಿಸಿ ಡೋಸರ್ ವ್ಯವಸ್ಥೆಯ ಮುಖಾಂತರ ಸುಮಾರು 1,56,000 ನಾಗರೀಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿರುತ್ತಾರೆ. ವಿಶೇಷವಾಗಿ ಈ ಅನುಕರಣೀಯ ಕಾರ್ಯವನ್ನು ನಾಗರೀಕರ, ಸ್ವಯಂ ಸಂಘಸಂಸ್ಥೆಗಳ ಸಹಯೋಗದೊಂದಿಗೆ ನಿರ್ವಹಿಸಿರುತ್ತಾರೆ. ಸನ್ಮಾನಿತರ ಈ ವಿನೂತನ ಕಾರ್ಯದಿಂದ ಒಂದು ಕಿಲೋ ಲೀಟರ್ ಉತ್ಪಾದನಾ ವೆಚ್ಚ ಹಾಗೂ ನೀರು ಸರಬರಾಜು ಮಾಡುವುದಕ್ಕೆ ಬೇಕಾದ ವಿದ್ಯುತ್ ಬಳಕೆ ಗಣನೀಯವಾಗಿ ಕಡಿಮೆ ಮಾಡಬಹುದೆಂದು ಸಾಧರಪಡಿಸಿರುತ್ತಾರೆ.  |
| **ಶ್ರೀ.ಡಿ.ಸಿ. ಹಾಲಾಲಿಂಗಯ್ಯ, ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ** | ಸನ್ಮಾನಿತರು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ 3 ತರಕಾರಿ ಬೆಳೆಗಾರರ ಸಂಘಗಳನ್ನು ಸ್ಥಾಪಿಸಿ, ಸಂಘದ ಸದಸ್ಯರಲ್ಲಿ ವೈಜ್ಞಾನಿಕ ಕೃಷಿ ಪದ್ದತಿಗಳಾದ ಸಮಗ್ರ ಮಣ್ಣು, ನೀರು, ರೋಗ ಮತ್ತು ಕೀಟ ನಿರ್ವಹಣೆಯ ಪದ್ದತಿಗಳನ್ನು, ಸಾವಯವ ಕೃಷಿ ಪದ್ದತಿಗಳನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸಿರುತ್ತಾರೆ. ವಿಶೇಷವಾಗಿ ಇದರಿಂದ ಮಣ್ಣಿನ ಫಲವತ್ತತೆಯು ಹೆಚ್ಚಾಗಿದ್ದು, ವಿವಿಧ ತರಕಾರಿ ಬೆಳೆಗಳ ಇಳುವರಿಯು ಹೆಚ್ಚಾಗಿರುತ್ತದೆ ಹಾಗೂ ರೈತರಲ್ಲಿ ಆಧುನಿಕ ಕೃಷಿ ಪದ್ದತಿಗಳನ್ನು ಪರಿಸರ ಸ್ನೇಹಮಯ ರೀತಿಯಲ್ಲಿ ಅಳವಡಿಸಿಕೊಳ್ಳುವ ವಿಧಾನವನ್ನು ರೈತರಿಗೆ ಮನದಟ್ಟು ಮಾಡಿಕೊಂಡು ಮಾದರಿಯಾಗಿರುತ್ತಾರೆ.  |

| | |
|---|---|
| **ಶ್ರೀ.ನರಸಿಂಹ ಮಲ್ಲಾರಾವ್ ಕುಲಕರ್ಣಿ, ಸಹಾಯಕ ನಿರ್ದೇಶಕರು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.** | ಶ್ರೀಯುತರು ಸರ್ಕಾರಿ ಕೆಲಸ ದೇವರ ಕೆಲಸ ಎಂಬ ನಾಣ್ನುಡಿಗೆ ತಕ್ಕಂತೆ ಕೆಲಸ ನಿರ್ವಹಿಸಿ, ಇತರರಿಗೆ ಮಾದರಿಯಾಗಿರುತ್ತಾರೆ. ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ತೃಪ್ತಿಕರ ಕೆಲಸ ನಿರ್ವಹಿಸಿದ ಸನ್ಮಾನಿತರು ಬಿಜಾಪುರ ಜಿಲ್ಲೆಯ ಇಲಾಖೆಯಲ್ಲಿ ಆದ ಅವ್ಯವಹಾರಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಿ ತಪ್ಪಿತಸ್ಥ 24 ಅಧಿಕಾರಿಗಳನ್ನು ಗುರುತಿಸಿರುತ್ತಾರೆ ಹಾಗೂ ಜಮಕಂಡಿ ಪಟ್ಟಣದ ಪಿ.ಬಿ. ಹೈಸ್ಕೂಲ್ ಶಾಲೆಯ ಆವರಣದಲ್ಲಿ ಒತ್ತುವರಿಯಾಗಿದ್ದ ಸುಮಾರು 18 ಎಕರೆ ಜಾಗವನ್ನು ಬಿಡಿಸಿ ಸಂರಕ್ಷಿಸಿರುತ್ತಾರೆ ಹಾಗೂ ಸುಮಾರು 400 ಖಾಸಗಿ ಶಾಲೆಗಳಿಗೆ ಅನುದಾನ ಒದಗಿಸುವ ಕ್ರಮವನ್ನು ನ್ಯಾಯಬದ್ದವಾಗಿ ಮಾಡಿ ಇಲಾಖಾ ಮುಖ್ಯಸ್ಥರ ಪ್ರಶಂಸೆಗೆ ಒಳಗಾಗಿರುತ್ತಾರೆ.  |
| **ಶ್ರೀ.ಬಿ.ಎಸ್.ರಾಮ ಚಂದ್ರ, ನಿರ್ದೇಶಕರು, ಕಾರ್ಖಾನೆ ಮತ್ತು ಬಾಯ್ಲರ್ಸ್ ಇಲಾಖೆ** | ಸನ್ಮಾನಿತರ ನೇತೃತ್ವದಲ್ಲಿ "ಇ–ಸುರಕ್ಷತೆ" ಎಂಬ ತಂತ್ರಾಂಶವನ್ನು ಅಭಿವೃದ್ದಿಪಡಿಸಲಾಗಿದ್ದು, ಇದು ಕೈಗಾರಿಕೋದ್ಯಮಗಳಿಗೆ ಹಾಗೂ ಇಲಾಖಾ ಸಿಬ್ಬಂದಿ/ಅಧಿಕಾರಿಗಳಿಗೆ ಅತ್ಯಂತ ಸಹಕಾರಿಯಾಗಿರುತ್ತದೆ. ಈ ತಂತ್ರಾಂಶದಿಂದ ಕೈಗಾರಿಕಾ ಕಟ್ಟಡ ಯೋಜನೆ, ಕೈಗಾರಿಕಾ ಪರವಾನಗಿ ನೋಂದಣಿ ಹಾಗೂ ಅನುಮತಿ ನೀಡುವುದು. ವಾರ್ಷಿಕ ಬಾಯ್ಲರ್ ತಪಾಸಣೆ ಹಾಗೂ ವಾರ್ಷಿಕ ಆದಾಯ ಸಲ್ಲಿಕೆ ಕಾರ್ಯವು ಅತ್ಯಂತ ಸುಲಲಿತವಾಗಿ ಮಾಡಬಹುದಾಗಿದೆ. ಈ ತಂತ್ರಾಂಶದಿಂದ ಇಲಾಖೆಯ ಕಾರ್ಯನಿರ್ವಹಣೆಯ ಬಗ್ಗೆ ಪಾರದರ್ಶಕತೆ, ಬದ್ದತೆ ಹೆಚ್ಚಾಗಿದೆ. ವಿನೂತನವಾಗಿ ನಾಗರೀಕ ಸ್ನೇಹಮಯ ಸಹಾಯ ಕೇಂದ್ರವನ್ನು ಸ್ಥಾಪಿಸಿದ್ದಾರೆ.  |

| | |
|---|---|
| **ಶ್ರೀ.ಸತೀಶ್ ಕುಮಾರ್ ಹೊಸಮನಿ, ಉಪ ನಿರ್ದೇಶಕರು (ಪ್ರಭಾರ), ನಗರ ಕೇಂದ್ರ ಗ್ರಂಥಾಲಯ,** | ಸಮಾಜದಲ್ಲಿ ಓದುವ ಪರಿಪಾಠವನ್ನು ಹೆಚ್ಚಿಸಲು ಬೆಂಗಳೂರು ನಗರದಲ್ಲಿ 3 ಗ್ರಂಥಾಲಯ ಶಾಖೆಗಳನ್ನು ಸ್ಥಾಪನೆಗೊಳಿಸಲು ಶ್ರಮಿಸಿರುತ್ತಾರೆ. ಗ್ರಂಥಾಲಯಗಳಲ್ಲಿ ಅಂತರ್ಜಾಲ ವ್ಯವಸ್ಥೆಗಳನ್ನು ಕಲ್ಪಿಸಿ ಸಾರ್ವಜನಿಕರಿಗೆ, ವಿಶೇಷ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ದತೆ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಹಾಗೂ ಸ್ಪರ್ಧಾಕಾಂಷಿಗಳಿಗೆ ಅನುಕೂಲ ಮಾಡಿಕೊಟ್ಟಿರುತ್ತಾರೆ. ಈ ಸವಲತ್ತು ಪಡೆದು ಈಗಾಗಲೇ ಭಾರತೀಯ ಆಡಳಿತ ಸೇವೆ ಹಾಗೂ ಇತರೆ ಪ್ರತಿಷ್ಠಿತ ಸೇವೆಗಳಿಗೆ ಆಯ್ಕೆಯಾಗಿರುತ್ತಾರೆ. ಸನ್ಮಾನಿತರು ಸ್ವಯಂ ಪ್ರೇರಿತರಾಗಿ ಮಾಡಿರುವ ಈ ಕಾರ್ಯಕ್ರಮವು ಎಲ್ಲರಿಗೂ ಮಾದರಿಯಾಗಿದೆ.<br> |
| **ಶ್ರೀ.ಜೆ.ಎಸ್.ಪೂಜಾರಿ, ಜಿಲ್ಲಾ ವಯಸ್ಕರ ಶಿಕ್ಷಣ ಅಧಿಕಾರಿ, ಬಿಜಾಪುರ** | ಸನ್ಮಾನಿತರು ಬರಪೀಡಿತ ಹಾಗೂ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಬಿಜಾಪುರ ಜಿಲ್ಲೆಯಲ್ಲಿ ವಿನೂತನ ರೀತಿಯಲ್ಲಿ ಅನಕ್ಷರಸ್ಥರಿಗೆ ಶಿಕ್ಷಣ ಕೊಡುವ ಕ್ರಮವನ್ನು ಪ್ರಾರಂಭಿಸಿರುತ್ತಾರೆ. ಗೋಶಾಲೆಗಳಿಗೆ ಬರುವ ರೈತರಿಗೆ ಮತ್ತು ಅವರ ಕುಟುಂಬ ಸದಸ್ಯರಿಗೆ ವಯಸ್ಕರ ಶಿಕ್ಷಣ ತರಗತಿಗಳನ್ನು ಆಯೋಜಿಸಿ, ಕೇವಲ 4 ತಿಂಗಳಲ್ಲಿ ಸುಮಾರು 969 ವಯಸ್ಕರಿಗೆ ಓದಲು ಬರೆಯಲು ಮತ್ತು ಸಾಮಾನ್ಯ ಸರಳ ಗಣಿತ ಕಲಿಸಿರುತ್ತಾರೆ. ಈ ಕಾರ್ಯವನ್ನು ವಿಶೇಷವಾಗಿ ಶ್ರೀಯುತರು ಸ್ವಯಂ ಸೇವಕರ ನೆರವಿನೊಂದಿಗೆ ಪೂರ್ಣಗೊಳಿಸಿರುತ್ತಾರೆ. ಈ ಸ್ವಯಂ ಪ್ರೇರಿತ ಕ್ರಮವು ಎಲ್ಲರಿಗೂ ಮಾದರಿಯಾಗಿದೆ.<br> |


| | |
|---|---|
| **ಶ್ರೀ.ರಂಗಸ್ವಾಮಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ.** | “ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ”ದಡಿ ಸೇರಿದ ಪಂಚಾಯತ್ ರಾಜ್ ಇಲಾಖೆಯ ಸೇವೆಗಳನ್ನು ನಿಗದಿತ ಸಮಯದಲ್ಲಿ ಸಾರ್ವಜನಿಕರಿಗೆ ಒದಗಿಸಿರುತ್ತಾರೆ. ಸನ್ಮಾನಿತರು ನಿಗದಿತ ಸಮಯಕ್ಕಿಂತ ಶೇ.29ರಷ್ಟು ಹೆಚ್ಚಿನ ತ್ವರಿತಗತಿಯಲ್ಲಿ “ಸಕಾಲ”ದಲ್ಲಿ ಕೋರಿ ಬಂದ ಅರ್ಜಿಗಳನ್ನು ವಿಲೇ ಮಾಡಿ ಇತರರಿಗೆ ಮಾದರಿಯಾಗಿರುತ್ತಾರೆ.<br> |
| **ಶ್ರೀ.ಬಿ.ಚನ್ನಾ, ಗ್ರೂಪ್ ಡಿ ನೌಕರರು – ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಕಛೇರಿ.** | ಸಚಿವಾಲಯದ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಚಿವಾಲಯದಲ್ಲಿ ಸುಮಾರು 30 ವರ್ಷಗಳ ಸುಧೀರ್ಘ ಸೇವೆಯನ್ನು ಸಲ್ಲಿಸಿದ್ದು, ಅತಿ ನಿಷ್ಠೆಯಿಂದ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿರುತ್ತಾರೆ.<br> |

11) ಐ.ಐ.ಟಿ ಖರಗ್‌ಪುರ ಸಂಶೋಧಕರಿಂದ ಹೊಸ ಮೊಬೈಲ್ ದೂರು ನಿವಾರಣಾ ವ್ಯವಸ್ಥೆ – 'ಸಕಾಲ' ದೂರು ನಿವಾರಣಾ ಪ್ರಕ್ರಿಯೆಗೆ ಅಳವಡಿಕೆ (ಬೆಂಗಳೂರು, ಜನವರಿ 29) ಮೊಬೈಲ್ ಮುಖಾಂತರ ದೂರು ನಿವಾರಣಾ ವ್ಯವಸ್ಥೆಗೆ ಸಕಾಲ ಪ್ರಕ್ರಿಯೆಯನ್ನು ಅಳವಡಿಸಲು ಐ.ಐ.ಟಿ ಖರಗ್‌ಪುರದ ಇಬ್ಬರು ವೃತ್ತಿನಿರತ ಸಂಶೋಧಕರು ಮುಂದೆ ಬಂದಿದ್ದಾರೆ.

ತಮ್ಮ ಈ ವ್ಯವಸ್ಥೆಯಲ್ಲಿ ನಾಗರೀಕ ತನ್ನ ದೂರಿನ ಕುರಿತು ಯಾವುದೇ ಮಟ್ಟದಲ್ಲಿ ಬೇಕಾದರೂ ವಿಚಾರಿಸಿ ತಿಳಿದುಕೊಳ್ಳಬಹುದು. ಆತ ಇಲ್ಲಿ ಅಧಿಕಾರಶಾಹಿಯ ಪ್ರತಿ ಹಂತವನ್ನೂ ದಾಟಬೇಕಾದ ಅವಶ್ಯಕತೆ ಇಲ್ಲ ಎಂದು ವೃತ್ತಿನಿರತ ಸಂಶೋಧಕರಾದ ಅತುಲ್ ಮತ್ತು ಆಶೀಸ್ ಅವರು ಇಂದು ಇಲ್ಲಿ ತಿಳಿಸಿದರು.

ತಾವು ಖಾಸಗಿ ಮತ್ತು ಸಾರ್ವಜನಿಕ ರಂಗಗಳೆರಡಕ್ಕೂ ಅನ್ವಯವಾಗುವಂತಹ ಏಕರೂಪ ವೇದಿಕೆಯನ್ನು ಸಿದ್ಧಪಡಿಸಿದ್ದು, ಈ ವ್ಯವಸ್ಥೆಯಿಂದ ದೂರುಗಳ ಸಮಗ್ರ ವಿವರ ಮತ್ತು ಮೇಲಧಿಕಾರಿಗಳು ಕೆಳಹಂತದವರ ನಿರ್ಲಕ್ಷ್ಯವನ್ನು ದಾಟಿ ದೂರನ್ನು ನಿವಾರಿಸಹುದಾದ ದಾರಿ ಗೋಚರವಾಗುತ್ತದೆ ಎಂದು ಅವರು ಹೇಳಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಸಕಾಲ ಮಿಷನ್ ನಿರ್ದೇಶಕರಾದ ಡಾ:ಶಾಲಿನಿ ರಜನೀಶ್ ಐ.ಎ.ಎಸ್., ಅವರನ್ನು ಇಂದು ಭೇಟಿ ಮಾಡಿ ತಮ್ಮ ಈ ವ್ಯವಸ್ಥೆಯನ್ನು ವಿವರಿಸಿದ ಈ ಸಂಶೋಧಕರು, ತಾವು ರೂಪಿಸುತ್ತಿರುವ ವ್ಯವಸ್ಥೆಯಿಂದಾಗಿ ಪ್ರಸ್ತುತ ತಮ್ಮ ಮುಗ್ದತೆಯಿಂದ ಹೆಚ್ಚು ದಂಡ ತೆರುತ್ತಿರುವ ಇಲ್ಲವೇ ತಪ್ಪು ಸೇವೆಗಳನ್ನು ಪಡೆಯುತ್ತಿರುವ ನಾಗರಿಕರು ತೊಂದರೆಗಳಿಂದ ಪಾರಾಗಬಹುದು ಎಂದು ತಿಳಿಸಿದರು.



ಅತುಲ್ ಹಾಗೂ ಆಶಿಸ್ 'ವೈ ಇಗ್ ನೋರ್'ರನ್ನು ಸಂಪರ್ಕಿಸಲು 9901937356/8861001064

12) ಈ ಸಂಶೋಧಕರೊಂದಿಗೆ ವಿವರವಾಗಿ ಚರ್ಚಿಸಿದ ಡಾ: ಶಾಲಿನಿ ರಜನೀಶ್ ಅವರು ಈ ವ್ಯವಸ್ಥೆಯನ್ನು ಪ್ರಸ್ತುತ ಜಾರಿಯಲ್ಲಿರುವ ಸಕಾಲ ಪ್ರಕ್ರಿಯೆಗೆ ಅಳವಡಿಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು. ಸಕಾಲದಡಿ ಸರಕಾರಿ ಸೇವೆಗಳ ನಿಗದಿ ಸಮಯ ವಿಲೇ ಬಗ್ಗೆ ಪ್ರಮುಖ ದೂರವಾಣಿ/ಜಾಹಿರಾತುಗಳ ಮುಖಾಂತರ ಜನ ಜಾಗೃತಿ, ಜಾಹಿರಾತು ಪ್ರಸಾರ ದಿನ, ದಿನಾಂಕಗಳ ವಿವರ ಸಾರ್ವಜನಿಕರ ಅವಗಾಹನೆಗಾಗಿ:–

| ಚಾನಲ್ | ಸಮಯ | ಅವಧಿ | ജനവരി 2013 | | | | | | | | | |
|---|---|---|---|---|---|---|---|---|---|---|---|---|
| | | | ശുക്ര | ശനി | ഭാനു | സോമ | മംഗള | ബുധ | ഗുരു | ശുക്ര | ശനി | ഭാനു |
| | | | **11** | **12** | **13** | **14** | **15** | **16** | **17** | **18** | **19** | **20** |
| ಕಸ್ತೂರಿ ನ್ಯೂಸ್ | 1800-1830hrs | 30 | | | 1 | | 1 | 1 | | 1 | 1 | |
| ಕಸ್ತೂರಿ ನ್ಯೂಸ್ | 1900-1930hrs | 30 | 1 | 1 | | 1 | 1 | | 1 | 1 | | 1 |
| ಕಸ್ತೂರಿ ನ್ಯೂಸ್ | 2100-2130hrs | 30 | 1 | 1 | 1 | 1 | | 1 | 1 | | 1 | 1 |
| ಪಬ್ಲಿಕ್ ಟಿ ವಿ | 1900-1930hrs | 30 | 1 | 1 | 1 | 1 | 1 | 1 | 1 | 1 | 1 | 1 |
| ಪಬ್ಲಿಕ್ ಟಿ ವಿ | 2000-2030hrs | 30 | 1 | 1 | 1 | 1 | 1 | 1 | 1 | 1 | 1 | 1 |
| ಪಬ್ಲಿಕ್ ಟಿ ವಿ | 2100-2130hrs | 30 | 1 | 1 | 1 | 1 | 1 | 1 | 1 | 1 | 1 | 1 |
| ಉದಯ ನ್ಯೂಸ್ | 1900-1930hrs | 30 | 1 | 1 | 1 | 1 | 1 | 1 | 1 | 1 | 1 | 1 |
| ಉದಯ ನ್ಯೂಸ್ | 1930-2000hrs | 30 | 1 | 1 | 1 | 1 | 1 | 1 | 1 | 1 | 1 | 1 |
| ಉದಯ ನ್ಯೂಸ್ | 2100-2130hrs | 30 | 1 | 1 | 1 | 1 | 1 | 1 | 1 | 1 | 1 | 1 |
| ಜೀ ಕನ್ನಡ | 1800-1830hrs | 30 | 1 | | | 1 | 1 | 1 | 1 | 1 | | |
| ಜೀ ಕನ್ನಡ | 1800-2200hrs | 30 | | 3 | 3 | | | | | | 3 | 3 |
| ಜೀ ಕನ್ನಡ | 1930-2000hrs | 30 | 1 | | | 1 | 1 | 1 | 1 | 1 | | |
| ಜೀ ಕನ್ನಡ | 2000-2030hrs | 30 | 1 | | | 1 | 1 | 1 | 1 | 1 | | |
| | | | | | | | | | | | | |

# ಭಾಗ ಬಿ: ದಿನ ಪತ್ರಿಕೆ ವರದಿಗಳು

ಸಂಯುಕ್ತ ಕರ್ನಾಟಕ | ಜನವರಿ | 3 | 2013 ಬೆಂಗ

## ಮೊಬೈಲ್ ಮೂಲಕ 'ಸಕಾಲ' ಯೋಜನೆ

ಬೆಂಗಳೂರು, ಜ.2: ಇನ್ನು ಮುಂದೆ 'ಸಕಾಲ' ಯೋಜನೆಯ ಸೇವೆಗಳನ್ನು ಮೊಬೈಲ್ ಮೂಲಕ ಪಡೆಯಬಹುದು.

ಮೊಬೈಲ್ ಮೂಲಕ ಅವಶ್ಯವಿರುವ ಸೇವೆಗಳ ಕುರಿತು ಸಾರ್ವಜನಿಕರು ನೋಂದಣಿ ಮಾಡಿದಲ್ಲಿ ಸೇವೆ ಲಭ್ಯವಾಗಲಿದೆ. ಆದರೆ ಅದಕ್ಕೆ ಸಂಬಂಧಿಸಿದಂತೆ ದಾಖಲೆ ಪರಿಶೀಲನೆಗಾಗಿ ಇಲಾಖೆಯನ್ನು ನೇರವಾಗಿ ಸಂಪರ್ಕಿಸಬೇಕಾಗುತ್ತದೆ. ಮೊದಲ ಹಂತದಲ್ಲಿ 16 ಸೇವೆಗಳು ಸಾರ್ವಜನಿಕರಿಗೆ ಲಭ್ಯವಾಗಲಿವೆ.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಶಾಲಿನಿ ರಜನೀಶ್ ಈ ವಿಷಯ ತಿಳಿಸಿದರು.

ಮೊಬೈಲ್ ಮೂಲಕ ಸಿಗುವ ಸಕಾಲ ಸೇವೆಯನ್ನು ಜ. 10 ರಂದು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಉದ್ಘಾಟಿಸಲಿದ್ದಾರೆ. ಮಾರ್ಚ್ ಅಂತ್ಯದ ವೇಳೆಗೆ ಅಂತರ್ಜಾಲದ ಮೂಲಕ ಸಕಾಲ ಯೋಜನೆಯನ್ನು ಬಳಸಿಕೊಳ್ಳುವ ವ್ಯವಸ್ಥೆ ಕಲ್ಪಿಸಲಾಗುವುದು.

ಇದರಿಂದ ಅಂತರ್ಜಾಲದ ಮೂಲಕ ಹಣ ಕಟ್ಟುವುದು ಒಳಗೊಂಡಂತೆ ಬ್ಯಾಂಕಿಂಗ್ ವ್ಯವಹಾರಗಳನ್ನು ನಿರ್ವಹಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.

### ಸಕಾಲ ಯಶಸ್ಸು

ಈಗಾಗಲೇ ಸರ್ಕಾರ 265 ಸೇವೆಗಳನ್ನು ಸಾರ್ವಜನಿಕರಿಗೆ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಸೇವೆಗಳನ್ನು ಸೇರ್ಪಡೆಗೊಳಿಸಲಾಗುವುದು. ಪಾಸ್‌ಪೋರ್ಟ್‌ಗೆ ಸಂಬಂಧಿಸಿದಂತೆ 60 ಸಾವಿರ ಅರ್ಜಿಗಳು ಬಾಕಿ ಇತ್ತು. ಸಕಾಲದ ಮೂಲಕ ಈ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಸಕಾಲ ಶೇ. 97.35ರಷ್ಟು ಯಶಸ್ಸು ಕಂಡಿದೆ. ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕೆಲಸ ಮಾಡಲು ಸ್ಪಂದಿಸದಿದ್ದಲ್ಲಿ, ಅಂತಹ ಅಧಿಕಾರಿಗಳಿಗೆ ದಂಡವಿಧಿಸಿ ಅಧಿಕಾರಿಯಿಂದಲೇ ಪರಿಹಾರದ ಮೊತ್ತ ಕೊಡಿಸಲಾಗುವುದು. ಈ ರೀತಿ ಯಾದಗಿರಿ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಪರಿಹಾರ ನೀಡಲಾಗಿದೆ ಎಂದರು.

### ಕಾಲ್‌ಸೆಂಟರ್‌ಗೆ ಕರೆ

ಸಕಾಲ ಯೋಜನೆಯಲ್ಲಿ ಜಾತಿಪ್ರಮಾಣ ಪತ್ರ, ಪಹಣಿಗಿಂತ, ಜನ್ಮ ಪ್ರಮಾಣ ಪತ್ರಕ್ಕೆ ಹೆಚ್ಚು ಬೇಡಿಕೆ ಇದೆ. ಈಗ ಜಾತಿ ಪ್ರಮಾಣ ಪತ್ರವನ್ನು ವರ್ಷಕ್ಕೊಮ್ಮೆ ನೀಡುತ್ತಿಲ್ಲ, 10 ವರ್ಷಕ್ಕೊಮ್ಮೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಅಧಿಕಾರಿಗಳು ನೋಂದಣಿಗೆ ತೊಂದರೆ ಕೊಡುತ್ತಾರೆ ಎಂದು ದೂರುಗಳು ಬಂದಿವೆ.

ಅಂತಹ ದೂರುಗಳನ್ನು ಕಾಲ್ ಸೆಂಟರ್ ಕರೆ ಮಾಡಿ ತಿಳಿಸಿದರೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ನಾಗರಿಕರು ತಮಗೆ ನೀಡುವ ಹಕ್ಕುಗಳನ್ನು ಉಪಯೋಗಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

44 ಇಲಾಖೆಗಳಲ್ಲಿ 30 ಇಲಾಖೆಗಳನ್ನು ಸಕಾಲ ಯೋಜನೆಗೆ ಒಳಪಡಿಸಲಾಗಿದೆ. ಆರು ಸಾವಿರ ಗ್ರಾಮ ಪಂಚಾಯಿತಿ ಹಾಗೂ 800 ಜನಸ್ನೇಹಿ ಕೇಂದ್ರಗಳನ್ನು ಸಕಾಲ ವ್ಯಾಪ್ತಿಗೆ ತರಲಾಗಿದೆ. ಸಕಾಲ ರಾಜ್ಯಮಟ್ಟದ ಕಾಯ್ದೆಯಾದ್ದರಿಂದ ಕಡ್ಡಾಯ ಶಿಕ್ಷಣ ಹಕ್ಕನ್ನು (ಆರ್‌ಟಿಇ) ಇದರ ವ್ಯಾಪ್ತಿಗೆ ಒಳಪಡಿಸಲು ಸಾಧ್ಯವಿಲ್ಲ ಎಂದು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿ, ರಾಜ್ಯಮಟ್ಟದ ಎಪಿಎಂಸಿ ಹಾಗೂ ಕೆಐಡಿಬಿಯನ್ನು ಸಕಾಲ ವ್ಯಾಪ್ತಿಗೆ ತರಲಾಗುವುದು ಎಂದು ಭರವಸೆ ನೀಡಿದರು.

ಎಫ್‌ಕೆಸಿಸಿಐ ಅಧ್ಯಕ್ಷ ಕೆ.ಶಿವಶಣ್ಮುಗಂ, ಉಪಾಧ್ಯಕ್ಷ ಆರ್.ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಉದಯವಾಣಿ ಪತ್ರಿಕೆಯ ವರದಿ:–

ಕರ್ನಾಟಕ

## ಸರ್ಕಾರದ ಜೊತೆ ಮೊಬೈಲಲ್ಲೇ ವ್ಯವಹರಿಸಿ

■ ಮೊಬೈಲ್ ಆಡಳಿತಕ್ಕೆ ಶೆಟ್ಟರ್ ಚಾಲನೆ ■ ವಿವಿಧ ಸೇವೆಗಳು ಇನ್ನು ಕುಳಿತಲ್ಲೇ ಲಭ್ಯ

■ ಏನಿದು ಮೊಬೈಲ್ ಆಡಳಿತ?



https://mobile.karnataka.gov.in

ಈ ಸಂಜೆ ದಿನ ಪತ್ರಿಕೆಯಲ್ಲಿ ಮಂಡಳಿಯಲ್ಲಿ ನಡೆಸಿದ ಸ್ನಾತಕೋತ್ರರ ಪದವಿ ಮಾಡುತ್ತಿದ್ದ ವಿಧ್ಯಾರ್ಥಿ ಸಕಾಲ ಬಗ್ಗೆ ಅಧ್ಯಾಯನ ನಡೆಸಿ ಬರೆದ ಒಂದು ಅಂಕಣ (ಪ್ರಸ್ತುತ ತಿಳಿಸಿರುವ ಪತ್ರಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ).

# ಸಕಾಲದಲ್ಲಿ ದೊರೆಯಲಿದೆ ಸಕಲ ಸೇವೆ

## ಗ್ರಾಮೀಣ ಜನರಲ್ಲಿ ಮೂಡಬೇಕಿದೆ ಅರಿವು

ಸಕಾಲ

080-4455-4455

(Call Center)

(Guarantee services of citizen)



ಕನ್ನಡ ಪ್ರಭ ದಿನಪತ್ರಿಕೆ ವರದಿ ಮಾಡಿರುವ ಪತ್ರಿಕೆಯ ತುಣುಕು:–

ಪುಟ 10 ಕನ್ನಡಪ್ರಭ

ರಾಜ್ಯ

ಬೆಂಗಳೂರು | ಶುಕ್ರವಾರ 11 | ಜನವರಿ 2013

# ಮೊಬೈಲ್ ಆಡಳಿತ ಸೇವೆಗೆ ಸಿಎಂ ಶೆಟ್ಟರ್ ಚಾಲನೆ

ಬೆಂಗಳೂರು: ಸರ್ಕಾರದ ವಿನೂತನ ಯೋಜನೆ ಮೊಬೈಲ್ ಆಡಳಿತ ಸೇವೆಗೆ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಗುರುವಾರ ಚಾಲನೆ ನೀಡಿದರು. ದೇಶದಲ್ಲೇ ಮೊದಲ ಬಾರಿಗೆ ರಾಜ್ಯದಲ್ಲಿ ಮೊಬೈಲ್ ಫೋನ್ ಮೂಲಕ ಮಾಹಿತಿ ಸಂಗ್ರಹಿಸುವ ಹಾಗೂ ಬಿಲ್ ಪಾವತಿಸುವ ನೂತನ ವ್ಯವಸ್ಥೆ ರಾಜ್ಯದಲ್ಲಿ ಜಾರಿಗೆ ಬಂದಿದೆ. ಬೆಂಗಳೂರು–1, ಕರ್ನಾಟಕ–1, ಸಂಚಾರ ಪೊಲೀಸ್, ಸಾರಿಗೆ ಇಲಾಖೆ ಹಾಗೂ ಸಕಾಲ ಯೋಜನೆಯ ನಾನಾ ಸೌಲಭ್ಯಗಳನ್ನು ಮೊಬೈಲ್ ಫೋನ್ ಮೂಲಕ ಪಡೆಯಬಹುದು.

ಮೊಬೈಲ್ ಸೇವೆ ಬಳಕೆಗೆ 8088887766 ಸಂಖ್ಯೆಗೆ ಕರೆ ಮಾಡಬಹುದು. ಗ್ರಾಹಕರು ಮೊಬೈಲ್ ಮೂಲಕವೇ ದೂರವಾಣಿ ಹಾಗೂ ಜಲಮಂಡಳಿಯ ಬಿಲ್ ಪಾವತಿಸಲು ಅವಕಾಶವಿರುತ್ತದೆ. ಮತ್ತೊಂದೆಡೆ ಸಕಾಲದ ಮಾಹಿತಿಯನ್ನು ಪಡೆಯಬಹುದು. ಯೋಜನೆಯು ಪ್ರಾಯೋಗಿಕ ಹಂತದಲ್ಲಿದ್ದು, ಪ್ರಸಕ್ತ ವರ್ಷದ ಏಪ್ರಿಲ್ ತಿಂಗಳೊಳಗೆ ಯೋಜನೆಗೆ ಸಮಗ್ರ ರೂಪ ನೀಡಲು ಸರ್ಕಾರ ನಿರ್ಧರಿಸಿದೆ.

ಸಕಾಲ ಯೋಜನೆ ಮೂಲಕ ಜನರ ಕೆಲಸಗಳ ನಿರ್ವಹಣೆಗೆ ಸಮಯ ನಿಗದಿಮಾಡಲಾಗಿತ್ತು. ಮೊಬೈಲ್ ಸೇವೆ ಮೂಲಕ ಕೈನಲ್ಲಿಯೇ ಆಡಳಿತ ತರುವ ಕೆಲಸ ಮಾಡಬಹುದು. ಮತ್ತೊಂದೆಡೆ ಆಡಳಿತ ಸುಧಾರಣೆಗೆ ಇದು ಸಹಾಯಕಾರಿಯಾಗಲಿದೆ ಎಂದು ಯೋಜನೆಗೆ ಚಾಲನೆ ನೀಡಿದ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅಭಿಪ್ರಾಯಪಟ್ಟರು.

ಮೊಬೈಲ್ ಸೇವೆಯಿಂದ ಸರ್ಕಾರಿ ಕ್ಷೇತ್ರದಲ್ಲಿ ಹೊಸ ಪರ್ವ ಆರಂಭವಾಗಲಿದೆ. ಬೆರಳ ತುದಿಯಲ್ಲಿಯೇ ಜನರು ಮಾಹಿತಿ ಹಾಗೂ ಸೇವೆ ಪಡೆಯಲು ಸಾಧ್ಯವಿದೆ. ಇದನ್ನು ಸರ್ಕಾರದ ಎಲ್ಲ ಯೋಜನೆಗಳಿಗೆ ವಿಸ್ತರಿಸುವ ಕುರಿತಂತೆ ಚಿಂತನೆ ನಡೆಸಲಾಗಿದೆ ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಚಿವರಾದ ಸುರೇಶಕುಮಾರ್,



ಮೊಬೈಲ್ ಆಡಳಿತ ಸೇವೆ ಯೋಜನೆಗೆ ಸಿಎಂ ಶೆಟ್ಟರ್ ಅವರು ಗುರುವಾರ ಚಾಲನೆ ನೀಡಿದರು.

ಸಿ.ಟಿ. ರವಿ ಹಾಗೂ ಸೋಮಣ್ಣ ಉಪಸ್ಥಿತರಿದ್ದರು.

**ಪಕ್ಷದ ಜವಾಬ್ದಾರಿ ನಿರ್ವಹಿಸುತ್ತೇನೆ:** ಬಿಜೆಪಿಯು ನನಗೆ ಎಲ್ಲವನ್ನೂ ನೀಡಿದೆ. ಮುಂದಿನ ಚುನಾವಣೆಯಲ್ಲಿ ನಾಯಕತ್ವ ವಹಿಸಿಕೊಳ್ಳುವಂತೆ ಕೇಂದ್ರ ನಾಯಕರು ಸೂಚಿಸಿದ್ದಾರೆ. ಅವರ ಆದೇಶಕ್ಕೆ ಬದ್ಧನಾಗಿದ್ದೇನೆ. ಪಕ್ಷವನ್ನು ಸಮರ್ಥವಾಗಿ ಮುನ್ನಡೆಸುವ ವಿಶ್ವಾಸವಿದೆ ಎಂದು ಸಿಎಂ ಶೆಟ್ಟರ್ ಅವರು ಇದಕ್ಕೂ ಮುಂಚೆ ನಡೆದ ಜನತಾ ದರ್ಶನದಲ್ಲಿ ಹೇಳಿದರು.

ನನ್ನ ಮೇಲಿನ ವಿಶ್ವಾಸದಿಂದ ಪಕ್ಷವು ನನಗೆ ಉತ್ತಮ ಸ್ಥಾನಮಾನ ನೀಡಿದೆ. ಉತ್ತಮ ಆಡಳಿತದ ಮೂಲಕ ಪಕ್ಷಕ್ಕೆ ಕಾಣಿಕೆ ನೀಡುವ ಜವಾಬ್ದಾರಿ ನನ್ನ ಮೇಲಿದೆ. ಪಕ್ಷದ ನಾಯಕರು ನನ್ನ ಮೇಲಿಟ್ಟಿರುವ ವಿಶ್ವಾಸ ಉಳಿಸಿಕೊಳ್ಳುತ್ತೇನೆ ಎಂದು ಅವರು ತಿಳಿಸಿದರು.

ಇದೇ ವಿಷಯದ ಬಗ್ಗೆ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾದ ವರದಿ:–


ಪ್ರಜಾವಾಣಿ

ಗುರುವಾರ 11ನೇ ಜನವರಿ 2013

# ಮೊಬೈಲ್‌ನಲ್ಲಿ 'ಸಕಾಲ' ಶುರು

### ಮೊಬೈಲ್ ಸೇವೆ ಉಪಯೋಗ

https://mobile.karnataka.gov.in

### ಹೊಸ ಜವಾಬ್ದಾರಿ

# ಸಕಾಲ ಸೇವೆಗೂ ಆನ್‌ಲೈನ್ ರಂಗು

**ಬೆಂಗಳೂರು, ಜ. 9;** ಸಕಾಲದ 265 ಸೇವೆಗಳನ್ನೂ ಆನ್‌ಲೈನ್ ಮೂಲಕ ನೀಡುವ ಗುರಿ ಹೊಂದಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಸುರೇಶ್ ಕುಮಾರ್ ತಿಳಿಸಿದ್ದಾರೆ.

ಸಕಾಲದ ಎಲ್ಲ ಸೇವೆಗಳೂ ಮಾರ್ಚ್ ವೇಳೆಗೆ ಆನ್‌ಲೈನ್ ಮೂಲಕ ಲಭ್ಯವಾಗುವಂತೆ ಮಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿರುವುದಾಗಿ ಬುಧವಾರ ಸಚಿವರು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.



ಇದೇ ಸಂದರ್ಭದಲ್ಲಿ ಡಿಸೆಂಬರ್ ತಿಂಗಳ ಸಕಾಲ ಕಾರ್ಯಕ್ರಮ ಪ್ರಗತಿ ವರದಿ ಮಾಹಿತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರ, ಸಕಾಲ ಸೇವೆಯಡಿ ಒಟ್ಟಾರೆ 1.56 ಕೋಟಿ ಗೂ ಮಿಗಿಲಾಗಿ ಅರ್ಜಿಗಳು ಸ್ವೀಕೃತವಾಗಿದ್ದು, 1.53 ಕೋಟಿ ಗೂ ಮೀರಿ ಅರ್ಜಿಗಳು ವಿಲೇವಾರಿಯಾಗಿದೆ. ಡಿಸೆಂಬರ್ ತಿಂಗಳಿನಲ್ಲಿ ರಾಮನಗರ ಮೊದಲನೇ ಸ್ಥಾನ ಪಡೆದಿದೆ. ಎರಡನೇ ಸ್ಥಾನ ಉತ್ತರಕನ್ನಡ, ಮೂರನೇ ಸ್ಥಾನ ದಕ್ಷಿಣ ಕನ್ನಡ, ಕೊನೆಯ ಮೂರು ಸ್ಥಾನಗಳನ್ನು ಬಿಜಾಪುರ, ಬೆಳಗಾವಿ, ಬಳ್ಳಾರಿ ಜಿಲ್ಲೆಗಳು ಪಡೆದುಕೊಂಡಿವೆ. 14.46 ಲಕ್ಷ ಅರ್ಜಿಗಳು ಸ್ವೀಕೃತವಾಗಿದ್ದು 14.31 ಲಕ್ಷ ಅರ್ಜಿಗಳು ವಿಲೇವಾರಿಯಾಗುವ ಮೂಲಕ ಶೇ. 97.62 ರಷ್ಟು ಪ್ರಗತಿ ಸಾಧಿಸಿದೆ ಎಂದು ತಿಳಿಸಿದರು.

**ಸಗಟು ಅರ್ಜಿ ಸ್ವೀಕಾರ ಇಲ್ಲ**

ಸಕಾಲ ಸೇವೆಯ ಅರ್ಜಿ ಸ್ವೀಕಾರದಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿರುವ ಹಿನ್ನಲೆಯಲ್ಲಿ ಸಗಟು ಅರ್ಜಿಗಳ ಸ್ವೀಕಾರ ಇಲ್ಲ ಎಂದು ಸ್ಪಷ್ಟ ನಿರ್ದೇಶನ ನೀಡಲಾಗಿದೆ ಎಂದು ಸಿಬ್ಬಂದಿ ಮತ್ತು ಒಳಾಡಳಿತ ಇಲಾಖೆ ಕಾರ್ಯದರ್ಶಿ ಶಾಲಿನಿ ರಜನೀಶ್ ತಿಳಿಸಿದರು.

**ಮೊಬೈಲ್ ಆಡಳಿತ**

ಸರ್ಕಾರದ ಆಯ್ದ ಸೇವೆಗಳನ್ನು ಮೊಬೈಲ್ ಆಡಳಿತ ಮೂಲಕ ಒದಗಿಸುವ ಪ್ರಕ್ರಿಯೆಗೆ ಸರ್ಕಾರ ಜ.10 ರಂದು ಚಾಲನೆ ನೀಡಲಿದೆ. ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಇದಕ್ಕೆ ಚಾಲನೆ ನೀಡಲಿದ್ದಾರೆ ಎಂದು ಸುರೇಶ್ ಕುಮಾರ್ ತಿಳಿಸಿದರು.

ಪ್ರಾಯೋಗಿಕವಾಗಿ ಬೆಂಗಳೂರು ಒನ್, ಕರ್ನಾಟಕ ಒನ್, ಸಕಾಲದ ಕೆಲವು ಸೇವೆಗಳು, ಮೈಸೂರು ಸಾರಿಗೆ ಸೇವೆ ಮಿತ್ರ, ಬೆಂಗಳೂರು ಸಂಚಾರ ಮಿತ್ರ ಈ ಸೇವೆಗಳಿಗೆ ಮೊಬೈಲ್ ಮೂಲಕ ಅವಕಾಶ ಕಲ್ಪಿಸಲಾಗಿದೆ. ಎಸ್.ಎಂ.ಎಸ್. ಹಾಗೂ ಐ.ವಿ.ಆರ್.ಎಸ್. ಮೂಲಕ ಲಭ್ಯವಾಗಲಿದೆ ಎಂದು ವಿವರಿಸಿದರು.

ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಪ್ರಕಟವಾದ ವರದಿಯ ತುಣುಕು:

"ಕನ್ನಡ ಪ್ರಭ"

# ಜನ ಸ್ನೇಹಿಯಾದ 'ಅಟಲ್ ಜೀ ಕೇಂದ್ರ'

## ಕಂದಾಯ ಇಲಾಖೆ ಮೂಲಕ 36 ಸೇವೆ ಲಭ್ಯ: ಡಿಸಿ । ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಕುರಿತ ವಿಚಾರ ಸಂಕಿರಣ



ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಸೇವೆ ಕುರಿತು ನಡೆದ ವಿಚಾರ ಸಂಕಿರಣವನ್ನು ಜಿಲ್ಲಾಧಿಕಾರಿ ಇಕ್ಕೇರಿ ಉದ್ಘಾಟಿಸಿದರು.

ಚಿತ್ರದುರ್ಗ: ಸರ್ಕಾರವು ಜನರ ಬಳಿಯೇ ಆಡಳಿತ ಸೇವೆ ನೀಡಲು ಹೋಬಳಿ ಕೇಂದ್ರಗಳಲ್ಲಿ ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಮೂಲಕ ಕಂದಾಯ ಇಲಾಖೆಯ 36 ಸೇವೆಗಳನ್ನು ನೀಡುತ್ತಿದೆ ಎಂದು ಜಿಲ್ಲಾಧಿಕಾರಿ ವಿ.ಪಿ. ಇಕ್ಕೇರಿ ತಿಳಿಸಿದರು.

ಗುರುವಾರ ಸರ್ಕಾರಿ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ವಾರ್ತಾ ಇಲಾಖೆ, ಕಂದಾಯ ಇಲಾಖೆ ಮತ್ತು ಸರ್ಕಾರಿ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಯ ಸಹಯೋಗದಲ್ಲಿ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿನ ಸೇವೆಗಳ ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

**ಹೋಬಳಿಗೊಂದು ಕೇಂದ್ರ:** ಅಟಲ್‌ಜೀ ಜನಸ್ನೇಹಿ ಕೇಂದ್ರಗಳನ್ನು ಪ್ರತಿ ಹೋಬಳಿಗಳಲ್ಲಿ ಸ್ಥಾಪನೆ ಮಾಡಿದ್ದು, ಕಂದಾಯ ಇಲಾಖೆಯೇ ಇದರ ನಿರ್ವಹಣೆ ಮಾಡಲಿದೆ. ತಾಲೂಕು ಕೇಂದ್ರ, ಜಿಲ್ಲಾ ಕೇಂದ್ರಕ್ಕೆ ಸೇವೆ ಪಡೆಯಲು ಅಲೆದಾಡಬೇಕಿಲ್ಲ. ಈಗಾಗಲೇ ಕರ್ನಾಟಕ ನಾಗರಿಕ ಸೇವಾ ಖಾತರಿ ಅಧಿನಿಯಮ ಜಾರಿಯಲ್ಲಿದ್ದು, ನಿಗದಿತ ಅವಧಿಯಲ್ಲಿ ಸೇವೆ ನೀಡಲಾಗುತ್ತಿದೆ. ಸರ್ಕಾರವು ಜನ ಕಲ್ಯಾಣಕ್ಕೆ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಇಂತಹ ಯೋಜನೆಗಳು ಮತ್ತು ದಿನನಿತ್ಯದ ಆಗುಹೋಗುಗಳನ್ನು ತಿಳಿದುಕೊಳ್ಳಲು ವಿದ್ಯಾರ್ಥಿಗಳು ಪ್ರತಿನಿತ್ಯ ದಿನಪತ್ರಿಕೆಗಳನ್ನು ತಪ್ಪದೆ ಓದುವ ಹವ್ಯಾಸವನ್ನು ಬೆಳೆಸಿಕೊಂಡು ಯೋಜನೆಗಳ ಸದುಪಯೋಗ ಮಾಡಿಕೊಳ್ಳಬೇಕೆಂದರು.

**₹9200 ಮೊತ್ತದ ಪ್ರೋತ್ಸಾಹಧನ:** ಐ.ಟಿ.ಐ. ವ್ಯಾಸಂಗಕ್ಕಾಗಿ ಇಲ್ಲಿಗೆ ಬಂದಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಗ್ರಾಮೀಣ ಭಾಗದವರಿದ್ದೀರಿ, ಎಷ್ಟು ಜನರ ಮನೆಯಲ್ಲಿ ಶೌಚಾಲಯ ಇದೆ ಎಂದು ಪ್ರಶ್ನಿಸಿದರು. ಸರ್ಕಾರ ಶೌಚಾಲಯ ನಿರ್ಮಾಣಕ್ಕೆ ₹9200 ಮೊತ್ತದ ಪ್ರೋತ್ಸಾಹಧನ ನೀಡುತ್ತಿದೆ. ನಿಮ್ಮ ಗ್ರಾಪಂಗಳ ಮೂಲಕ ಅರ್ಜಿ ಸಲ್ಲಿಸಿ ಪ್ರೋತ್ಸಾಹಧನ ಪಡೆದು ಶೌಚಾಲಯ ನಿರ್ಮಾಣ ಮಾಡಿಕೊಳ್ಳಬೇಕು. ಪಂಚಾಯಿತಿಯಿಂದ ಪ್ರೋತ್ಸಾಹಧನ ನೀಡದಿದ್ದಲ್ಲಿ ಇದನ್ನು ಕೊಡಿಸುವ ಕೆಲಸವನ್ನು ಮಾಡಲಾಗುತ್ತದೆ ಎಂದರು.

ಚಿತ್ರದುರ್ಗ ತಹಸೀಲ್ದಾರ್ ಬಿ.ಟಿ. ಕುಮಾರಸ್ವಾಮಿಕೇಂದ್ರಗಳ ಕುರಿತು ಮಾಹಿತಿ ನೀಡಿ, ಹಿಂದೆ ಇದ್ದ ನೆಮ್ಮದಿ ಕೇಂದ್ರಗಳ ಬದಲಾಗಿ ಅಟಲ್‌ಜೀ ಜನಸ್ನೇಹಿ ಕೇಂದ್ರಗಳನ್ನು ಸ್ಥಾಪಿಸಿ ನಿರ್ವಹಿಸಲಾಗುತ್ತಿದೆ. ಈ ಕೇಂದ್ರಗಳ ಮೂಲಕ ಕಂದಾಯ ಇಲಾಖೆ 36 ಸೇವೆ ನೀಡಲಾಗುತ್ತಿದೆ ಎಂದರು.

**ಆಪರೇಟರ್ ನೇಮಕ:** ಎಲ್ಲಾ ಹೋಬಳಿಗಳಿಗೂ ಉಪ ತಹಸೀಲ್ದಾರ್, ಡಾಟಾ ಎಂಟ್ರಿ ಆಪರೇಟರ್ ನೇಮಕ ಮಾಡಲಾಗಿದೆ. ಇಲ್ಲಿ ಯಾವುದೇ ಕೈಬರಹದ ಅರ್ಜಿಗಳಿರುವುದಿಲ್ಲ. ಎಲ್ಲಾ ಅರ್ಜಿಗಳನ್ನು ಆನ್‌ಲೈನ್‌ನಲ್ಲಿಯೇ ಭರ್ತಿ ಮಾಡಲಾಗುತ್ತದೆ. ಅರ್ಜಿದಾರರು ಕೇಂದ್ರದ ಸಿಬ್ಬಂದಿ ಕೇಳಿದ ವಿವರವನ್ನು ನೀಡಿದಲ್ಲಿ ಅರ್ಜಿ ತಯಾರಾಗುತ್ತದೆ. ಪ್ರಿಂಟ್ ತೆಗೆದ ನಂತರ ಸಹಿ ಮಾಡಿಕೊಟ್ಟು ಸ್ವೀಕೃತಿ ಪಡೆಯಬೇಕು ಎಂದರು.

ಸಕಾಲ ಕಾಯ್ದೆಯಡಿ ಕಂದಾಯ ಇಲಾಖೆಯ 49 ಸೇವೆಗಳನ್ನು ಸೇರಿಸಲಾಗಿದ್ದು ಇದಕ್ಕೆ ಕಾಲವನ್ನು ನಿಗದಿ ಮಾಡಲಾಗಿದೆ. ನಿಗದಿತ ಕಾಲದಲ್ಲಿ ಸೇವೆಯನ್ನು ನೀಡದ ಅಧಿಕಾರಿಯಿಂದ ಅವರ ವೇತನದಲ್ಲಿ ಪ್ರತಿದಿನ ₹20 ಗಳಂತೆ ಅರ್ಜಿದಾರರಿಗೆ ಪರಿಹಾರ ನೀಡಲಾಗುತ್ತದೆ. ಅರ್ಜಿದಾರರು ಕಡ್ಡಾಯವಾಗಿ ಮೊಬೈಲ್ ಸಂಖ್ಯೆ ನೀಡಬೇಕು. ಮಾಹಿತಿಯನ್ನು ಎಸ್‌ಎಂಎಸ್ ಮಾಡಲಾಗುವುದು ಎಂದರು.

**ಸಕಾಲ ಕಾಯ್ದೆಲ್ಲಿ 265 ಸೇವೆಗಳು:** ಸಕಾಲ ಜಿಲ್ಲಾ ಕನ್ಸಲ್‌ಟೆಂಟ್ ಅರವಿಂದ ರೆಡ್ಡಿ ಸಕಾಲ ಕಾಯ್ದೆಯ ಬಗ್ಗೆ ಮಾಹಿತಿ ನೀಡಿ, 18 ಇಲಾಖೆಗಳ 265 ಸೇವೆಗಳನ್ನು ಸಕಾಲ ಕಾಯ್ದೆಯ ವ್ಯಾಪ್ತಿಯಲ್ಲಿ ತರಲಾಗಿದೆ. ಅರ್ಜಿ ಸಲ್ಲಿಸುವಾಗ ಚೆಕ್ ಲಿಸ್ಟ್‌ನಂತೆ ದಾಖಲೆಗಳನ್ನು ಸಲ್ಲಿಸಿ ಸ್ವೀಕೃತಿ ಪಡೆಯಬೇಕು. ಕೆಲವು ಸಂದರ್ಭದಲ್ಲಿ ಅರ್ಜಿ ಸ್ವೀಕರಿಸಿದ್ದಲ್ಲಿ ನಿಯಂತ್ರಣಾ ಪ್ರಾಧಿಕಾರಕ್ಕೆ ದೂರು ಸಲ್ಲಿಸಬಹುದಾಗಿದೆ ಎಂದರು.

ಪ್ರಾಂಶುಪಾಲ ಎನ್. ಏಕನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾದ ವರದಿ:

ನಮ್ಮ ಚಿತ್ರದುರ್ಗ ವಿಜಯ ಕರ್ನಾಟಕ

# ಪತ್ರಿಕೆ ಓದುವ ಹವ್ಯಾಸದಿಂದ ಜ್ಞಾನ ವೃದ್ಧಿ

- ವಿಕ ಸುದ್ದಿಲೋಕ ಚಿತ್ರದುರ್ಗ



ಚಿತ್ರದುರ್ಗದಲ್ಲಿ ಗುರುವಾರ ನಡೆದ ಅಟಲ್‌ಜೀ ಜನಸ್ನೇಹಿ ಕೇಂದ್ರದ ಸೇವೆಗಳ ಕುರಿತ ವಿಚಾರ ಸಂಕಿರಣವನ್ನು ಜಿಲ್ಲಾಧಿಕಾರಿ ವಿ.ಪಿ.ಇಕ್ಕೇರಿ ಉದ್ಘಾಟಿಸಿದರು. ತಹಸೀಲ್ದಾರ್ ಬಿ.ಟಿ.ಕುಮಾರಸ್ವಾಮಿ ಮತ್ತಿತರರಿದ್ದರು.

ಪಠ್ಯದ ಓದು ಮಾತ್ರ ಜ್ಞಾನದ ಮೂಲವಲ್ಲ, ಸಾಹಿತ್ಯ ಮತ್ತು ಪತ್ರಿಕೆ ಓದುವುದು ಕೂಡ ಜ್ಞಾನ ಬೆಳೆಸಿಕೊಳ್ಳುವ ಮಾರ್ಗ ಎಂದು ಜಿಲ್ಲಾಧಿಕಾರಿ ವಿ.ಪಿ.ಇಕ್ಕೇರಿ ಹೇಳಿದ್ದಾರೆ.

ನಗರದ ಸರಕಾರಿ ಐಟಿಐ ಕಾಲೇಜಿನಲ್ಲಿ ಕಂದಾಯ ಇಲಾಖೆ, ವಾರ್ತಾ ಇಲಾಖೆ ಹಾಗೂ ಸರಕಾರಿ ಮಹಿಳಾ ಕೈಗಾರಿಕೆ ತರಬೇತಿ ಸಂಸ್ಥೆಯಿಂದ ಗುರುವಾರ ನಡೆದ ಅಟಲ್‌ಜೀ ಜನ ಸ್ನೇಹಿ ಕೇಂದ್ರದ ಸೇವೆಗಳ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ನಿತ್ಯ ಒಂದಷ್ಟು ತಾಸು ಸಾಹಿತ್ಯ ಮತ್ತು ಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಂಡರೆ ಜ್ಞಾನ ಮಟ್ಟ ವೃದ್ಧಿಯಾಗುತ್ತದೆ. ಅಲ್ಲದೇ ಸರಕಾರದ ಪ್ರತಿಯೊಂದು ಸವಲತ್ತು ತಿಳಿಯಲು ಸಹಕಾರಿಯಾಗುತ್ತದೆ ಎಂದು ಸಲಹೆ ನೀಡಿದರು.

ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯ ಇಲ್ಲದವರು ಕಡ್ಡಾಯ ನಿರ್ಮಿಸಿಕೊಳ್ಳಲು ಸರಕಾರ ನೂತನ ಯೋಜನೆ ರೂಪಿಸಿದೆ. ಇಂಥ ಯೋಜನೆ ಬಗ್ಗೆ ತಿಳಿದುಕೊಂಡು ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು.

ತಹಸೀಲ್ದಾರ್ ಬಿ.ಟಿ.ಕುಮಾರಸ್ವಾಮಿ ಮಾತನಾಡಿ, ಪ್ರತಿ ಹೋಬಳಿಗೊಂದರಂತೆ ಅಟಲ್‌ಜೀ ಜನಸ್ನೇಹಿ ಕೇಂದ್ರ ನಿರ್ಮಿಸಿ ಅದರಲ್ಲಿ 36 ಸೇವೆ ನೀಡಲಾಗುತ್ತಿದೆ ಎಂದರು.

ಜಿಲ್ಲಾ ವಾರ್ತಾಧಿಕಾರಿ ಎಸ್.ಮಹೇಶ್ವರಯ್ಯ ಮಾತನಾಡಿ, ಸರಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಅರಿವು ಮೂಡಿಸುವ ಕೆಲಸ ವಾರ್ತಾ ಇಲಾಖೆಯಿಂದ ನಿರಂತರವಾಗಿ ನಡೆಯುತ್ತಿದೆ ಎಂದರು.

ಪ್ರಾಚಾರ್ಯ ಎನ್.ಏಕನಾಥ್, ಸಕಾಲ ಕನ್ಸಲ್‌ಟೆಂಟ್ ಅರವಿಂದರೆಡ್ಡಿ, ಸಹಾಯಕ ವಾರ್ತಾಧಿಕಾರಿ ಧನಂಜಯ್ ಮತ್ತಿತರರಿದ್ದರು.

ವಿಜಯ ಕರ್ನಾಟಕ
23 Jan 2013,11:31

ತುಮಕೂರು

ಬ್ರೇಕಿಂಗ್ ನ್ಯೂಸ್

# ಕೊಳೆವೆಬಾವಿ ಹಣ 29ರೊಳಗೆ ಪಾವತಿ

| Jan 23, 2013, 04.15AM IST

**ತುಮಕೂರು:** ಜಿಲ್ಲೆಯಲ್ಲಿ ಕಳೆದ ವರ್ಷ ಕೊರೆದಿರುವ 527 ಕೊಳವೆ ಬಾವಿಗಳಿಗೆ ಹಣ ಪಾವತಿ, ವಿದ್ಯುತ್ ಸಂಪರ್ಕ, ಪಂಪಸೆಟ್ ಅಳವಡಿಕೆ ಕಾರ್ಯವನ್ನು ಜ.29ರೊಳಗೆ ಪೂರ್ಣಗೊಳಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಶಾಲಿನಿ ರಜನೀಶ್ ತಿಳಿಸಿದರು.

ಡಿಸಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೇಸಿಗೆ ಹಿನ್ನೆಲೆಯಲ್ಲಿ ಜಿಲ್ಲೆಯ ಕುಡಿಯುವ ನೀರಿನ ಸ್ಥಿತಿಗತಿ ಕುರಿತು ಅಧಿಕಾರಿಗಳ ಸಭೆ ನಡೆಸಿದ್ದು, ಹೊಸದಾಗಿ ಕೊರೆದು ಬಾಕಿ ಉಳಿಸಿಕೊಂಡಿರುವ 527 ಕೊಳವೆ ಬಾವಿಗಳ ಹಣವನ್ನು ಜ.29ರೊಳಗೆ ಪಾವತಿಸು ವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಇದೇ ಅವಧಿಯೊಳಗೆ ಸದರಿ ಕೊಳವೆಬಾವಿಗಳಿಗೆ ಪಂಪ ಸೆಟ್ ಅಳವಡಿಕೆ ಹಾಗೂ ವಿದ್ಯುತ್ ಸಂಪರ್ಕ ಪೂರ್ಣಗೊಳ್ಳಬೇಕು. ಫೆಬ್ರುವರಿ ಮೊದಲವಾರದೊಳಗೆ ಸದರಿ ಕೊಳವೆಬಾವಿಗಳಿಂದ ಪೈಪ್‌ಲೈನ್ ಮೂಲಕ ಸಿಸ್ಟನ್‌ಗೆ ನೀರು ಹರಿಸುವ ಕಾರ್ಯ ಪೂರ್ಣಗೊಳ್ಳಲು ಸೂಚಿಸಿರುವುದಾಗಿ ತಿಳಿಸಿದರು.

**ಖರ್ಚಾಗುತ್ತಿಲ್ಲ ಹಣ:** ಸರಕಾರದಿಂದ 26 ಕೋಟಿ ರೂ. ಕುಡಿಯುವ ನೀರಿಗಾಗಿ ಜಿ.ಪಂ. ಬಿಡುಗಡೆ ಯಾಗಿದ್ದು, ಈ ಹಣ ಪೂರ್ಣ ಪ್ರಮಾಣ ದಲ್ಲಿ ಖರ್ಚಾಗದೇ ಉಳಿದಿದೆ. ಇದನ್ನು ಕೊಳವೆಬಾವಿ ಕಾರ್ಯಗಳಿಗೆ ಬಳಸಲು ನಿರ್ದೇಶಿಸ ಲಾಗಿದೆ ಎಂದರು.

**ಖಾಸಗಿಯವರಿಂದ ನೀರು ಖರೀದಿ:** ಅಂತರ್ಜಲ ಮಟ್ಟ ಕುಸಿದು ಸರಕಾರದ ಕೊಳವೆಬಾವಿಗಳು ವೈಫಲ್ಯಗೊಂಡಿರುವ ಗ್ರಾಮಗಳಿಗೆ ಟ್ಯಾಂಕರ್‌ಗಳ ಮೂಲಕ ಅಧಿಕ ಹಣ ಕೊಟ್ಟು ನೀರು ಪೂರೈಸುವ ಬದಲು ಸದರಿ ಗ್ರಾಮಗಳಲ್ಲಿ ಖಾಸಗಿಯವರು ಕೊರೆಸಿರುವ ಕೊಳವೆಬಾವಿಗಳಿಂದಲೇ ಒಪ್ಪಂದದ ಮೂಲಕ ನೀರು ಖರೀದಿಸಲು ಚಿಂತಿಸಲಾಗಿದೆ. ಖಾಸಗಿ ಯವರು ನಿರಾಕರಿಸಿದಲ್ಲಿ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದರು.

ಸರ್ವೋತ್ತಮ ಸೇವೆ ಪ್ರಶಸ್ತಿ: ಸರ್ವೋತ್ತಮ ಸೇವೆ ಪ್ರಶಸ್ತಿಗೆ ಜಿಲ್ಲೆಯ ಎ ದರ್ಜೆ ಅಧಿಕಾರಿಯಿಂದ ಡಿ ದರ್ಜೆವರೆಗೆ ಐವರು ಸರಕಾರಿ ನೌಕರರನ್ನು ಗುರುತಿಸಿದ್ದು, ಜ.26ರ ಗಣರಾಜ್ಯೋತ್ಸವದಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

6.71 ಲಕ್ಷ ಸಕಾಲ ಅರ್ಜಿ ಸ್ವೀಕಾರ: ಜಿಲ್ಲೆಯಲ್ಲಿ ಸಕಾಲ ಯೋಜನೆ ಪ್ರಾರಂಭವಾದಾಗಿನಿಂದ 6,71,000 ಅರ್ಜಿಸ್ವೀಕರಿಸಲಾಗಿದ್ದು, 6,57, 000 ಅರ್ಜಿಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡಲಾಗಿದೆ. ಅರ್ಜಿ ವಿಲೇವಾರಿ ಮಾಡದ ಅಧಿಕಾರಿಗಳಿಗೆ 20 ರೂ.ನಂತೆ ದಂಡ ವಿಧಿಸಿದ್ದು, ಮೂವರು ಫಲಾನುಭವಿಗಳು ಪರಿಹಾರ ಪಡೆದಿ ದ್ದಾರೆ. ಸಾರ್ವಜನಿಕರು ಜಾಗೃತರಾಗಿ ಸಕಾಲದಲ್ಲಿ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಕಂಪ್ಯೂಟರೀಕೃತ ರಸೀದಿಯನ್ನೇ ಕೇಳಿ ಪಡೆಯಬೇಕು ಎಂದರು.

ಜಿಲ್ಲೆಗೆ 18ನೇ ಸ್ಥಾನ: ಸಕಾಲದಲ್ಲಿ ತಿರಸ್ಕೃತವಾದ ಅರ್ಜಿಗಳ ಸಂಖ್ಯೆ ಜಿಲ್ಲೆಯಲ್ಲಿ ಜಾಸ್ತಿಯಿದ್ದು, ಅಗತ್ಯ ದಾಖಲೆಗಳನ್ನು ಅರ್ಜಿದಾರರು ಹಾಕದಿ ರುವುದೇ ಇದಕ್ಕೆ ಕಾರಣ. ತುಮಕೂರು ಜಿಲ್ಲಾ ಡಳಿತ ಹಾಗೂ ಜಿಲ್ಲಾಧಿಕಾರಿಗಳ ಉತ್ತಮ ಕಾರ್ಯ ನಿರ್ವಹಣೆಯ ಫಲವಾಗಿ ಜಿಲ್ಲೆ 28ನೇ ಸ್ಥಾನ ದಿಂದ 18 ಸ್ಥಾನಕ್ಕೆ ಬಂದಿದೆ ಎಂದರು.

ತಿಪಟೂರು ಶಾಸಕ ಬಿ.ಸಿ.ನಾಗೇಶ್ ಅವರ ಸಲಹೆಯಂತೆ ಹಿರಿಯ ಪ್ರಾಥಮಿಕ ಶಾಲೆ ಮಕ್ಕ ಳಿಂದ ಸಕಾಲ ಯೋಜನೆ ಅರಿವು ಮೂಡಿಸಲು ಕಾರ್ಯಕ್ರಮ ರೂಪಿಸಲಾಗಿದೆ ಎಂದು ತಿಳಿಸಿದರು.

**ಮೇವು ಬಾಕಿ ವಾರದಲ್ಲಿ ಪಾವತಿ:** ಜಿಲ್ಲಾಧಿಕಾರಿ ಆರ್.ಕೆ.ರಾಜು ಮಾತನಾಡಿ, ನಗರ ಕುಡಿಯುವ ನೀರಿನ ಯೋಜನೆಗಾಗಿ ಸರಕಾರ ಬಿಡುಗಡೆ ಮಾಡಿದ 3.50 ಕೋಟಿ ರೂ.ನಲ್ಲಿ ಅನುಮತಿ ಪಡೆದು ಗೋ ಶಾಲೆಗಳ ಮೇವಿನ ಬಾಕಿ 2.60 ಕೋಟಿ ರೂ. ಪಾವತಿಸಲಾಗಿದೆ. ಉಳಿದ 2.50 ಕೋಟಿ ರೂ.ಗಳನ್ನು ಒಂದು ವಾರದೊಳಗೆ ನೀಡಲಾಗುವುದು. ಬೇಸಿಗೆ ಹಿನ್ನೆಲೆಯಲ್ಲಿ ಗೋ ಶಾಲೆ, ಮೇವಿನ ನಿರ್ವಹಣೆ ಸಂಬಂಧ ತೋಟ ಗಾರಿಕೆ, ಕೃಷಿ, ಪಶು ಸಂಗೋಪನೆ ಹಾಗೂ ಕಂದಾಯ ಇಲಾಖೆ ಸಭೆ ನಡೆಸಿದ್ದು, 28ರೊಳಗೆ ಕ್ರಿಯಾ ಯೋಜನೆ ರೂಪಿ ಸಲು ಸೂಚಿಸಿದೆ. ಅಂತರ್ಜಿಲ್ಲಾ ಮೇವು ಸರಬರಾಜಿಗೂ ಯೋಜನೆ ರೂಪಿಸಲಾಗಿದೆ ಎಂದರು. ಜಿ.ಪಂ. ಸಿಇಒ ಗೋವಿಂದರಾಜುಮಾತನಾಡಿದರು.

ಸಕಾಲಸಹಾಯವಾಣಿ ಸಕಾಲ ಯೋಜನೆಯಡಿ ಸಲ್ಲಿಸಿದ ಅರ್ಜಿಗಳು ನಿಗದಿತ ಅವಧಿಯೊಳಗೆ ವಿಲೇವಾರಿಯಾಗ ದಿದ್ದರೆ ದೂರು ಕೊಡಲು 080-44554455 ಸಂಖ್ಯೆಯ ಸಹಾಯವಾಣಿ ಸ್ಥಾಪಿಸಿದ್ದು, ಈ ಸಹಾಯವಾಣಿಗೆ ಕರೆ ಮಾಡಿ ದೂರು ನೀಡಿದರೆ, ಕರೆಯನ್ನು ದೂರಾಗಿ ಪರಿಗಣಿಸಿ ಸಮಸ್ಯೆ ಇತ್ಯರ್ಥ ಪಡಿಸಲಾಗುವುದು. ತುಮಕೂರಿನಿಂದ ಈವರೆಗೆ 34 ದೂರುಗಳು ಬಂದಿವೆ.

**-ಶಾಲಿನಿ ರಜನೀಶ್, ಕಾರ್ಯದರ್ಶಿ**

**ಸಿಬ್ಬಂದಿ, ಆಡಳಿತ ಸುಧಾರಣಾ ಇಲಾಖೆ**

ವಿಜಯ ಕರ್ನಾಟಕ 23ನೇ ಜನವರಿ 2013 ಬೆಂಗಳೂರು

# ಸಕಾಲ: ಅರ್ಜಿ ಸಲ್ಲಿಕೆ ದುಪ್ಪಟ್ಟು

▪ **ವಿಕ ಸುದ್ದಿಲೋಕ** ಬೆಂಗಳೂರು

ನಾಗರಿಕರ ಅಹವಾಲು ಸ್ಪಂದನೆಗೆ ಬೆನ್ನು ತಿರುಗಿಸಿದ್ದ ಬಿಡಿಎ, ಸರಕಾರದ ಎಚ್ಚರಿಕೆ ಬಳಿಕ ಸಕಾಲ ಮೂಲಕ ಅರ್ಜಿ ವಿಲೇವಾರಿಗೆ ಮುಂದಾಗಿದೆ.

ಅರ್ಜಿ ಸಲ್ಲಿಸಿ ಒಂದು ತಿಂಗಳಾದರೂ ಸಬೂಬು ಹೇಳಿ ಜನರಿಗೆ 'ನಾಳೆ ಬಾ ... ' ಎಂದು ಸಾಗಹಾಕುತ್ತಿದ್ದ ಸಿಬ್ಬಂದಿಗೆ ಎಚ್ಚರಿಕೆ ನೀಡಿರುವುದು ವಿಲೇವಾರಿ ಪ್ರಕ್ರಿಯೆ ವೇಗ ಪಡೆದಿದೆ. ಸಕಾಲ ಅಡಿ ಸಲ್ಲಿಕೆಯಾದ ಅರ್ಜಿಗೆ ಕಾಲಮಿತಿಯಲ್ಲಿ ಸೇವೆ ನೀಡಲು ವಿಶೇಷ ಕ್ರಮ ಕೈಗೊಳ್ಳಲಾಗಿದೆ.

ಅರ್ಜಿ ಸಲ್ಲಿಕೆ ಸಂಖ್ಯೆ 200ರಿಂದ 500ಕ್ಕೆ ಹೆಚ್ಚಿದ್ದು, ಬಾಕಿ ಪ್ರಕರಣಗಳ ಸಂಖ್ಯೆಯೂ ಕಡಿಮೆಯಾಗಿದೆ.

**ಹೊಸ ಸೇವೆ ಸೇರ್ಪಡೆ ವಿಳಂಬ:** ಸದ್ಯ 12 ಸೇವೆ ನಾಗರಿಕರಿಗೆ ಲಭ್ಯವಾಗುತ್ತಿದೆ. ಖಾತೆ ವರ್ಗಾವಣೆ, ನಕ್ಷೆ ಮಂಜೂರಿಗೆ ಹೆಚ್ಚಿನ ಅರ್ಜಿ ಸಲ್ಲಿಕೆಯಾಗುತ್ತಿದ್ದರೂ, ನಾಲ್ಕೈದು ಸೇವೆಗಳತ್ತ ಜನತೆ ಮುಖ ಮಾಡಿಲ್ಲ, ಪರಾಮರ್ಶೆ ಸಭೆಯಲ್ಲಿ ನೀಡುವ ಸಲಹೆ- ಸೂಚನೆಯಿಂದ ಸಿಬ್ಬಂದಿಗಳ ಕಾರ್ಯವೈಖರಿಯಲ್ಲಿ ಅಲ್ಪ ಸುಧಾರಣೆ ಆಗಿದೆ ಎಂಬ ಮಾತು ಸಾರ್ವಜನಿಕರಿಂದ ಕೇಳಿಬಂದಿದೆ.

ಹೊಸ ಸೇವೆಗಳ ಸೇರ್ಪಡೆ ಬಗ್ಗೆ ತೀರ್ಮಾನ ಆಗಿಲ್ಲ, ಸೇವೆ ನೀಡುವ ದಿನಗಳ ಮಿತಿ ಕಡಿಮೆ ಮಾಡಬೇಕೆಂಬ ಸಲಹೆ ಪರಿಗಣಿಸಿಲ್ಲ, ಕೆಳ ಹಂತದ ಸಿಬ್ಬಂದಿಯಲ್ಲಿ ನಿರ್ಲಕ್ಷ್ಯ ಹೋಗಿಲ್ಲ ಎಂಬ ದೂರುಗಳ ಹೊರತಾಗಿಯೂ ಯೋಜನೆಗೆ ಜನಬೆಂಬಲ ದೊರೆಕಿದೆ ಎನ್ನುತ್ತಾರೆ ಸಕಾಲ ಮುಖ್ಯಸ್ಥರು.

**ಆನ್‌ಲೈನ್ ಸೌಲಭ್ಯ:** ತ್ವರಿತ ಹಾಗೂ ಗುಣಮಟ್ಟದ ಸೇವೆ ನೀಡಲು ಆನ್‌ಲೈನ್ ಸೌಲಭ್ಯಕ್ಕೆ ಬಿಡಿಎ ಅಣಿಯಾಗುತ್ತಿದೆ. ತಾಂತ್ರಿಕ ಸಹಕಾರ, ಸಾಫ್ಟ್‌ವೇರ್ ಅಳವಡಿಕೆ, ಸಿಬ್ಬಂದಿಗೆ ತರಬೇತಿ ಇತ್ಯಾದಿ ಬಗ್ಗೆ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲಾಗಿದೆ. ಮಾರ್ಚ್ ತಿಂಗಳೊಳಗೆ ಆನ್‌ಲೈನ್ ಸೇವೆ ಜಾರಿಗೂ ಗಡುವು ನಿಗದಿಯಾಗಿದೆ.

ಆನ್‌ಲೈನ್ ಸೇವೆಯಿಂದ ನಾಗರಿಕರಿಗೆ ಸಮಯ, ಹಣ ಹಾಗೂ ಮುಖ್ಯವಾಗಿ ವಿಳಂಬ ತಪ್ಪುತ್ತದೆ. ನೌಕರರ ಮೈಗಳ್ಳತನ ಆನ್‌ಲೈನ್ ಸೌಲಭ್ಯದಿಂದ ದೂರ ವಾಗ ಲಿದೆ ಎಂಬ ನಿರೀಕ್ಷೆ ಬಿಡಿಎ ಅಧಿಕಾರಿಗಳಲ್ಲಿದೆ.

ಸಕಾಲ ಜಾರಿಗೆ ಮುನ್ನ ವಾಣಿಜ್ಯ ತೆರಿಗೆ ಇಲಾಖೆ ಆನ್‌ಲೈನ್ ಸೇವೆ ಅಳವಡಿಸಿಕೊಂಡಿತ್ತು. ಇತ್ತೀಚೆಗೆ ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆ ಪ್ರಾಯೋಗಿಕವಾಗಿ ಕಾರ್ಖಾನೆ ಕಟ್ಟಡ ಯೋಜನೆಯ ಅನುಮೋದನೆ, ಪರವಾನಗಿ ನೋಂದಣಿ-ಅನುಮತಿ, ವಾರ್ಷಿಕ ಬಾಯ್ಲರ್ ಪರಿಶೀಲನೆ ಹಾಗೂ ವಾರ್ಷಿಕ ರಿಟರ್ನ್ಸ್ ಸಲ್ಲಿಕೆಗೆ ಅವಕಾಶ ಮಾಡಿಕೊಟ್ಟಿದೆ. ಬಿಬಿಎಂಪಿ ಕೂಡ ಖಾತೆ ವರ್ಗಾವಣೆಯನ್ನು ಆನ್‌ಲೈನ್‌ಗೊಳಿಸಲಿದೆ.

ಫೆಬ್ರವರಿ ತಿಂಗಳೊಳಗೆ ಪ್ರಮುಖ ಇಲಾಖೆಗಳಲ್ಲಿ ಆನ್‌ಲೈನ್ ಜಾರಿಗೆ ಆಡಳಿತ ಸುಧಾರಣೆ ಇಲಾಖೆಯಿಂದ ಸಕಾಲ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ. ಮಾರ್ಚ್ ಅಂತ್ಯಕ್ಕೆ ಎಲ್ಲ ಇಲಾಖೆಗಳಿಗೂ ವಿಸ್ತರಣೆ ಆಗಲಿದೆ.

## ಆನ್‌ಲೈನ್ ಶೀಘ್ರ

**ಎಲ್ಲ ಇಲಾಖೆಗಳಲ್ಲಿ ಆನ್‌ಲೈನ್ ಮೂಲಕ ಸೇವೆ ಒದಗಿಸಲು ನಿರ್ಧರಿಸಲಾಗಿದೆ. ಪ್ರಮುಖ ಇಲಾಖೆಗಳಲ್ಲಿ ಸಿದ್ಧತೆ ನಡೆದಿದ್ದು, ಫೆ.15ರೊಳಗೆ ಚಾಲನೆ ಸಿಗಲಿದೆ. ಮಾರ್ಚ್ ಅಂತ್ಯಕ್ಕೆ ಬಹುತೇಕ ಸೇವೆ ಆನ್‌ಲೈನ್‌ನಲ್ಲಿ ಲಭ್ಯವಾಗಲಿದೆ.**

**– ಶಾಲಿನಿ ರಜನೀಶ್,** ಪಿಎಆರ್ ಕಾರ್ಯದರ್ಶಿ (ಆಡಳಿತ ಸುಧಾರಣೆ)

ಸಂಜೆವಾಣಿ ಬಳ್ಳಾರಿ ಪುಟ3 ಗುರುವಾರ 31 ಜನವರಿ 2013

# ಹೂವಿನಹಡಗಲಿ ಪುರಸಭೆಯಲ್ಲಿ ಸಕಾಲ ಸೇವೆಗೆ ತಾತ್ಸಾರ: ಸಹಾಯವಾಣಿಯಲ್ಲಿ ಪರಿಹಾರ

ಹೂವಿನಹಡಗಲಿ :31p

ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಮಾಮೂಲಿ ರೂಪದಲ್ಲಿ ಇಂತಿಷ್ಟು ಹಣ ಕೊಡುವುದನ್ನು ಕಡ್ಡಾಯಗೊಳಿಸಿರುವ ಇಲ್ಲಿನ ಪುರಸಭೆ ಸಿಬ್ಬಂದಿ ಸಕಾಲ ಯೋಜನೆ ಅಡಿ ಸಲ್ಲಿಸಿದ ಅರ್ಜಿಗಳಿಗೂ ಪರಿಹಾರ ನೀಡುವಲ್ಲಿ ತಾತ್ಸಾರ ಮಾಡುತ್ತಿದ್ದಾರೆಂಬ ದೂರುಗಳು ಕೇಳಿ ಬರುತ್ತಿವೆ.

ಇತ್ತೀಚೆಗೆ ಖಾತಾ ನಕಲು ದೃಢೀಕರಣ ಪಡೆಯಲು ಅಲೆದಾಡಿದ ವ್ಯಕ್ತಿಯೊರ್ವ 21.8.2012 ರಂದು ಸಕಾಲ ಯೋಜನೆ ಅಡಿ ಅರ್ಜಿ ಸಲ್ಲಿಸಿ ದಾಖಲೆ ನೀಡುವಂತೆ ಕೋರಿದ್ದಾರೆ. ಕಾಯ್ದೆ ಪ್ರಕಾರ 30 ದಿನಗಳ ಕಾಲಮಿತಿಯಲ್ಲಿ ಅರ್ಜಿ ಸಲ್ಲಿಸಿದ ವ್ಯಕ್ತಿಗೆ ದಾಖಲೆ ನೀಡಬೇಕು. ಆದರೆ ಸಕಾಲ ಕಾಯ್ದೆಗೂ ಜಗ್ಗದ ಪುರಸಭೆ ಸಿಬ್ಬಂದಿ 5 ತಿಂಗಳವರೆಗೆ ಸತಾಯಿಸಿ ಬೇಜವಾಬ್ದಾರಿ ಮೆರೆದಿದ್ದಾರೆ.

ನಂತರ ಸಂತ್ರಸ್ತ ಇಲ್ಲಿನ ತಾಲೂಕು ಕಛೇರಿಯಲ್ಲಿರುವ . ಸಕಾಲ ಸಹಾಯವಾಣಿಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಇದಕ್ಕೆ ಹೆದರಿದ ಪುರಸಭೆ ಸಿಬ್ಬಂದಿ ಮಾರನೇ ದಿನವೇ ಅಗತ್ಯ ದಾಖಲೆ ನೀಡಿದ್ದಾನೆ. ಸರ್ಕಾರ ಎಷ್ಟೇ ಕಠಿಣ ಕಾಯ್ದೆ ಕಾನೂನು ರೂಪಿಸಿದರೂ ಅದಕ್ಕೆ ಮಣ್ಣೆರಚಿ ಅಮಾಯಕ ಹಾಗೂ ಅನಕ್ಷರಸ್ಥ ಜನರಿಗೆ ಈ ರೀತಿ ವಂಚಿಸುವ ಕೆಲಸ ಇಲ್ಲಿ ಸಾಮಾನ್ಯವಾಗಿದೆ.

ನೀವು ಕೊಟ್ಟ ದಾಖಲೆಗಳನ್ನು ಕಿತ್ತೆಸೆದರೆ ಏನು ಮಾಡುತ್ತೀರಿ ? ಎಂದು ಸಕಾಲ ಯೋಜನೆ ಅಡಿ ಅರ್ಜಿ ಸಲ್ಲಿಸಿದವರನ್ನು ಪ್ರಶ್ನಿಸುವ ಪುರಸಭೆ ಸಿಬ್ಬಂದಿ, ಮುಖ್ಯಮಂತ್ರಿಯಾಗಿದ್ದ ಡಿ.ವಿ. ಸದಾನಂದಗೌಡ ಅಧಿಕಾರದಿಂದ ಕೆಳಗಿಳಿದ ಮರು ದಿನವೇ ಸಕಾಲ ಮಾನ್ಯತೆ ಕಳೆದುಕೊಂಡಿದೆ ಎಂಬ ಉಡಾಫೆ ಮಾತುಗಳನ್ನಾಡುತ್ತಿದ್ದಾರೆಂದು ದೂರುದಾರರು ಹೇಳಿಕೊಂಡಿದ್ದಾರೆ.

ಇಂತಹ ಕೆಲಸ ಕಾರ್ಯಗಳಿಗೆ ಇಂತಿಷ್ಟು ಹಣ ನೀಡುವುದು ಕಡ್ಡಾಯವೆಂಬ ಅಲಿಖಿತ ಶಾಸನ ಪುರಸಭೆಯಲ್ಲಿ ಜಾರಿಯಲ್ಲಿದೆ. ನಮ್ಮ ಮನೆ ಯೋಜನೆ ಮುಂಜೂರಾತಿಗೂ ಹಣ ಕೊಡಬೇಕು. ಸಬ್ಸಿಡಿ ಹಣದ ಚೆಕ್ ಪಡೆಯಲೂ ಕೂಡ ಫಲಾನುಭವಿ ಶೇಕಡವಾರು ಪೀಕಬೇಕಾಗಿದೆ. ಕೇಳಿದಷ್ಟು ಹಣ ನೀಡಿದರೆ ಕ್ಷಣಾರ್ಧದಲ್ಲಿ ಅಗತ್ಯ ದಾಖಲೆ ನೀಡಲಾಗುತ್ತಿದೆ. ಹಣ ಕೊಡಲು ಹಿಂದೇಟು ಹಾಕಿದರೆ ಒಂದಿಲ್ಲೊಂದು ಕಾರಣ ನೀಡಿ ಸತಾಯಿಸುವ ಕೆಲಸ ಮುಂದುವರೆಯುತ್ತದೆ.

ಅಗತ್ಯ ನಾಗರಿಕ ಸೇವೆಗಳನ್ನು ನಿಗದಿತ ಸಮಯದಲ್ಲಿ ಒದಗಿಸುವ ಮತ್ತು ಆಡಳಿತದಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಇತ್ತೀಚೆಗೆ ಜಾರಿಗೆ ತಂದಿರುವ ನಾಗರಿಕ ಸೇವಾ ಖಾತ್ರಿ ಕಾಯ್ದೆ ಅಡಿ ಸೇವೆ ಒದಗಿಸಲೂ ಅನ್ಯ ಕಾರಣ ಹುಡುಕುವ ಸಿಬ್ಬಂದಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಸಕಾಲ ಸಹಾಯವಾಣಿಗೆ ಬನ್ನಿ

ಸಕಾಲ ಯೋಜನೆ ಅಡಿ ಅಗತ್ಯ ದಾಖಲೆಗಳಿಗೆ ಅರ್ಜಿ ಸಲ್ಲಿಸಿದಾಗ್ಯೂ ಅಗತ್ಯ ನಾಗರಿಕ ಸೇವೆ ನೀಡಲು ಅಧಿಕಾರಿಗಳು ವಿಳಂಬ ಮಾಡಿದರೆ ತಾಲೂಕು ಕಛೇರಿಯಲ್ಲಿರುವ ಸಹಾಯವಾಣಿ ಸಂಪರ್ಕಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವಂತೆ ಸಕಾಲ ಮೇಲ್ವಿಚಾರಕರು ಕೋರಿದ್ದಾರೆ.

# ವಿಶೇಷ ಯೋಜನೆ ಸಕಾಲ ಹೊಸ ಆವಿಷ್ಕಾರ



ಮಂಡ್ಯನಗರದ ವಾರ್ತಾ ಇಲಾಖೆಯಲ್ಲಿ 'ಸಕಾಲ ಯೋಜನೆಯ ಪರಿಣಾಮಕಾರಿ ಅನುಷ್ಠಾನ ಕುರಿತು ಹಮ್ಮಿಕೊಳ್ಳಲಾಗಿದ್ದ ಸಂವಾದ' ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಬಿ.ಎನ್.ಕೃಷ್ಣಯ್ಯ ಉದ್ಘಾಟಿಸಿ ಮಾತನಾಡಿದರು.

ಮಂಡ್ಯ, ಜ. 22: ರಾಜ್ಯ ಸರ್ಕಾರದ ವಿಶೇಷ ಯೋಜನೆ ಸಕಾಲ ಹೊಸ ಆವಿಷ್ಕಾರವಾಗಿದೆ ಎಂದು ಜಿಲ್ಲಾಧಿಕಾರಿ ಬಿ.ಎನ್.ಕೃಷ್ಣಯ್ಯ ಅಭಿಪ್ರಾಯಪಟ್ಟರು.

ನಗರದ ವಾರ್ತಾ ಇಲಾಖೆಯಲ್ಲಿ ವಾರ್ತಾ ಇಲಾಖೆ, ಜನೋದಯ ಸೇವಾ ಟ್ರಸ್ಟ್ ಆಶ್ರಯದಲ್ಲಿ ಸಕಾಲ ಯೋಜನೆಯ ಪರಿಣಾಮಕಾರಿ ಅನುಷ್ಠಾನ ಕುರಿತು ಹಮ್ಮಿಕೊಳ್ಳಲಾಗಿದ್ದ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದ ಅವರು, ಡಿ.3 ರಿಂದ ಪ್ರಾರಂಭವಾದ ಕರ್ನಾಟಕ ನಾಗರೀಕ ಸೇವಾ ಖಾತರಿ ವ್ಯವಸ್ಥೆ-2001 ಯೋಜನೆ ಈಗಾಗಲೇ ಸಾರ್ವಜನಿಕರಿಗೆ ಸೇವೆಯನ್ನು ಒದಗಿಸುತ್ತಿದ್ದು, ಅದರ ಮುಂದುವರಿದ 18 ಇಲಾಖೆಗಳ 265 ಸೇವೆಗಳು ಜಾರಿಗೆ ಬಂದಿದ್ದು, ಅವುಗಳು ಸಾರ್ವಜನಿಕರಿಗೆ ಯಾವ ರೀತಿ ಸೇವೆ ಒದಗಿಸುತ್ತಿವೆ ಹಾಗೂ ಅವುಗಳ ಅನುಷ್ಠಾನ ಹೇಗಾಗಿದೆ. ಜೊತೆಗೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಹಾಗೂ ನೌಕರರು ಸಾರ್ವಜನಿಕರ ಸಮಸ್ಯೆಗಳಿಗೆ ಯಾವ ರೀತಿ ಸ್ಪಂದಿಸುತ್ತಿದ್ದಾರೆ ಎಂಬುದನ್ನು ಗಮನಿಸುವ ದಿಸೆಯಿಂದ ಈ ಸಂವಾದ ಏರ್ಪಡಿಸಲಾಗಿದೆ ಎಂದರು.

### ಘೋಷವಾಕ್ಯ

ಸಕಾಲ ಎಂದರೆ, ಸಕಾಲಕ್ಕೆ ಸೇವೆಗಳನ್ನು ಒದಗಿಸುವ ಕಾರ್ಯಕ್ರಮವಾಗಿದ್ದು, ಸಾರ್ವಜನಿಕರಿಗೆ 'ಇಂ-ದು-ನಾಳೆ ಇನ್ನಿಲ್ಲ, ಹೇಳಿದ ದಿನ ತಪ್ಪೊಲ್ಲ' ಎಂಬ ಘೋಷವಾಕ್ಯದೊಡನೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಹಿಂದೆ ಇದ್ದ ವ್ಯವಸ್ಥೆಯಲ್ಲಿನ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸರ್ಕಾರದ ಎಲ್ಲಾ ಯೋಜನೆಗಳ ಫಲವನ್ನು ಸಕಾಲಕ್ಕೆ ನೀಡುವ ಉದ್ದೇಶದಿಂದ ಈ ಯೋಜನೆ ಜಾರಿಗೊಳಿಸಲಾಗಿದೆ ಎಂದ ಅವರು, ಹಿಂದೆ ಇದ್ದ ವ್ಯವಸ್ಥೆಯಲ್ಲಿ ಅಧಿಕಾರಿಗಳು ಹಾಗೂ ನೌಕರರ ಬೇಜವಾಬ್ದಾರಿಯಿಂದ ಸಕಾಲಕ್ಕೆ ಸಾರ್ವಜನಿಕರ ಕೆಲಸ ಕಾರ್ಯಗಳು ಆಗುತ್ತಿರಲಿಲ್ಲ ಇದರಿಂದ ಸಾಕಷ್ಟು ಕಿರಿಕಿರಿಯನ್ನು ಸಾರ್ವಜನಿಕರು ಅನುಭವಿಸಿದ್ದರು ಎಂದು ಹೇಳಿದರು.

### ಸಕಾಲ ಜಾರಿ

ಜನರು ಅನುಭವಿಸುತ್ತಿದ್ದ ಕಿರಿಕಿರಿಯನ್ನು ತಪ್ಪಿಸುವ ಸಲುವಾಗಿ ಸರ್ಕಾರ ಈ ಸಕಾಲ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಜೊತೆಗೆ ಇಲಾಖೆಗಳ ಅಧಿಕಾರಿಗಳ, ನೌಕರರ ಮೇಲೆ ಅಂಕುಶವಿಡಲು ಹಾಗೂ ಸಕಾಲಕ್ಕೆ ಸಾರ್ವಜನಿಕರಿಗೆ ಈ ಸೇವೆಗಳು ದೊರಕಬೇಕೆಂಬ ಸದುದ್ದೇಶದಿಂದ 'ಕರ್ನಾಟಕ ಸೇವಾ ಖಾತರಿ ಅಧಿನಿಯಮ-2011' ತರುವ ಮೂಲಕ ಕಾನೂನು ಬದ್ಧಗೊಳಿಸಲಾಗಿದೆ ಎಂದರು.

### ಅಟಲ್ ಜೀ ಜನಸ್ನೇಹಿ

ಡಿ.25ರಂದು ಅಟಲ್ ಜೀ ಜನಸ್ನೇಹಿ ಕೇಂದ್ರ ಅಂದರೆ ಹಿಂದಿನ ನಾಡ ಕಚೇರಿಗಳನ್ನು ಹೈಟೆಕ್ ಆಗಿ

# ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ – 2011



ಶ್ರೀ ಜಗದೀಶ್ ಶೆಟ್ಟರ್
ಸನ್ಮಾನ್ಯ ಮುಖ್ಯಮಂತ್ರಿಗಳು



ಶ್ರೀ ಎಸ್. ಸುರೇಶ್‌ಕುಮಾರ್
ಸನ್ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮಾನವ ಹಕ್ಕು, ನಗರಾಭಿವೃದ್ಧಿ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

# ಸಕಾಲ

## ಇಂದು... ನಾಳೆ... ಇನ್ನಿಲ್ಲ – ಹೇಳಿದ ದಿನ ತಪ್ಪೊಲ್ಲ

ದೇಶದಲ್ಲೇ ಅತಿ ಹೆಚ್ಚು ಸೇವೆಗಳು

ಸಮಯ ಬದ್ಧವಾಗಿ
ನಾಗರಿಕರಿಗೆ ಒದಗಿಸಲಾದ ಸೇವೆಗಳು 265
ಇಲಾಖೆಗಳು/ ಸಂಸ್ಥೆಗಳು 30

ಮಾಹಿತಿ / ದೂರುಗಳಿಗಾಗಿ ಸಂಪರ್ಕಿಸಿ
080-44554455
Website
www.sakala.kar.nic.in
E-mail : sakala@nic.in

## 1 ನಗರಾಭಿವೃದ್ಧಿ ಇಲಾಖೆ

| ಕ್ರ. ಸಂ. | ಸೇವೆಗಳ ಪಟ್ಟಿ | ಹೆಸರಿಸಲಾದ ಅಧಿಕಾರಿ | ಕೆಲಸದ ದಿನಗಳು |
|---|---|---|---|
| I. | ಸ್ಥಳೀಯ ಪ್ರಾಧಿಕಾರ : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | | |
| 1 | ಜನನ, ಮರಣ ಮತ್ತು ಪ್ರಮಾಣಪತ್ರಗಳ ವಿತರಣೆ | ವೈದ್ಯಾಧಿಕಾರಿ, ಉಪ ಆರೋಗ್ಯಾಧಿಕಾರಿ, ದೊಡ್ಡ ಆಸ್ಪತ್ರೆಗಳ ಸೂಪರಿಂಟೆಂಡ್‌ಗಳು (48 ಕೇಂದ್ರಗಳಿಗೆ) | 3 -7 |
| 2 | ಜನನ, ಮರಣ ಮತ್ತು ಪ್ರಮಾಣಪತ್ರಗಳ ವಿತರಣೆ | ಸಹಾಯಕ ಅಂಕಿಅಂಶ ಅಧಿಕಾರಿ (ಕೇಂದ್ರ ಕಚೇರಿ) | |
| 3 | ವಾಣಿಜ್ಯ ಪರವಾನಗಿ ನೀಡಿಕೆ | ವೈದ್ಯಾಧಿಕಾರಿ / ಉಪ ಆರೋಗ್ಯಾಧಿಕಾರಿ | 30 |
| 4 | ಖಾತಾ ಉದ್ಧೃತ / ಪ್ರಮಾಣಪತ್ರ | ಸಹಾಯಕ ಕಂದಾಯ ಅಧಿಕಾರಿ | 3 -7 |
| 5 | ಏಕವಾಸ ಘಟಕ 2400 ಚ.ಅ.ವರೆಗೆ ಕಟ್ಟಡ ಯೋಜನೆಯ ಮಂಜೂರಾತಿ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು | 30 |
| 6 | ನೋಂದಣಿ | ಸಹಾಯಕ ಕಂದಾಯ ಅಧಿಕಾರಿ | |
| 7 | ಖಾತಾ ವರ್ಗಾವಣೆ | | |
| II. | ಸ್ಥಳೀಯ ಪ್ರಾಧಿಕಾರ / ಸಾರ್ವಜನಿಕ ಪ್ರಾಧಿಕಾರ/ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ ಪೌರ ನಿಗಮಗಳು | | |
| 8 | ಜನನ, ಮರಣ ಪ್ರಮಾಣಪತ್ರಗಳ ವಿತರಣೆ | ವಲಯ ಸಹಾಯಕ ಆಯುಕ್ತರು/ ವೈದ್ಯಾಧಿಕಾರಿ/ ಪರಿಸರ ಅಭಿಯಂತರರು/ ಆರೋಗ್ಯ ನಿರೀಕ್ಷಕರು/ ಸಹಾಯಕ ಆರೋಗ್ಯಾಧಿಕಾರಿ | 3-7 |
| 9 | ವಾಣಿಜ್ಯ ಪರವಾನಗಿ ನೀಡಿಕೆ | | 30 |
| 10 | ಖಾತಾ ಉದ್ಧೃತ | ವಲಯ ಸಹಾಯಕ ಆಯುಕ್ತರು/ ಉಪ ಕಂದಾಯ ಅಧಿಕಾರಿ/ ಕಂದಾಯ ನಿರೀಕ್ಷಕರು | 3-7 |
| 11 | ಏಕವಾಸ ಘಟಕ 2400 ಚ.ಅ.ವರೆಗೆ ಕಟ್ಟಡ ಯೋಜನೆಯ ಮಂಜೂರಾತಿ | ನಗರ ಯೋಜನಾ ನಿರ್ದೇಶಕರು/ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು / ಸಹಾಯಕ ಅಭಿಯಂತರರು | 30 |
| 12 | ನಿವಾಸ ಕಟ್ಟಡಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ ಅನುಮತಿ | ಸಹಾಯಕ ಅಭಿಯಂತರರು / ಕಿರಿಯ ಅಭಿಯಂತರರು | 15 |
| III. | ಸ್ಥಳೀಯ ಪ್ರಾಧಿಕಾರ / ಸಾರ್ವಜನಿಕ ಪ್ರಾಧಿಕಾರ/ ನಗರ ಸಭೆಗಳು | | |
| 13 ರಿಂದ 17 | ಮೇಲ್ಕಂಡ ಕ್ರ.ಸಂ.8 ರಿಂದ 12ರಲ್ಲಿದ್ದಂತೆ | ಆರೋಗ್ಯ ನಿರೀಕ್ಷಕರು (ಕ್ರ.ಸಂ. 13–14) | ಮೇಲ್ಕಂಡಂತೆ |
| | | ಕಂದಾಯ ಅಧಿಕಾರಿ (ಕ್ರ.ಸಂ.15) | |
| | | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಕ್ರ.ಸಂ.16–17) | |
| IV. | ಸ್ಥಳೀಯ ಪ್ರಾಧಿಕಾರ / ಸಾರ್ವಜನಿಕ ಪ್ರಾಧಿಕಾರ/ ಪುರಸಭೆಗಳು | | |
| 18 ರಿಂದ 22 | ಮೇಲ್ಕಂಡ ಕ್ರ.ಸಂ.8 ರಿಂದ 12ರಲ್ಲಿದ್ದಂತೆ | ಆರೋಗ್ಯ ನಿರೀಕ್ಷಕರು (ಕ್ರ.ಸಂ.18–19) | ಮೇಲ್ಕಂಡಂತೆ |
| | | ಕಂದಾಯ ಅಧಿಕಾರಿ ( ಕ್ರ.ಸಂ. 20) | |
| | | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಕ್ರ.ಸಂ. 21–22) | |
| V. | ಸ್ಥಳೀಯ ಪ್ರಾಧಿಕಾರ / ಪಟ್ಟಣ ಪಂಚಾಯ್ತಿ | | |
| 23 ರಿಂದ 27 | ಮೇಲ್ಕಂಡ ಕ್ರ.ಸಂ.8 ರಿಂದ 12ರಲ್ಲಿದ್ದಂತೆ | ಆರೋಗ್ಯ ನಿರೀಕ್ಷಕರು (ಕ್ರ.ಸಂ. 23–24) | ಮೇಲ್ಕಂಡಂತೆ |
| | | ಕಂದಾಯ ಅಧಿಕಾರಿ ( ಕ್ರ.ಸಂ. 25) | |
| | | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಕ್ರ.ಸಂ. 26–27) | |
| VI. | ಸ್ಥಳೀಯ ಪ್ರಾಧಿಕಾರ / ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | | |
| 28 | ಹೊಸ ನೀರು ಸಂಪರ್ಕ/ ಅಪಾರ್ಟ್‌ಮೆಂಟ್‌ಗಳನ್ನು ಹೊರತುಪಡಿಸಿ ನಿವಾಸ ಕಟ್ಟಡಗಳಿಗೆ ಅನುಮತಿ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು | 7 |
| | | | 21 |
| 29 | ಬಹುಮಹಡಿ ಕಟ್ಟಡಗಳಿಗೆ ಹೊಸ ನೀರು ಸಂಪರ್ಕಕ್ಕೆ ಅನುಮತಿ | | |
| 30 | ಚರಂಡಿ ಸ್ವಚ್ಛಗೊಳಿಸುವಿಕೆ ಮತ್ತು ಮ್ಯಾನ್‌ಹೋಲ್ ಮುಚ್ಚಳಿಕೆಯ ಬದಲಾವಣೆ | | 3 |
| VII. | ಸ್ಥಳೀಯ ಪ್ರಾಧಿಕಾರ / ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | | |
| 31 | ನಿವೇಶನಗಳು ಮತ್ತು ಸಿ.ಎ. ನಿವೇಶನಗಳಿಗೆ ಕಟ್ಟಡ ನಕ್ಷೆಯ ಅನುಮೋದನೆ | 30x40 ಮತ್ತು ಕಡಿಮೆ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು | 15 |
| | | 30x40 ಮೇಲ್ಪಟ್ಟು ಮತ್ತು 40x60 ಕಡಿಮೆ ಕಾರ್ಯನಿರ್ವಾಹಕ ಅಭಿಯಂತರರು | |
| | | 60x40 ಮೇಲ್ಪಟ್ಟು ಅಭಿಯಂತರ ಅಧಿಕಾರಿ | |
| 32 | 15 ಮೀ.ವರೆಗಿನ ಎತ್ತರದ ಉದ್ದೇಶಿತ ಕಟ್ಟಡಕ್ಕೆ ಕಟ್ಟಡ ನಕ್ಷೆಯ ಅನುಮೋದನೆ | ಅಭಿಯಂತರ ಅಧಿಕಾರಿ | 30 |
| 33 | 15 ಮೀ.ಗಿಂತ ಹೆಚ್ಚಿನ ಎತ್ತರದ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ | | |
| 34 | ಸ್ವಾಧೀನ ಪ್ರಮಾಣಪತ್ರ | ಉಪ ಕಾರ್ಯದರ್ಶಿ | 7 |
| 35 | ಆಸ್ತಿಗಳ ಖಾತೆ | ಕಂದಾಯ ಅಧಿಕಾರಿ (ಪೂರ್ವ / ಪಶ್ಚಿಮ ಉತ್ತರ / ದಕ್ಷಿಣ) | 15 |
| 36 | ಖಾತಾ ವರ್ಗಾವಣೆ | | |
| 37 | ಮಾರಾಟ / ದಾನದ ಖಾತಾ ವರ್ಗಾವಣೆ | | 30 |
| 38 | 'ಪ್ರಾರಂಭಿಕ ಪ್ರಮಾಣಪತ್ರ' | ಅಭಿಯಂತರ ಅಧಿಕಾರಿ | 12 |
| 39 | 'ವೃತ್ತಿ ಪ್ರಮಾಣಪತ್ರ' | | |
| 40 | ನಿವೇಶನದ ಉಪ ವಿಭಜನೆ / ಸಮಾಮೇಲನಕ್ಕೆ ಅನುಮೋದನೆ | ಜಂಟಿ ನಿರ್ದೇಶಕರು ನಗರ ಯೋಜನೆ | 30 |
| 41 | ಭೂ ಪರಭಾರೆ ಸಂಬಂಧ ಕಂದಾಯ ಇಲಾಖೆಗೆ ಮಾಹಿತಿ ರವಾನಿಸುವುದು | ಸಹಾಯಕ ನಿರ್ದೇಶಕರು | 7 |
| 42 | ಕಟ್ಟಡ ಪ್ರಾರಂಭಿಕ ಪ್ರಮಾಣಪತ್ರ | ಜಂಟಿ ನಿರ್ದೇಶಕರು | 30 |

## 2 ಸಾರಿಗೆ ಇಲಾಖೆ

| | | | |
|---|---|---|---|
| 43 | ವಾಹನ ಚಾಲನೆ ಕಲಿಕಾ ಪರವಾನಗಿ | ಪ್ರಾದೇಶಿಕ ಸಾರಿಗೆ ಅಧಿಕಾರಿ (ಆರ್‌ಟಿಒ)/ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ (ಎಆರ್‌ಟಿಒ) | 7 |
| 44 | ಚಾಲನಾ ಪರವಾನಗಿ | | 30 |
| 45 | ವಾಹನ ನೋಂದಣಿ | ಪ್ರಾದೇಶಿಕ ಸಾರಿಗೆ ಅಧಿಕಾರಿ (ಆರ್‌ಟಿಒ)/ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ (ಎಆರ್‌ಟಿಒ) | 30 |
| 46 | ದ್ವಿಪ್ರತಿ ಪರವಾನಗಿ | | |
| 47 | ದ್ವಿಪ್ರತಿ ನೋಂದಣಿ ಪ್ರಮಾಣಪತ್ರ | | |
| 48 | ಶಾಲಾ ಮಕ್ಕಳಿಗೆ ಬಸ್‌ಪಾಸ್ | ಡಿಪೋ ಮ್ಯಾನೇಜರ್ | 7 |
| 49 | ಸ್ವಾತಂತ್ರ್ಯ ಹೋರಾಟಗಾರರಿಗೆ ಉಚಿತ ಬಸ್‌ಪಾಸ್ | ವಿಭಾಗೀಯ ಸಂಚಾರ ಅಧಿಕಾರಿ | 15 |
| 50 | ವಿಕಲಚೇತನರಿಗೆ ರಿಯಾಯಿತಿ ದರದ ಬಸ್‌ಪಾಸ್ | | |
| 51 | ಅಪಘಾತ ಪರಿಹಾರ ನಿಧಿ | | 30 |
| 52 | ಅಂಧರಿಗೆ ಉಚಿತ ಬಸ್‌ಪಾಸ್ | | 7 |
| 53 | ಸ್ವಾತಂತ್ರ್ಯ ಹೋರಾಟಗಾರರ ಪತ್ನಿ / ವಿಧವಾ ಪತ್ನಿಯರಿಗೆ ರೂ.2000 ಮೌಲ್ಯದ ಉಚಿತ ಪ್ರಯಾಣದ ಕೂಪನ್ | | |

## 3 ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ

| | | | |
|---|---|---|---|
| 54 | ಪಡಿತರ ಚೀಟಿ : ವರ್ಗಾವಣೆ / ಹೆಸರು ಬದಲಾವಣೆ | ಸಂಬಂಧಪಟ್ಟ ಆಹಾರ ಪರಿವೀಕ್ಷಕರು | 7 |
| 55 | ಸಗಟು ವ್ಯಾಪಾರಿಗಳಿಗೆ ಪರವಾನಗಿ ವಿತರಣೆ | ಜಿಲ್ಲಾಧಿಕಾರಿಗಳು, ಬೆಂಗಳೂರಿನ ಅನೌಪಚಾರಿಕ ಪಡಿತರ ವಲಯಗಳಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಪರ / ಜಂಟಿ ನಿರ್ದೇಶಕರು | 30 |
| 56 | ಚಿಲ್ಲರೆ ವ್ಯಾಪಾರಿಗಳಿಗೆ ಪರವಾನಗಿ ವಿತರಣೆ | ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು/ ತಹಸೀಲ್ದಾರರು | 35 |
| 57 | ನ್ಯಾಯಬೆಲೆ ಅಂಗಡಿಗಳನ್ನು ನಡೆಸಲು ಅಧಿಕೃತ ಪತ್ರದ ವಿತರಣೆ | ಜಿಲ್ಲಾಧಿಕಾರಿ / ಅಪರ ನಿರ್ದೇಶಕರು | 30 |

## 4 ಕಂದಾಯ ಇಲಾಖೆ

| | | | |
|---|---|---|---|
| 58 | ಹಕ್ಕುಗಳ ಪ್ರಮಾಣಪತ್ರದ ದಾಖಲೆ | ತಹಸೀಲ್ದಾರ್ | 30 |
| 59 | ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ | ಜಿಲ್ಲಾಧಿಕಾರಿ | 120 |
| 60 | ಎಲ್ಲಾ ರೀತಿಯ ಜಾತಿ ಪ್ರಮಾಣಪತ್ರಗಳು | ತಹಸೀಲ್ದಾರ್ | 21 |
| 61 | ಎಲ್ಲಾ ರೀತಿಯ ಆದಾಯ ಪ್ರಮಾಣಪತ್ರಗಳು | | |
| 62 | ಜಾತಿ ಪ್ರಮಾಣಪತ್ರದ ಸತ್ಯಾಪನೆ / ಸಿಂಧುತ್ವ | ಜಿಲ್ಲಾಧಿಕಾರಿಯವರು ಮುಖ್ಯಸ್ಥರಾಗಿರುವ ಸಮಿತಿ | 15 |
| 63 | ಅವಿವಾದಿತ ಪ್ರಕರಣಗಳಲ್ಲಿ ಸೂಚನೆ 12(2) ಹೊರಡಿಸಿದ ನಂತರ ಭೂಸ್ವಾಧೀನ ಕಾಯ್ದೆ ಪ್ರಕಾರ ಪರಿಹಾರ ಸಂದಾಯ | ಉಪ ವಿಭಾಗಾಧಿಕಾರಿ / ವಿಶೇಷ ಭೂಸ್ವಾಧೀನಾಧಿಕಾರಿ | 30 |
| 64 | ಜನನ ಪ್ರಮಾಣಪತ್ರ | ಗ್ರಾಮ ಲೆಕ್ಕಿಗ | 7-14 |
| 65 | ಮರಣ ಪ್ರಮಾಣಪತ್ರ | | |
| 66 | ಜನಸಂಖ್ಯೆ ಪ್ರಮಾಣಪತ್ರ | ತಹಸೀಲ್ದಾರ್ | 7 |
| 67 | ನಿವಾಸಿ ಪ್ರಮಾಣಪತ್ರ | ತಹಸೀಲ್ದಾರ್ / ಉಪ ತಹಸೀಲ್ದಾರ್ | |
| 68 | ಟೆನೆನ್ಸಿ ಇಲ್ಲದ ಪ್ರಮಾಣಪತ್ರ | ತಹಸೀಲ್ದಾರ್ | |
| 69 | ಜೀವಂತ ಪ್ರಮಾಣಪತ್ರ | ತಹಸೀಲ್ದಾರ್ / ಉಪ ತಹಸೀಲ್ದಾರ್ | |
| 70 | ಕೃಷಿ ಕುಟುಂಬ ಸದಸ್ಯ ಪ್ರಮಾಣಪತ್ರ | | |
| 71 | ಮರುವಿವಾಹವಲ್ಲದ ಪ್ರಮಾಣಪತ್ರ | | |
| 72 | ಭೂರಹಿತ ಪ್ರಮಾಣಪತ್ರ | | |
| 73 | ಜೀವಂತವಿರುವ ಕುಟುಂಬ ಸದಸ್ಯ ಪ್ರಮಾಣಪತ್ರ | ತಹಸೀಲ್ದಾರ್ | |
| 74 | ನಿರುದ್ಯೋಗ ಪ್ರಮಾಣಪತ್ರ | | |
| 75 | ಸರ್ಕಾರಿ ಕೆಲಸವಿಲ್ಲದ ಪ್ರಮಾಣಪತ್ರ | | |
| 76 | ಕೃಷಿಕ ಪ್ರಮಾಣಪತ್ರ | ತಹಸೀಲ್ದಾರ್ / ಉಪ ತಹಸೀಲ್ದಾರ್ | |
| 77 | ಸಣ್ಣ ಮತ್ತು ಅತಿಸಣ್ಣ ರೈತ ಪ್ರಮಾಣಪತ್ರ | | |
| 78 | ಕೃಷಿ ಕಾರ್ಮಿಕ ಪ್ರಮಾಣಪತ್ರ | ತಹಸೀಲ್ದಾರ್ | |
| 79 | ಕೆನೆಪದರ ಅಲ್ಲದ ಪ್ರಮಾಣಪತ್ರ | | |
| 80 | ವಾಸಸ್ಥಳ ಪ್ರಮಾಣಪತ್ರ | | |
| 81 | ಪರಿವರ್ತನೆಯ ಉದ್ಧೃತ | ತಹಸೀಲ್ದಾರ್ / ಉಪ ತಹಸೀಲ್ದಾರ್ | |
| 82 | ಜಮೀನು / ಆಸ್ತಿ ನೋಂದಣಿ | ಸಬ್–ರಿಜಿಸ್ಟ್ರಾರ್ | 1 |
| 83 | ಖಾತಾ ಬದಲಾವಣೆ (ಅವಿವಾದಿತ ಪ್ರಕರಣಗಳು) | ತಹಸೀಲ್ದಾರ್ | 60 |
| 84 | ಯೋಜನಾ ನಿರಾಶ್ರಿತರ ದೃಢೀಕರಣ ಪತ್ರ | | 21 |
| 85 | ಪ್ರಕೃತಿ ವಿಕೋಪ ಪರಿಹಾರ (ಬೆಳೆ ನಷ್ಟ) | | |
| 86 | ಪ್ರಕೃತಿ ವಿಕೋಪ ಪರಿಹಾರ (ಮನುಷ್ಯ ಪ್ರಾಣಹಾನಿ) | | 15 |
| 87 | ಪ್ರಕೃತಿ ವಿಕೋಪ ಪರಿಹಾರ (ಮನೆ ಹಾನಿ) | | 21 |
| 88 | ಪ್ರಕೃತಿ ವಿಕೋಪ ಪರಿಹಾರ (ಪ್ರಾಣಿ ಹಾನಿ) | | 15 |
| 89 | ದಢೂತಿ ಪ್ರಮಾಣಪತ್ರ | | 21 |
| 90 | ಪಹಣಿ ತಿದ್ದುಪಡಿ | ಸಹಾಯಕ ಆಯುಕ್ತರು | 40 |
| 91 | ಸರ್ವೇ ವಿಭಾಗದಲ್ಲಿ ನಕಲು ಪ್ರತಿ (ಆಕಾರ್–ಬಂದ್) | ಸರ್ವೇ ಸೂಪರ್‌ವೈಸರ್ | 7 |
| 92 | ಭೂ ದಾಖಲೆಗಳ ಸೂಚಿ | | |
| 93 | ಟಿಪ್ಪಾನ್ | | |
| 94 | ಪಕ್ಕಾ ಟಿಪ್ಪಾನ್ | | |
| 95 | ಅಟ್ಲಾಸ್ | | |
| 96 | ಗ್ರಾಮ ನಕ್ಷೆ | | |
| 97 | ಖರಾಬು ಭೂಮಿಯ ಉದ್ಧೃತ | | |
| 98 | PTCL ಅಧಿನಿಯಮದಡಿ ನಿರಾಕ್ಷೇಪಣಾ ದೃಢೀಕರಣಪತ್ರ | ತಹಸೀಲ್ದಾರ್ | 21 |
| 99 | ಭೂಸುಧಾರಣೆ ಕಾಯ್ದೆಯಡಿ ನಿರಾಕ್ಷೇಪಣಾ ಪತ್ರ | | |
| 100 | ಸಾಮಾನ್ಯ ಭೂ ಮಂಜೂರಾತಿಯಡಿ ನಿರಾಕ್ಷೇಪಣಾ ಪತ್ರ | | |
| 101 | ಪೆಟ್ರೋಲ್ ಪಂಪ್ ಸ್ಥಾಪಿಸಲು ಅನುಮೋದನೆ | ಜಿಲ್ಲಾಧಿಕಾರಿ | 60 |
| 102 | ಶಸ್ತ್ರಾಸ್ತ್ರ ಪರವಾನಗಿ ನೀಡುವುದು | | 55 |
| 103 | ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ | ಉಪ ತಹಸೀಲ್ದಾರ್/ ತಹಸೀಲ್ದಾರ್ | 70 |
| 104 | ನಿರ್ಗತಿಕ ವಿಧವಾ ವೇತನ | | |
| 105 | ವಿಕಲಚೇತನರ ವೇತನ | | |
| 106 | ಸಂಧ್ಯಾ ಸುರಕ್ಷಾ ವೇತನ | | |

## 5 ಒಳಾಡಳಿತ (ಪೊಲೀಸ್) ಇಲಾಖೆ

| | | | |
|---|---|---|---|
| 107 | ಫಿರ್ಯಾದುದಾರರಿಗೆ ಎಫ್‌ಐಆರ್ ಪ್ರತಿ ನೀಡುವುದು | ಎಸ್.ಹೆಚ್.ಓ | ತಕ್ಷಣ |
| 108 | ಧ್ವನಿವರ್ಧಕಕ್ಕೆ ಪರವಾನಗಿ | ಎಸ್.ಹೆಚ್.ಓ / ಸಿ.ಪಿ.ಐ / ಎಸ್.ಡಿ.ಪಿ.ಓ ಅಡಿಷನಲ್ ಎಸ್.ಪಿ. / ಜ್ಯೂರಿಡಿಕ್ಷನಲ್ ಡಿ.ಸಿ.ಪಿ. ಬೆಂಗಳೂರು ನಗರ / ಡಿಸಿಪಿ (ಎಲ್&ಓ) ಬೇರೆ ಕಮಿಷನರೇಟ್ಸ್‌ನಲ್ಲಿ | 3 |
| 109 | ವಿನೋದಾವಳಿಗಳಿಗೆ ಪರವಾನಗಿ ನಿರಾಕ್ಷೇಪಣಾ ಪತ್ರ | ಎಸ್.ಹೆಚ್.ಓ/ ಸಿ.ಪಿ.ಐ/ ಎಸ್.ಡಿ.ಪಿ.ಓ/ ಎ.ಎ.ಓ / ಡಿ.ಪಿ.ಓಗಳಲ್ಲಿ ಎ.ಓ/ ಎ.ಎ.ಓ ಕಮಿಷನರೇಟ್ಸ್‌ನಲ್ಲಿ | 15 |
| 110 | ಶಾಂತಿಯುತ ಸಭೆ ಮತ್ತು ಮೆರವಣಿಗೆಗೆ ಅನುಮತಿ | | |
| 111 | ವಸತಿ ಪರ್ಮಿಟ್ ವಿಸ್ತರಣೆಗೆ ನಿರಾಕ್ಷೇಪಣಾ ಪತ್ರ | ಪಿ.ಐ(ಡಿಎಸ್‌ಬಿ)ಡಿ.ಪಿ.ಓಗಳಲ್ಲಿ | 7 |
| | | ಎಸಿಪಿ / ಪಿ.ಐ.(ಸಿಎಸ್‌ಬಿ) ಕಮಿಷನರೇಟ್ಸ್‌ನಲ್ಲಿ | |
| 112 | ದೂರು ಅರ್ಜಿಗಳ ವಿಲೇವಾರಿ | ಎಸ್‌ಹೆಚ್‌ಓ / ಸಿಪಿಐ / ಎಸ್‌ಡಿಪಿಓ / ಎಸಿಪಿ / ಎಸ್‌ಪಿ / ಜ್ಯೂರಿಡಿಕ್ಷನಲ್ ಡಿಸಿಪಿ | 45 |
| 113 | ಭಾರತಕ್ಕೆ ಹಿಂದಿರುಗಲು ನಿರಾಕ್ಷೇಪಣಾ ಪತ್ರ | ಜಿಲ್ಲೆಯ ವಿಶೇಷ ವಿಭಾಗದ ಪಿಐ, ಕಮಿಷನರೇಟ್ಸ್‌ಗಳಲ್ಲಿ ಪಿಐ/ ಎಸಿಪಿ | 20 |
| 114 | ಪಾಸ್‌ಪೋರ್ಟ್ ಸತ್ಯಾಪನೆಗಾಗಿ ನಿರಾಕ್ಷೇಪಣಾ ಪತ್ರ | ಪಿಐ(ಡಿಎಸ್‌ಬಿ) ಜಿಲ್ಲೆಗಳಲ್ಲಿ / ಎಸಿಪಿ / ಪಿಐ, (ಸಿಎಸ್‌ಬಿ) ಕಮಿಷನರೇಟ್ಸ್‌ಗಳಲ್ಲಿ | |
| 115 | ಸೇವಾ ಸತ್ಯಾಪನೆ | ಪಿಐ (ಡಿಎಸ್‌ಬಿ)ಜಿಲ್ಲೆಗಳಲ್ಲಿ | |
| | | ಎಸಿಪಿ / ಪಿಐ, (ಸಿಎಸ್‌ಬಿ)ಕಮಿಷನರೇಟ್ಸ್‌ಗಳಲ್ಲಿ | 45 |
| 116 | ಪೆಟ್ರೋಲ್‌ಪಂಪ್, ಗ್ಯಾಸ್‌ಏಜೆನ್ಸಿ, ಹೋಟೆಲ್ ಬಾರ್ ಇತ್ಯಾದಿಗಳಿಗೆ ನಿರಾಕ್ಷೇಪಣಾ ಪತ್ರ | ಎಎಓ ಜಿಲ್ಲೆಗಳಲ್ಲಿ ಎಓ / ಎಎಓ ಕಮಿಷನರೇಟ್ಸ್‌ಗಳಲ್ಲಿ | 7 |
| 117 | ಶಸ್ತ್ರಾಸ್ತ್ರಗಳ ಪರವಾನಗಿ ಸತ್ಯಾಪನೆ | ಎಸ್‌ಹೆಚ್‌ಓ ಜಿಲ್ಲೆಗಳಲ್ಲಿ / ಎಓ / ಎಎಓ ಕಮಿಷನರೇಟ್ಸ್‌ಗಳಲ್ಲಿ | 30 |
| 118 | ದಾಖಲೆಗಳು, ಮೊಬೈಲ್ ಫೋನ್ ಇತ್ಯಾದಿ ಕಳುವಾಗಿರುವ ಬಗ್ಗೆ ದೂರು | ಎಸ್‌ಹೆಚ್‌ಓ | 1 |
| 119 | ಮನೆ ಕೆಲಸದವರು, ಗೃಹ ನಿರ್ವಹಣೆ ಕೆಲಸದವರುಗಳ ಚಾರಿತ್ರ್ಯ ಬಗ್ಗೆ ಪೊಲೀಸ್ ತಪಾಸಣೆ ದೃಢೀಕರಣಪತ್ರ | ಜಿಲ್ಲೆಗಳಲ್ಲಿ ಪಿಐ, ಡಿಎಸ್‌ಬಿ ಎಸಿಪಿ ಪಿಐ, ಸಿಎಸ್‌ಬಿ ಕಮಿಷನರೇಟ್ಸ್‌ಗಳಲ್ಲಿ | 20 |
| 120 | ಸಂಘಸಂಸ್ಥೆಗಳಿಗೆ ಪೊಲೀಸ್ ನಿರಾಕ್ಷೇಪಣಾ ಪತ್ರ | ಪಿಐ(ಡಿಎಸ್‌ಬಿ)ಜಿಲ್ಲೆಗಳಲ್ಲಿ / ಎಸಿಪಿ ಪಿಐ, ಸಿಎಸ್‌ಬಿ ಕಮಿಷನರೇಟ್ಸ್‌ಗಳಲ್ಲಿ | |
| 121 | ವಿವಾಹ ಸಂಬಂಧದ ಬಗ್ಗೆ ಪೊ.ನಿ.ಪ | | |
| 122 | ತರಬೇತಿ, ಶಿಷ್ಯವೃತ್ತಿಯ ಬಗ್ಗೆ ಪೊ.ನಿ.ಪ | | |
| 123 | ಕೂಲಿ, ಹಮಾಲಿ, 4ನೇ ದರ್ಜೆ, ಭದ್ರತಾ ಸಿಬ್ಬಂದಿ, ವಿಮಾನ ನಿಲ್ದಾಣದ ಸಿಬ್ಬಂದಿಗಳಿಗೆ ಪೊ.ನಿ.ಪ. | | |
| 124 | ಕೇಂದ್ರ / ರಾಜ್ಯ ಸರ್ಕಾರದ ನೌಕರರಿಗೆ ಪೊ.ನಿ.ಪ | | |
| 125 | ಉನ್ನತ ವ್ಯಾಸಂಗಕ್ಕಾಗಿ ವಿದೇಶಗಳಿಗೆ ತೆರಳಲು ಪೊ.ನಿ.ಪ. (ಶಿಕ್ಷಣಕ್ಕಾಗಿ ವೀಸಾ) | | |
| 126 | ಬೆರಳು ಮುದ್ರೆ ದೃಢೀಕರಣಪತ್ರ | ಜಿಲ್ಲೆಗಳಲ್ಲಿ ಪಿಐ, ಡಿಎಸ್‌ಬಿ ಎಸಿಪಿ ಪಿಐ, ಸಿಎಸ್‌ಬಿ ಕಮಿಷನರೇಟ್ಸ್‌ಗಳಲ್ಲಿ | |
| 127 | ಟಿಬೇಟಿಯನ್ನರಿಗೆ ಭಾರತಕ್ಕೆ ವಾಪಸ್ಸಾಗಲು ನಿರಾಕ್ಷೇಪಣಾ ಪತ್ರ | | |
| 128 | ಬೆಂಕಿ ಆಕಸ್ಮಿಕದ ತುರ್ತು ಕರೆಗಳಿಗೆ ಪ್ರತಿಕ್ರಿಯೆ | ಅಗ್ನಿಶಾಮಕ ಠಾಣಾಧಿಕಾರಿ | 1 ಗಂಟೆ (ಪ್ರಯಾಣದ ಅವಧಿ ಹೊರತಾಗಿ) |
| 129 | ಅಪಘಾತ, ನೈಸರ್ಗಿಕ ವಿಪತ್ತು ರಕ್ಷಣಾ ಕಾರ್ಯ ಮತ್ತು ನಿರ್ವಹಣೆಯ ತುರ್ತುಕರೆಗಳಿಗೆ ಪ್ರತಿಕ್ರಿಯೆ | | |

## 6 ಶಿಕ್ಷಣ ಇಲಾಖೆ

| | | | |
|---|---|---|---|
| I. | ಪದವಿ ಪೂರ್ವ ಶಿಕ್ಷಣ ಇಲಾಖೆ | | |
| 130 | ಉತ್ತರ ಪತ್ರಿಕೆಗಳ ನಕಲು ಪ್ರತಿಗಳು | ಉಪ ನಿರ್ದೇಶಕರು(ಪರೀಕ್ಷೆಗಳು) ಪದವಿಪೂರ್ವ ಶಿಕ್ಷಣ ಇಲಾಖೆ | 15 |
| 131 | ಉತ್ತರ ಪತ್ರಿಕೆಗಳ ಮರು ಎಣಿಕೆ | | 10 |
| 132 | ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ | | 30 |
| 133 | ನಕಲು ಅಂಕಪಟ್ಟಿ ನೀಡುವಿಕೆ | | 15 |
| 134 | ಹೊಸ ಶೈಕ್ಷಣಿಕ ಸಂಸ್ಥೆಗಳ ನೋಂದಣಿಗಾಗಿ ಅರ್ಜಿ | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ | 60 |
| 135 | ನೋಂದಣಿಯ ನವೀಕರಣ | ಉಪ ನಿರ್ದೇಶಕರು (ನೋಂದಣಿ) | 90 |
| II. | ಸಾರ್ವಜನಿಕ ಶಿಕ್ಷಣ ಆಯುಕ್ತರು | | |
| 136 | ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಮರುಎಣಿಕೆ | ಡಿಡಿಪಿಐ ಎಸ್‌ಎಸ್‌ಎಲ್‌ಸಿ ಬೋರ್ಡ್ | 15 |
| 137 | ಪರೀಕ್ಷಾ ಪತ್ರಿಕೆಗಳ ಮರುಮೌಲ್ಯಮಾಪನ | | 30 |
| 138 | ನಕಲು ಅಂಕಪಟ್ಟಿ / ತಾತ್ಕಾಲಿಕ ಅಂಕಪಟ್ಟಿ ನೀಡುವುದು | ಡಿಡಿಪಿಐ / ಜಿಡಿ / ಡಿಡಿಪಿಐ, ಎಸ್‌ಎಸ್‌ಎಲ್‌ಸಿ ಬೋರ್ಡ್ | |
| 139 | ಹೊಸ ಶೈಕ್ಷಣಿಕ ಸಂಸ್ಥೆಗಳ ನೋಂದಣಿಗಾಗಿ ಅರ್ಜಿ ವಿಲೆ | 1–5ನೇ ತರಗತಿ ಡಿಡಿಪಿಐ / 6–7ನೇ ತರಗತಿ (ಆಂಗ್ಲ ಮಾಧ್ಯಮ ಹೊರತುಪಡಿಸಿ)ಡಿಡಿಪಿಐ(ಆಡಳಿತ) 6–7ನೇತರಗತಿ (ಆಂಗ್ಲ ಮಾಧ್ಯಮ) ಡಿಪಿಪಿ(ಪ್ರಾಥಮಿಕ) | 90 |
| 140 | ಮಾನ್ಯತೆ | 1–7ನೇ ತರಗತಿ, ಬಿಇಓ 8–10ನೇ ತರಗತಿ, ಡಿಡಿಪಿಐ(ಆಡಳಿತ) | 60 |
| 141 | ಮಾನ್ಯತೆ ನವೀಕರಣ | | |
| 142 | ಡಿ.ಎಡ್. / ಕೆ.ಒ.ಎಸ್. ಪರೀಕ್ಷೆಗಳ ಅಂಕಗಳ ಮರು ಎಣಿಕೆ | ಹಿರಿಯ ಸಹಾಯಕ, ನಿರ್ದೇಶಕರು (ಡಿಎಡ್ ಪರೀಕ್ಷೆ), ಇತರೆ ಪರೀಕ್ಷೆಗಳ ವಿಭಾಗ, ಕೆಎಸ್‌ಇಇಬಿ, ಬೆಂ. | 15 |
| | ವಾಣಿಜ್ಯ, ಹಿಂದಿ ಶಿಕ್ಷಕ್, ಅರೇಬಿಕ್, ಚಲನಚಿತ್ರ ನಟನೆ, ರಂಗಶಿಕ್ಷಣ, ಸಂಸ್ಕೃತ ಪರೀಕ್ಷೆಗಳು | ಹಿರಿಯ ಸಹಾಯಕ, ನಿರ್ದೇಶಕರು (ವಾಣಿಜ್ಯ ಪರೀಕ್ಷೆ), ಇತರೆ ಪರೀಕ್ಷೆಗಳ ವಿಭಾಗ, ಕೆಎಸ್‌ಇಇಬಿ, ಬೆಂ. | |
| | ಡಿ.ಪಿ.ಇಡಿ, ಸಂಗೀತ, ಚಿತ್ರಕಲೆ ಪರೀಕ್ಷೆಗಳು | ಸಹಾಯಕ ನಿರ್ದೇಶಕರು (ಡಬ್ಲ್ಯೂ ಶಾಖೆ) ಇತರೆ ಪರೀಕ್ಷೆಗಳು, ಕೆಎಸ್‌ಇಇಬಿ, ಬೆಂ. | |
| 143 | ಡಿ.ಎಡ್. / ಕೆ.ಒ.ಎಸ್. ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ | ಮೇಲ್ಕಂಡ ಕ್ರ.ಸಂ.142ರಲ್ಲಿದ್ದಂತೆ | 30 |
| | ಮೇಲ್ಕಂಡ ಕ್ರ.ಸಂ.142ರಲ್ಲಿದ್ದಂತೆ | ಮೇಲ್ಕಂಡ ಕ್ರ.ಸಂ.142ರಲ್ಲಿದ್ದಂತೆ | |
| | ಮೇಲ್ಕಂಡ ಕ್ರ.ಸಂ.142ರಲ್ಲಿದ್ದಂತೆ | ಮೇಲ್ಕಂಡ ಕ್ರ.ಸಂ.142ರಲ್ಲಿದ್ದಂತೆ | |
| 144 | ಡಿ.ಎಡ್. / ಕೆ.ಒ.ಎಸ್. ಉತ್ತರ ಪತ್ರಿಕೆಗಳ ನಕಲು ಅಂಕಪಟ್ಟಿ | ಮೇಲ್ಕಂಡ ಕ್ರ.ಸಂ.142ರಲ್ಲಿದ್ದಂತೆ | |
| | ಮೇಲ್ಕಂಡ ಕ್ರ.ಸಂ.142ರಲ್ಲಿದ್ದಂತೆ | ಮೇಲ್ಕಂಡ ಕ್ರ.ಸಂ.142ರಲ್ಲಿದ್ದಂತೆ | |
| | ಮೇಲ್ಕಂಡ ಕ್ರ.ಸಂ.142ರಲ್ಲಿದ್ದಂತೆ | ಮೇಲ್ಕಂಡ ಕ್ರ.ಸಂ.142ರಲ್ಲಿದ್ದಂತೆ | |
| 145 | ಕೆ.ಒ.ಎಸ್. ಪರೀಕ್ಷೆಗೆ ವಲಸೆ ಪ್ರಮಾಣಪತ್ರ | ಮೇಲ್ಕಂಡ ಕ್ರ.ಸಂ.142ರಲ್ಲಿದ್ದಂತೆ | 15 |
| 146 | ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ವಲಸೆ ಪ್ರಮಾಣಪತ್ರ | ಉಪ ನಿರ್ದೇಶಕರು (ಆಡಳಿತ) ಕೆಎಸ್‌ಇಇಬಿ, ಬೆಂ. | |
| 147 | ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಜನನ ಪ್ರಮಾಣಪತ್ರ | | |

# ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ –2011 ಇಂದು... ನಾಳೆ... ಇನ್ನಿಲ್ಲ – ಹೇಳಿದ ದಿನ ತಪ್ಪೊಲ್ಲ

ಸಕಾಲ

### III. ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

| | | | |
|---|---|---|---|
| 148 | "ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆ" ಅ) ಹೆಸರು ಬದಲಾವಣೆ (ಆ) ವಿಮೆ ಸಂಬಂಧಿಸಿದ ಪ್ರಕಟಣೆ (ಇ) ನ್ಯಾಯಾಲಯದಿಂದ ಹೊರಡಿಸುವ ಕೆಲವು ಪ್ರಕಟಣೆಗಳು, ಉಳಿದ ಪ್ರಕಟಣೆಗಳು, ಸರ್ಕಾರದ ವ್ಯವಹಾರಕ್ಕೆ ಸಂಬಂಧಿಸಿದ ಪ್ರಕಟಣೆಗಳು | ಸಹಾಯಕ ನಿರ್ದೇಶಕರು ಸರ್ಕಾರಿ ಕೇಂದ್ರ ಮುದ್ರಣಾಲಯ ಯೂನಿಟ್–2 ಬೆಂಗಳೂರು – 59 | 15 |

## 7 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

### I. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

| | | | |
|---|---|---|---|
| 149 | ಅಶಕ್ತ ಪ್ರಮಾಣಪತ್ರವನ್ನು ನೀಡುವುದು | (ಅ) ತಾಲ್ಲೂಕು ವೈದ್ಯಕೀಯ ಮಂಡಳಿ (ಆ) ಜಿಲ್ಲಾ ವೈದ್ಯಕೀಯ ಮಂಡಳಿ | 30 |
| 150 | ಗಾಯದ (ಸಣ್ಣ ಪ್ರಮಾಣ) ಪ್ರಮಾಣಪತ್ರ ನೀಡುವುದು | ವೈದ್ಯಾಧಿಕಾರಿ | 3 |
| 151 | ಬಿಡುಗಡೆ ಮತ್ತು ಸಂತಾನಹರಣ ಶಸ್ತ್ರಚಿಕಿತ್ಸೆಯ ಪ್ರಮಾಣಪತ್ರ ನೀಡುವುದು | | 1 |
| 152 | ವಯೋಪ್ರಮಾಣಪತ್ರ ನೀಡುವುದು (ತಜ್ಞರ ಅಭಿಪ್ರಾಯ ಅವಶ್ಯಕತೆ ಇಲ್ಲದ) | | 3 |

### II. ಔಷಧಗಳ ನಿಯಂತ್ರಣ ಇಲಾಖೆ

ಮೆಡಿಕಲ್ ಸ್ಟೋರ್‌ಗಳು /ಕೆಮಿಸ್ಟ್ ಮತ್ತು ಡ್ರಗಿಸ್ಟ್‌ಗಳ ಸ್ಥಾಪನೆಗಾಗಿ ಪರವಾನಗಿಯನ್ನು ನೀಡುವುದು/ನವೀಕರಣ

| | | | |
|---|---|---|---|
| 153 | ಪರವಾನಗಿ ನೀಡುವುದು | ಸಹಾಯಕ ಔಷಧಿಗಳ ನಿಯಂತ್ರಕರು | 30 |
| 154 | ಪರವಾನಗಿ ನವೀಕರಣ | | |
| 155 | ನೋಂದಣಿಯಾದ ಫಾರ್ಮಾಸಿಸ್ಟ್ ಸೇರಿಸುವ / ಬಿಟ್ಟುಬಿಡುವ ಬದಲಾವಣೆ | | 7 |
| 156 | ಸಕ್ಷಮ ವ್ಯಕ್ತಿಯ ಸೇರಿಸುವ / ಬಿಟ್ಟುಬಿಡುವ ಬದಲಾವಣೆ | | |
| 157 | ಹೆಸರು ಬದಲಾವಣೆ | | |

### III. ಆಯುಷ್ ಇಲಾಖೆ

| | | | |
|---|---|---|---|
| 158 | ವೈದ್ಯಕೀಯ ಪ್ರಮಾಣಪತ್ರ (ಅ) ಚಿಕಿತ್ಸಾಲಯ/ಆಸ್ಪತ್ರೆ ಮಟ್ಟದಲ್ಲಿ | ವೈದ್ಯಾಧಿಕಾರಿ | 5 |
| | ಆ) ಬೋಧಕ ಕಾಲೇಜು /ಆಸ್ಪತ್ರೆ ಮಟ್ಟದಲ್ಲಿ | ಸ್ಥಾಯಿ ವೈದ್ಯಾಧಿಕಾರಿಗಳು | |
| 159 | ವೈದ್ಯಕೀಯ ಪ್ರಮಾಣಪತ್ರ | ವೈದ್ಯಾಧಿಕಾರಿ/ಸ್ಥಾಯಿ ವೈದ್ಯಾಧಿಕಾರಿಗಳು | |
| 160 | ಡ್ರಗ್ಸ್ ಸ್ಟೋರ್‌ನ ಸ್ಥಾಪನೆಗಾಗಿ ಪರವಾನಗಿ | ಔಷಧಿಗಳ ಲೈಸನ್ಸಿಂಗ್ ಪ್ರಾಧಿಕಾರ | 30 |
| | ಕಾರ್ಯನಿರ್ವಹಣೆ ಮತ್ತು ಅಪರಾಧ ನಿರ್ಣಯವಾಗದ ಪ್ರಮಾಣಪತ್ರ | | |

## 8 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

### ಗ್ರಾಮ ಪಂಚಾಯತ್

| | | | |
|---|---|---|---|
| 161 | ಕರ ನಿರ್ಧರಣಾ ಪಟ್ಟಿಯ ಬದಲಾವಣೆ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಕಾರ್ಯದರ್ಶಿ, ಗ್ರಾಮ ಪಂಚಾಯತ್ | 45 |
| 162 | ಕಟ್ಟಡ ಪರವಾನಗಿ | | 60 |
| 163 | ಸಾಮಾನ್ಯ /ವಾಣಿಜ್ಯ ಪರವಾನಗಿ | | 45 |
| 164 | ಕುಡಿಯುವ ನೀರು ಬೋರ್‌ವೆಲ್ ದುರಸ್ತಿಗಳ /ನಿರ್ವಹಣೆ | | 3 |
| 165 | ಬೀದಿ ದೀಪಗಳು – ಸಣ್ಣ ಪ್ರಮಾಣದ ದುರಸ್ತಿಗಳ ನಿರ್ವಹಣೆ | | |
| 166 | ಗ್ರಾಮ ನೈರ್ಮಲ್ಯ ನಿರ್ವಹಣೆ | | 7 |
| 167 | ವಿವಿಧ ದಾಖಲಾತಿಗಳ ನೀಡಿಕೆ | | 30 |
| 168 | ಕೌಶಲ್ಯರಹಿತ ಕಾರ್ಮಿಕರಿಗೆ ಉದ್ಯೋಗ ಒದಗಿಸುವುದು (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮ) ನರೇಗ | | 15 |
| 169 | ಎಸ್ಕಾಂಗೆ ನಿರಾಕ್ಷೇಪಣಾ ಪ್ರಮಾಣಪತ್ರ | | 45 |
| 170 | ಕಾಮಗಾರಿ ನಿರ್ವಹಿಸಿದ್ದಕ್ಕಾಗಿ ಇ–ಪಾವತಿ | | 15 |
| 171 | ನರೇಗ ಅನ್ವಯ ನೋಂದಣಿ ಮತ್ತು ಉದ್ಯೋಗ ಚೀಟಿಗಳ ನೀಡಿಕೆ | ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯತ್ | 30 |

## 9 ಆರ್ಥಿಕ ಇಲಾಖೆ [ವಾಣಿಜ್ಯ ತೆರಿಗೆ ಇಲಾಖೆ]

| | | | |
|---|---|---|---|
| 172 | ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ರ ಅನ್ವಯ ನೋಂದಣಿ | ಅಧಿಕಾರ ವ್ಯಾಪ್ತಿ ಸ್ಥಳೀಯ ವ್ಯಾಟ್ ಅಧಿಕಾರಿ (ಎಲ್‌ವಿಒ)/ ವ್ಯಾಟ್ ಉಪ ಅಧಿಕಾರಿ (ವಿಎಸ್‌ಒ) | 25 |
| 173 | ಕೆವಿಎಟಿಎ 2003ರನ್ವಯ ತೀರುವಳಿ ಪ್ರಮಾಣಪತ್ರ | | 15 |
| 174 | ಕೇಂದ್ರ ಮಾರಾಟಗಳ ತೆರಿಗೆ ಅಧಿನಿಯಮದಡಿ ನೋಂದಣಿ | | 25 |
| 175 | ಸಿಎಸ್‌ಟಿಎ ಅನ್ವಯ 'ಸಿ' ನಮೂನೆಗಳು | | 10 |
| 176 | ಸಿಎಸ್‌ಟಿಎ ಅನ್ವಯ 'ಹೆಚ್' ನಮೂನೆಗಳು | | |
| 177 | ಸಿಎಸ್‌ಟಿಎ ಅನ್ವಯ 'ಎಫ್' ನಮೂನೆಗಳು | | |
| 178 | ಸಿಎಸ್‌ಟಿಎ ಅನ್ವಯ 'ಇ–I & ಇ–II' ನಮೂನೆಗಳು | | |
| 179 | ಕರ್ನಾಟಕ ವಿಲಾಸಿ ತೆರಿಗೆ ಕಾಯ್ದೆ 1979ರ ಅನ್ವಯ ನೋಂದಣಿ | ಜೆಸಿಸಿಟಿ /ಎಲ್‌ಟಿಒ/ ಎಲ್‌ವಿಒ /ವಿಎಸ್‌ಒ | 25 |
| 180 | ಕರ್ನಾಟಕ ಮನರಂಜನಾ ತೆರಿಗೆ ಕಾಯ್ದೆ 1958ರ ಅನ್ವಯ ಅನುಮತಿ | ಇಟಿಒ /ಸಿಟಿಒ ಎಲ್‌ವಿಒ /ವಿಎಸ್‌ಒ | |
| 181 | ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಅರ್ಜೀವಿಕೆಗಳು ಮತ್ತು ನಿಯೋಜನೆಗಳ ಮೇಲಿನ ತೆರಿಗೆ ಅಧಿನಿಯಮ 1976ರನ್ವಯ ನೋಂದಣಿ | ವೃತ್ತಿ ತೆರಿಗೆ ಅಧಿಕಾರಿ (ಪಿಟಿಒ) /(ಸಿಟಿಒ) ಎಲ್‌ವಿಒ /ವಿಎಸ್‌ಒ | |

## 10 ಕಾರ್ಮಿಕ ಇಲಾಖೆ

| | | | |
|---|---|---|---|
| 182 | ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆಗಳ ಕಾಯ್ದೆ 1961ರನ್ವಯ ನೋಂದಣಿ | ಕಾರ್ಮಿಕ ಪರಿವೀಕ್ಷಕರು/ ಹಿರಿಯ ಕಾರ್ಮಿಕ ಪರಿವೀಕ್ಷಕರು | 15 |
| 183 | ನೋಂದಣಿಯ ನವೀಕರಣ | | |
| 184 | ಗುತ್ತಿಗೆ ಕಾರ್ಮಿಕರ ಕಾಯ್ದೆ 1970ರನ್ವಯ ಪ್ರಧಾನ ನಿಯೋಜಕರ (ನಿಯಂತ್ರಣ ಮತ್ತು ನಿಷೇಧ) ನೋಂದಣಿ | ಸಹಾಯಕ ಕಾರ್ಮಿಕ ಆಯುಕ್ತರು | |
| 185 | ಗುತ್ತಿಗೆದಾರರಿಗೆ ಪರವಾನಗಿ | | |
| 186 | ಪರವಾನಗಿಯ ನವೀಕರಣ | | |
| 187 | ಕಟ್ಟಡ ಮತ್ತು ಇತರೆ ಕಟ್ಟಡ ಕಾರ್ಮಿಕರ (ನಿಯೋಜನೆಯ ನಿಯಂತ್ರಣ ಮತ್ತು ಷರತ್ತುಗಳು) ಕಾಯ್ದೆ 1996ರನ್ವಯ ಸ್ಥಾಪನೆಯ ನೋಂದಣಿ | ಕಾರ್ಮಿಕ ಅಧಿಕಾರಿ | |
| 188 | ಕಟ್ಟಡ ಮತ್ತು ಇತರೆ ಕಟ್ಟಡ ಕಾರ್ಮಿಕರ ನೋಂದಣಿ | ಕಾರ್ಮಿಕ ಪರಿವೀಕ್ಷಕರು / ಹಿರಿಯ ಕಾರ್ಮಿಕ ಪರಿವೀಕ್ಷಕರು/ ಕಾರ್ಮಿಕ ಅಧಿಕಾರಿ | |
| 189 | ನೆಡುತೋಪು ಕಾರ್ಮಿಕರ ಕಾಯ್ದೆ 1951ರ ಅನ್ವಯ ನೆಡುತೋಪುಗಳ ನೋಂದಣಿ | ಕಾರ್ಮಿಕ ಅಧಿಕಾರಿ | |
| 190 | ಟ್ರೇಡ್ ಯೂನಿಯನ್ ಕಾಯ್ದೆ 1926ರನ್ವಯ ನೋಂದಣಿ | ಸಹಾಯಕ ಕಾರ್ಮಿಕ ಆಯುಕ್ತರು | |
| 191 | ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆ 1961ರನ್ವಯ ನೋಂದಣಿ | | |
| 192 | ಅಂತರರಾಜ್ಯ ವಲಸೆ ಕೆಲಸಗಾರರ (ನಿಯೋಜನೆಯ ನಿಯಂತ್ರಣ ಮತ್ತು ಸೇವಾ ಷರತ್ತುಗಳು)ಕಾಯ್ದೆ 1979ರನ್ವಯ ನೋಂದಣಿ | | |
| 193 | ಅಂತರರಾಜ್ಯ ವಲಸೆ ಕೆಲಸಗಾರರ (ನಿಯೋಜನೆಯ ನಿಯಂತ್ರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1980ರನ್ವಯ ಪರವಾನಗಿ | | |
| 194 | ಬೀಡಿ ಮತ್ತು ಸಿಗಾರ್ (ನಿಯೋಜನೆಯ ಷರತ್ತುಗಳು) ಕಾರ್ಮಿಕರ ಕಾಯ್ದೆ 1966ರನ್ವಯ ಪರವಾನಗಿ ಕೈಗಾರಿಕಾ ಆವರಣಗಳಿಗೆ ಪರವಾನಗಿ | | 7 |

### I. ಇಎಸ್‌ಐಎಸ್(ವೈದ್ಯಕೀಯ) ಸೇವೆಗಳ ನಿರ್ದೇಶನಾಲಯ

#### 1. ಔಷಧಾಲಯ ಹಂತ

| | | | |
|---|---|---|---|
| 195 | ಒಳರೋಗಿಗಳ ವೈದ್ಯಕೀಯ ಮರುಪಾವತಿ ಬಿಲ್ಲುಗಳ ಸಲ್ಲಿಕೆ | ಆಡಳಿತಾತ್ಮಕ ವೈದ್ಯಕೀಯ ಅಧಿಕಾರಿ | 15 |

#### 2. ಆಸ್ಪತ್ರೆಯ ಹಂತ

| | | | |
|---|---|---|---|
| 196 | ವೈದ್ಯಕೀಯ ಮರುಪಾವತಿ ಬಿಲ್ಲಿನ ಮಂಜೂರಾತಿ | ವೈದ್ಯಕೀಯ ಅಧೀಕ್ಷಕರು ಇಎಸ್‌ಐ ಆಸ್ಪತ್ರೆಗಳು/ ಡಯಾಗ್ನಸ್ಟಿಕ್ ಕೇಂದ್ರ | 60 |
| 197 | ನಿರ್ದೇಶನಾಲಯ /ಇಎಸ್‌ಐಸಿಗೆ ಸೂಪರ್‌ಸ್ಪೆಷಾಲಿಟಿ ವೈದ್ಯಕೀಯ ಮರುಪಾವತಿ ಬಿಲ್ಲಿನ ಸಲ್ಲಿಕೆ | ಆಡಳಿತಾತ್ಮಕ ವೈದ್ಯಕೀಯ ಅಧಿಕಾರಿ/ ವೈದ್ಯಕೀಯ ಅಧೀಕ್ಷಕರು, ಇಎಸ್‌ಐ ಆಸ್ಪತ್ರೆಗಳು /ಡಯಾಗ್ನಸ್ಟಿಕ್ ಕೇಂದ್ರ | 30 |
| 198 | ಇಎಸ್‌ಐಸಿಗೆ ಸೂಪರ್‌ಸ್ಪೆಷಾಲಿಟಿ ಚಿಕಿತ್ಸೆಗಾಗಿ ಶೇವಣಿಯ ಮಂಜೂರಾತಿಗೆ ಸಲ್ಲಿಕೆ | ವೈದ್ಯಕೀಯ ಅಧೀಕ್ಷಕರು, ಇಎಸ್‌ಐ ಆಸ್ಪತ್ರೆಗಳು / ಡಯಾಗ್ನಸ್ಟಿಕ್ ಕೇಂದ್ರ | 3 |

#### 3. ನಿರ್ದೇಶನಾಲಯ ಹಂತ

| | | | |
|---|---|---|---|
| 199 | ವೈದ್ಯಕೀಯ ಮರುಪಾವತಿ ಬಿಲ್ಲಿನ ಮಂಜೂರಾತಿ | ಸಂಬಂಧಪಟ್ಟ ವೈದ್ಯಕೀಯ ಮರುಪಾವತಿ ವಿಭಾಗದ ಕಚೇರಿ ಅಧೀಕ್ಷಕರುಗಳು | 60 |

### II. ಕಾರ್ಖಾನೆಗಳು, ಬಾಯ್ಲರ್‌ಗಳು ಮತ್ತು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

| | | | |
|---|---|---|---|
| 200 | ಕಾರ್ಖಾನೆ ಯೋಜನೆಗಳ ಅನುಮೋದನೆ | ಸಹಾಯಕ ನಿರ್ದೇಶಕರು/ ಹಿರಿಯ ಸಹಾಯಕ ನಿರ್ದೇಶಕರು/ ಉಪ ನಿರ್ದೇಶಕರು | 90 |
| 201 | ಕಾರ್ಖಾನೆಗಳ ನೋಂದಣಿ ಮತ್ತು ಪರವಾನಗಿ ವಿತರಣೆ | | |
| 202 | ಪರವಾನಗಿಯ ತಿದ್ದುಪಡಿ | | |
| 203 | ದೂರುಗಳ ವಿಲೇವಾರಿ | | 60 |
| 204 | ಬಾಯ್ಲರ್ ಮತ್ತು ಪ್ರೆಶರ್‌ಪಾರ್ಟ್ ತಯಾರಿಕೆಯ ಡ್ರಾಯಿಂಗ್ /ಸ್ಟೀಮ್ ಪೈಪ್‌ಲೈನ್ ಮತ್ತು ಪೈಪ್‌ಲೈನ್ ಡ್ರಾಯಿಂಗ್‌ಗಳ ಅನುಮೋದನೆ | ಸಹಾಯಕ ನಿರ್ದೇಶಕರು | |
| 205 | (ಅ) ಬಾಯ್ಲರ್‌ಗಳು, ಎಕನಾಮೈಸರ್‌ಗಳ ನೋಂದಣಿ (ಆ) ಸ್ಟೀಮ್ ಪೈಪ್‌ಲೈನ್‌ಗಳ ನೋಂದಣಿ | ಸಹಾಯಕ ನಿರ್ದೇಶಕರು/ ಹಿರಿಯ ಸಹಾಯಕ ನಿರ್ದೇಶಕರು/ ಉಪ ನಿರ್ದೇಶಕರು | 90 |
| 206 | ವಾರ್ಷಿಕ ಪರಿವೀಕ್ಷಣೆಯ ಮೇಲೆ ಬಾಯ್ಲರ್ ಪ್ರಮಾಣಪತ್ರ ನೀಡಿಕೆ | | 17 |
| 207 | ಪರವಾನಗಿಯ ವರ್ಗಾವಣೆ | | 90 |
| 208 | ದ್ವಿಪ್ರತಿ ಪರವಾನಗಿಯ ನೀಡಿಕೆ | | |

## 11 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

| | | | |
|---|---|---|---|
| 209 | ಅಂಗನವಾಡಿ ಕೇಂದ್ರಗಳಲ್ಲಿ 0 ಯಿಂದ 3 ವಯಸ್ಸಿನ ಮಕ್ಕಳ ನೋಂದಣಿ | ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ ಅಧಿಕಾರಿ | 3 |
| 210 | 3 ಯಿಂದ 6 ವಯಸ್ಸಿನ ಮಕ್ಕಳ ನೋಂದಣಿ | | |
| 211 | ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರ ನೋಂದಣಿ | | |
| 212 | ವಿಕಲಚೇತನ ವ್ಯಕ್ತಿಗಳಿಗೆ ಅಶಕ್ತ ಪ್ರಮಾಣಪತ್ರ ಮತ್ತು ಗುರುತಿನ ಚೀಟಿ | ಜಿಲ್ಲಾ ಅಂಗವಿಕಲ ಕಲ್ಯಾಣ ಅಧಿಕಾರಿ | 7 |
| 213 | ಹಿರಿಯ ನಾಗರಿಕರಿಗೆ ಗುರುತಿನ ಚೀಟಿ | | |

## 12 ವಸತಿ ಇಲಾಖೆ

### (ಕರ್ನಾಟಕ ಗೃಹ ಮಂಡಳಿ)

| | | | |
|---|---|---|---|
| 214 | ಕಟ್ಟಡ ನಕ್ಷೆ ಅನುಮೋದನೆ 250 ಚ.ಮೀ. ವಿಸ್ತೀರ್ಣದ ವಸತಿ ನಿವೇಶನದಲ್ಲಿ ವಸತಿ ಕಟ್ಟಡ ನಿರ್ಮಾಣಕ್ಕಾಗಿ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಯೋಜನಾ ಕಚೇರಿ ಮುಖ್ಯಸ್ಥರು | 30 |
| 215 | ಹಂಚಿಕೆಯಾದ ಆಸ್ತಿ (ಮನೆ /ನಿವೇಶನ / ಮಳಿಗೆ) ಗಳಿಕೆ ಕ್ರಯ ಪತ್ರ | | |
| 216 | ನಿವೇಶನ ಹಂಚಿಕೆ ಸಮಯದಲ್ಲಿ ಸಲ್ಲಿಸಿದ ಠೇವಣಿ ಹಣದ ಮರುಪಾವತಿ | ಲೆಕ್ಕಾಧಿಕಾರಿಗಳು | |

### ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

| | | | |
|---|---|---|---|
| 217 | ಮನೆ ದುರಸ್ತಿ ಮಾಡಿಕೊಳ್ಳಲು ನಿರಾಕ್ಷೇಪಣಾ ಪತ್ರ | ಕಾರ್ಯಪಾಲಕ ಅಭಿಯಂತರರು | 30 |
| 218 | ಮನೆ ನಿರ್ಮಿಸಿಕೊಂಡವರಿಗೆ ಹಕ್ಕುಪತ್ರ ಪಡೆದವರು ಸರ್ಕಾರದ ನಿಗದಿಪಡಿಸಿದ ಹಣ ಪಾವತಿಸಿದ ಫಲಾನುಭವಿಗಳಿಗೆ ಶುದ್ಧ ಕ್ರಯಪತ್ರ | | |
| 219 | ಮಂಡಳಿ ಮನೆಗಳ ಮೂಲ ಫಲಾನುಭವಿಗಳು ಮನೆಗಳನ್ನು ಮಾರಾಟ ಮಾಡಿದ ಪ್ರಕರಣಗಳಲ್ಲಿಹಾಲಿ ಇರುವ /ಖರೀದಿಸಿದ ನಿವಾಸಿಗೆ ಮನೆ ಹಕ್ಕು ಬದಲಾವಣೆ | ಸಹಾಯಕ ಆಯುಕ್ತರು | |

## 13 ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

| | | | |
|---|---|---|---|
| 220 | ಬೋಟುಗಳ ನೋಂದಣಿ /ಪರವಾನಗಿ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಶ್ರೇಣಿ–II | 15 |
| 221 | ಜಲಾಶಯದಲ್ಲಿ ಮೀನುಗಾರಿಕೆಗೆ ಪರವಾನಗಿ | ಮೀನುಗಾರಿಕೆ ಸಹಾಯಕ ನಿರ್ದೇಶಕರು ಶ್ರೇಣಿ–I&II | 10 |
| 222 | ಮೀನು ಪಾಶುವಾರು ವಿಲೇವಾರಿ ಹಕ್ಕು ಆದೇಶವನ್ನು ಜಿಲ್ಲಾಮಟ್ಟದ ಅಧಿಕಾರಿ ವ್ಯಾಪ್ತಿಯಲ್ಲಿ ನೀಡುವುದು | ಮೀನುಗಾರಿಕೆ ಸಹಾಯಕ ನಿರ್ದೇಶಕರು ಶ್ರೇಣಿ–II | 45 |

## 14 ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

| | | | |
|---|---|---|---|
| 223 | ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆಗಳಲ್ಲಿ ರಸ್ತೆ ಅಗೆತಕ್ಕೆ ಅನುಮತಿ | ಸಹಾಯಕ ಕಾರ್ಯಪಾಲಕ ಅಭಿಯಂತರರು | 15 |
| 224 | ಹೆದ್ದಾರಿ / ಜಿಲ್ಲಾ ಮುಖ್ಯರಸ್ತೆಗಳ ಇಕ್ಕೆಲೆಗಳಲ್ಲಿ ಜಾಹೀರಾತು ಫಲಕಗಳ ಅಳವಡಿಕೆ ಹಾಗೂ ಕಟ್ಟಡ ನಿರ್ಮಾಣಕ್ಕೆ ಅನುಮತಿ | ಹೆದ್ದಾರಿ ಪ್ರಾಧಿಕಾರಿಗಳಾದ ಕಾರ್ಯಪಾಲಕ ಅಭಿಯಂತರರು | 30 |

## 15 ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ

### (ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ)

| | | | |
|---|---|---|---|
| 225 | ಹಸಿರು ಪ್ರವರ್ಗ ಸ್ಥಾಪನಾ ಸಮ್ಮತಿಪತ್ರ ವಿಸ್ತರಣೆ ಸಮ್ಮತಿಪತ್ರ | ಪ್ರಾದೇಶಿಕ ಅಧಿಕಾರಿ | 30 |
| 226 | ಕಿತ್ತಳೆ ಪ್ರವರ್ಗ | ವಲಯ ಹಿರಿಯ ಪರಿಸರ ಅಧಿಕಾರಿ | 40 |
| 227 | ಕೆಂಪು ಪ್ರವರ್ಗ EIA ಯೋಜನೆಗಳು | ಸಂಬಂಧಪಟ್ಟ ಶಾಖಾ ಮುಖ್ಯಸ್ಥರು | 70 |
| 228 | ಕೆಂಪು ಪ್ರವರ್ಗ EIA ಯೋಜನೆಗಳು ಹೊರತುಪಡಿಸಿ (TAC ಯೋಜನೆಗಳು ಸೇರಿ) | | 100 |
| 229 | EIA ಯೋಜನೆಗಳು ಹೊರತುಪಡಿಸಿ (TAC ಯೋಜನೆಗಳು ಹೊರತುಪಡಿಸಿ) | | 120 |

## 16 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

| | | | |
|---|---|---|---|
| 230 | ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಬಂಡವಾಳ ಅಭಿವೃದ್ಧಿ ಸಬ್ಸಿಡಿ ಮಂಜೂರಾತಿ | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ | 30 |
| 231 | **ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣಪತ್ರ** | | |
| | 1. ಸಾಲ ಕರಾರು, ಕ್ರೆಡಿಟ್ ಡೀಡ್, ಅಡಮಾನ ಬಾಡಿಗೆ ಪತ್ರಗಳ ನೋಂದಣಿ (ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ ಯೋಜನೆಗಳು | ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ | 10 |
| | 2. ಕೆಐಎಲ್‌ಆರ್ ಕಾಯ್ದೆಯ 109 ಸೆಕ್ಷನ್‌ಅಡಿಯಲ್ಲಿ ಅನುಮತಿ ಪಡೆದು ಖರೀದಿಸಿದ ಭೂಮಿ ನೋಂದಣಿ | | |
| | 3. ಲೀಸ್ ಕಮ್ ಸೇಲ್ ಡೀಡ್ ನೋಂದಣಿ (dlswcc shlcc ಅನುಮೋದನೆಗೊಂಡ ಯೋಜನೆಗಳು) | ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ | 10 |
| | 4. ಶುದ್ಧ ಕ್ರಯಪತ್ರ ನೋಂದಣಿ (dlswcc/ Slswcc ಅನುಮೋದನೆಗೊಂಡ ಯೋಜನೆಗಳು) | | |
| | 5. ಸಾಲ ಕರಾರು, ಕ್ರೆಡಿಟ್ ಡೀಡ್, ಅಡಮಾನ / ಬಾಡಿಗೆ ಪತ್ರಗಳ ನೋಂದಣಿ (shlcc ಅನುಮೋದನೆಗೊಂಡ ಯೋಜನೆಗಳು) | ಜಂಟಿ ನಿರ್ದೇಶಕರು (ಕೈಗಾರಿಕಾಭಿವೃದ್ಧಿ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕೇಂದ್ರ ಕಚೇರಿ, ಬೆಂಗಳೂರು | |
| | 6. ಕೆಐಎಲ್‌ಆರ್ ಕಾಯ್ದೆಯ 109 ಸೆಕ್ಷನ್ ಅಡಿಯಲ್ಲಿ ಅನುಮತಿ ಪಡೆದು ಖರೀದಿಸಿದ ಭೂಮಿ ನೋಂದಣಿ (shlcc ಅನುಮೋದನೆಗೊಂಡ ಯೋಜನೆಗಳು) | | |
| | 7. ಲೀಸ್ ಕಮ್ ಸೇಲ್ ಡೀಡ್ ನೋಂದಣಿ (shlcc ಅನುಮೋದನೆಗೊಂಡ ಯೋಜನೆಗಳು) | | |
| | 8. ಶುದ್ಧ ಕ್ರಯಪತ್ರ ನೋಂದಣಿ (shlcc ಅನುಮೋದನೆಗೊಂಡ ಯೋಜನೆಗಳು) | | |
| 232 | **ಪ್ರವೇಶ ತೆರಿಗೆ ವಿನಾಯಿತಿ ಪ್ರಮಾಣಪತ್ರ (ETEC)** | | |
| | (1) ಹೊಸ ಘಟಕಗಳಿಗೆ | ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ | 10 |
| | (2) ವಿಸ್ತರಣಾ /ಆಧುನೀಕರಣ /ವೈವಿಧ್ಯೀಕರಣ ಘಟಕ | | |
| | (3) ಹೊಸ ಘಟಕಗಳಿಗೆ (DLSWCC/ SLSWCC ಅನುಮೋದನೆಗೊಂಡ ಯೋಜನೆಗಳು) | | |
| | (4)ವಿಸ್ತರಣಾ /ಆಧುನೀಕರಣ /ವೈವಿಧ್ಯೀಕರಣ ಘಟಕಗಳ ಅನುಷ್ಠಾನ ಹಂತ (DLSWCC/ SLSWCC ಅನುಮೋದನೆಗೊಂಡ ಯೋಜನೆಗಳು) | | |
| | (5) ಹೊಸ ಘಟಕಗಳ ಸ್ಥಾಪನಾ ಹಂತ (shlcc ಅನುಮೋದನೆಗೊಂಡ ಯೋಜನೆಗಳು) | ಜಂಟಿ ನಿರ್ದೇಶಕರು (ಕೈಗಾರಿಕಾಭಿವೃದ್ಧಿ) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕೇಂದ್ರ ಕಚೇರಿ, ಬೆಂಗಳೂರು | |
| | (6) ವಿಸ್ತರಣಾ /ಆಧುನೀಕರಣ / ವೈವಿಧ್ಯೀಕರಣ ಘಟಕ ಸ್ಥಾಪನಾ ಹಂತ | | |
| | (7) ಅನುಷ್ಠಾನ ಹಂತದ ಹೊಸ ಘಟಕಗಳಿಗೆ | | |
| | (8) ವಿಸ್ತರಣಾ /ಆಧುನೀಕರಣ / ವೈವಿಧ್ಯೀಕರಣ ಘಟಕಗಳಿಗೆ ಅನುಷ್ಠಾನ ಹಂತ (shlcc ಅನುಮೋದನೆಗೊಂಡ ಯೋಜನೆಗಳು) | | |
| 233 | **ಎಪಿಎಂಸಿ ಸೆಸ್ ವಿನಾಯಿತಿ ಪ್ರಮಾಣ ಪತ್ರ** | | |
| | (1) ಹೊಸ ಘಟಕಗಳಿಗೆ (DLSWCC/ SLSWCC ಅನುಮೋದನೆಗೊಂಡ ಯೋಜನೆಗಳು) | ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ | 10 |
| | (2) ವಿಸ್ತರಣಾ /ಆಧುನೀಕರಣ /ವೈವಿಧ್ಯೀಕರಣ ಘಟಕ (DLSWCC/ SLSWCC ಅನುಮೋದನೆಗೊಂಡ ಯೋಜನೆಗಳು) | | |
| | (3) ಹೊಸ ಘಟಕಗಳಿಗೆ (shlcc ಅನುಮೋದನೆಗೊಂಡ ಯೋಜನೆಗಳು) | ಜಂಟಿ ನಿರ್ದೇಶಕರು (ಕೈಗಾರಿಕಾಭಿವೃದ್ಧಿ) ವಾ.ಕೈ.ಇ., ಕೇಂದ್ರ ಕಚೇರಿ, ಬೆಂಗಳೂರು | |
| | (4) ವಿಸ್ತರಣಾ /ಆಧುನೀಕರಣ / ವೈವಿಧ್ಯೀಕರಣ ಘಟಕ (shlcc ಅನುಮೋದನೆಗೊಂಡ ಯೋಜನೆಗಳು) | | |
| 234 | ವಿದ್ಯುಚ್ಛಕ್ತಿ ವಿನಾಯಿತಿ ದೃಢೀಕರಣ ಪತ್ರ | ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ | 05 |
| 235 | ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ IEM ಭಾಗ –Iರ ಸ್ವೀಕೃತಿಪತ್ರ | | 01 |
| 236 | ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ IEM ಭಾಗ –IIರ ಸ್ವೀಕೃತಿಪತ್ರ | | |

## 17 ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

### ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ

| | | | |
|---|---|---|---|
| 237 | ಕಲಾವಿದರಿಗೆ ರೈಲ್ವೆ ರಿಯಾಯಿತಿ ಶಿಫಾರಸು ಪತ್ರ | ಸಹಾಯಕ ನಿರ್ದೇಶಕರು ತರಬೇತಿ | 03 |
| 238 | ಕಲಾವಿದರಿಗೆ ಗುರುತಿನ ಚೀಟಿ | | 02 |
| 239 | ಸಾಹಿತಿ, ಕಲಾವಿದರಿಗೆ ವೈದ್ಯಕೀಯ ವೆಚ್ಚ ಪಾವತಿ (ಅನುಮೋದನೆ) | | 03 |
| 240 | ನಯನ ಸಭಾಂಗಣದ ಕಾಯ್ದಿರಿಸುವಿಕೆ | ವ್ಯವಸ್ಥಾಪಕರು, ರವೀಂದ್ರ ಕಲಾಕ್ಷೇತ್ರ | 02 |
| 241 | ಪ್ರಾಯೋಜಿತ ಕಾರ್ಯಕ್ರಮ | | 03 |

### ಆ) ಪತ್ರಾಗಾರ ಇಲಾಖೆ

| | | | |
|---|---|---|---|
| 242 | ಸಾರ್ವಜನಿಕರು ಕೋರಿರುವ ಹಳೆಯ ದಾಖಲೆಗಳು, ಡಿಜಿಟೈಜೇಷನ್ ಪ್ರತಿಗಳು ಮತ್ತು ಸಂರಕ್ಷಿಸಲ್ಪಟ್ಟ ಇತರೆ ದಾಖಲಾತಿ ಪ್ರತಿಗಳು | ಸಹ ಪತ್ರ ಪಾಲಕರು | 15 |

### ಇ) ವಾರ್ತಾ ಇಲಾಖೆ

| | | | |
|---|---|---|---|
| 243 | ಚಲನಚಿತ್ರಗಳ ಚಿತ್ರೀಕರಣಕ್ಕೆ ಅನುಮತಿ (ಅ) ರಾಜ್ಯದ ಒಳಗಡೆ | ಉಪ ನಿರ್ದೇಶಕರು, ಚಲನಚಿತ್ರ ಶಾಖೆ | 15 |
| 244 | ಚಲನಚಿತ್ರಗಳಿಗೆ ಶೇ.100ರ ಮನರಂಜನಾ ತೆರಿಗೆ ವಿನಾಯಿತಿ ದೃಢೀಕರಣಪತ್ರ | | |

## 18 ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

| | | | |
|---|---|---|---|
| 245 | ಸಂಬಳ ವಿತರಣೆ | ಸರ್ಕಾರದ ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ | 03 -10 |
| 246 | ಕಾಲಮಿತಿ ವೇತನ ಬಡ್ತಿ ಮಂಜೂರಾತಿ | ಸರ್ಕಾರದ ಅಧೀನ ಕಾರ್ಯದರ್ಶಿ | 15 -30 |
| 247 | ಹಿರಿಯ ವೇತನ ಶ್ರೇಣಿ ಬಡ್ತಿ ಮಂಜೂರಾತಿ | | 30 |
| 248 | ವಾರ್ಷಿಕ ಬಡ್ತಿ ಮಂಜೂರಾತಿ | ಶಾಖಾಧಿಕಾರಿ | 15 |
| 249 | ಗಳಿಕೆ ರಜಾ /ಪರಿವರ್ತಿತ ರಜಾ ಮಂಜೂರಾತಿ | ಸರ್ಕಾರದ ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ | 10-15 |
| 250 | ವೈದ್ಯಕೀಯ ವೆಚ್ಚ ಮರುಪಾವತಿ ಮಂಜೂರಾತಿ | ಸರ್ಕಾರದ ಅಧೀನ ಕಾರ್ಯದರ್ಶಿ | 30 |
| 251 | ಪ್ರವಾಸ ಭತ್ಯೆ ಕೋರಿಕೆ (ಸ್ವಗ್ರಾಮ / ರಜಾ ಪ್ರಮಾಣ ರಿಯಾಯಿತಿ/ತರಬೇತಿ ಪ್ರವಾಸ) | | |
| 252 | ಪಿಂಚಣಿ ಪ್ರಸ್ತಾವನೆಯನ್ನು ಮಹಾಲೇಖಪಾಲರಿಗೆ ಕಳುಹಿಸುವುದು | | |
| 253 | GPF ಮುಂಗಡ ಮಂಜೂರಾತಿ | | 15 |
| 254 | ಹಬ್ಬದ ಮುಂಗಡ ಮಂಜೂರಾತಿ | ಶಾಖಾಧಿಕಾರಿ | 07-15 |
| 255 | ಅಂತಿಮ ವೇತನ ಪ್ರಮಾಣಪತ್ರ | ಸರ್ಕಾರದ ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ | 15-10 |
| 256 | ಸೇವಾ ಪುಸ್ತಕವನ್ನು ಕಳುಹಿಸುವುದು | | 15 |
| 257 | ಪರೀಕ್ಷಾರ್ಥ ಸೇವಾವಧಿಯನ್ನು ಘೋಷಿಸುವುದು | ಸರ್ಕಾರದ ಉಪ /ಜಂಟಿ /ಅಪರ/ ಅಧೀನ ಕಾರ್ಯದರ್ಶಿ | 30 |
| 258 | ಸ್ಥಾಪನಾ ಅವಧಿಯನ್ನು ಘೋಷಿಸುವುದು | | |
| 259 | ವೇತನ ಪ್ರಮಾಣಪತ್ರ | ಸರ್ಕಾರದ ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ | 3 |
| 260 | ಅಧ್ಯರ್ಪಿತ ರಜೆಯ ವೇತನ ಮಂಜೂರಾತಿ | ಸರ್ಕಾರದ ಅಧೀನ ಕಾರ್ಯದರ್ಶಿ | 15-30 |
| 261 | ಅರ್ಜಿಯನ್ನು ಸಮುಚಿತ ಮಾರ್ಗದಲ್ಲಿ ರವಾನಿಸುವುದು | ಸರ್ಕಾರದ ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ | 7 |
| 262 | ಸ್ವಗ್ರಾಮ /ರಜಾ ಪ್ರಮಾಣ ರಿಯಾಯಿತಿ ಮಂಜೂರಾತಿ (ನಿಯಮಗಳ ಸಡಿಲಿಕೆ ಇಲ್ಲದೆ) | | 7-15 |
| 263 | ಪ್ರಭಾರ ಭತ್ಯೆ ಮಂಜೂರಾತಿ | ಸರ್ಕಾರದ ಅಧೀನ ಕಾರ್ಯದರ್ಶಿ | 10 |
| 264 | ಬಾಕಿ ವೇತನ ಮಂಜೂರಾತಿ | ಶಾಖಾಧಿಕಾರಿ | 90 |
| 265 | ಅನುಕಂಪದ ಮೇಲೆ ನೇಮಕಾತಿ (ನಾಮನಿರ್ದೇಶನವಿಲ್ಲದೆ /ವಿವಾದಿತ / ನ್ಯಾಯಾಲಯ ಪ್ರಕರಣಗಳನ್ನು ಹೊರತುಪಡಿಸಿ) | ಸರ್ಕಾರದ ಅಧೀನ ಕಾರ್ಯದರ್ಶಿ | |

## ಬನ್ನಿ, ನಿಮ್ಮ ಹಕ್ಕು ಚಲಾಯಿಸಿ

ನಾಗರಿಕರ ಸೇವೆಗಳನ್ನು ನಿಗದಿತ ಸಮಯದಲ್ಲಿ ಪೂರೈಸದಿದ್ದಲ್ಲಿ ಪ್ರತಿದಿನಕ್ಕೆ ರೂ. 20/– ರಿಂದ ರೂ. 500/– ರವರೆಗೆ ಪರಿಹಾರ ಧನವನ್ನು ಸಂಬಂಧಪಟ್ಟ ಅಧಿಕಾರಿಗಳು ನಾಗರಿಕರಿಗೆ ನೀಡಬೇಕು.

**ಸಂಬಂಧಪಟ್ಟ ಇಲಾಖೆಯ ಸಕಾಲ ಕೌಂಟರ್‌ನಲ್ಲಿ ತಮ್ಮ ಅರ್ಜಿಯನ್ನು ಸಲ್ಲಿಸಿ ಗಣಕೀಕೃತ ಸ್ವೀಕೃತಿ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಳ್ಳಿ**

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಸುಧಾರಣೆ)**

ಸೂಚನೆ : ಸಾರ್ವಜನಿಕರು ತಮ್ಮ ಸದುಪಯೋಗಕ್ಕಾಗಿ ಈ ಪ್ರತಿಯನ್ನು ಕತ್ತರಿಸಿ ಇಟ್ಟುಕೊಳ್ಳುವುದು

Department of Printing, Stationery and Publications, Bangalore